
ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ಇಂಡಿಯನ್ ಪ್ರೀಮಿಯರ್ ಲೀಗ್ 2026ರ ಆವೃತ್ತಿಯ ಉದ್ಘಾಟನಾ ಪಂದ್ಯದಲ್ಲಿ ಸನ್ ರೈಸರ್ಸ್ ಹೈದರಾಬಾದ್ ತಂಡದ ನಾಯಕ ಇಶಾನ್ ಕಿಶನ್ ಅವರ ಸ್ಫೋಟಕ ಬ್ಯಾಟಿಂಗ್ ನೆರವಿನಿಂದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ 202 ರನ್‌ಗಳ ಬೃಹತ್ ಮೊತ್ತದ ಗುರಿ ನೀಡಿದೆ.

29 ಮಾರ್ಚ್ 2026 ಭಾನುವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 19 ಪುಟ-4 ಹಾಸನ E-mail : prajodayahsn@gmail.com RNI NO: KARKAN/2007/22629



ಎಥೆನಾಲ್‌ಗೆ ಉತ್ತೇಜನ ಸಿಗಲಿ » 2


ನಮ್ಮ ವಿರುದ್ಧ ನಾವೇ ಸಾರಿದ ಯುದ್ಧ! » 3


ಸಮಾಜದ ಅಭಿರುಚಿ ಸಾಗುತ್ತಿರುವ ದಾರಿ ಆತಂಕಕಾರಿ » 4


### ಇಂದು ದೇವೇಗೌಡರ ಭೇಟಿ



**ಹಾಸನ:** ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರು ಭಾನುವಾರ ಬೆಳಿಗ್ಗೆ 11 ಗಂಟೆಗೆ ಹೆಲಿಕ್ಯಾಪ್ಟರ್ ಮೂಲಕ ಹೊಳೆನರಸೀಪುರ ತಾಲ್ಲೂಕಿನ ಸ್ವಗ್ರಾಮ ಹರದನಹಳ್ಳಿಗೆ ಆಗಮಿಸುವರು. ತಾಲ್ಲೂಕಿನ ಬಸವನಾಯಕನಹಳ್ಳಿ ಗ್ರಾಮಕ್ಕೆ ತೆರಳಿ, ತಮ್ಮ ಸಹೋದರಿ ದಿ||ಜವರಮ್ಮ ಅವರ ಪುಣ್ಯಾರಾಧನೆ ಕಾರ್ಯದಲ್ಲಿ ಭಾಗವಹಿಸುವರು. ನಂತರ ಬೆಂಗಳೂರಿಗೆ ತೆರಳುವರು.

### ಎಎಸ್‌ಪಿ ತಮ್ಮಯ್ಯಗೆ ಮುಖ್ಯಮಂತ್ರಿ ಪದಕ



**ಬೆಂಗಳೂರು:** ಪೊಲೀಸ್ ಇಲಾಖೆಯಲ್ಲಿ ಅಸಾಧಾರಣ ಸೇವೆ ಮತ್ತು ದಕ್ಷತೆ ಮೆರೆದ 153 ಪೊಲೀಸ್ ಅಧಿಕಾರಿ ಹಾಗು ಸಿಬ್ಬಂದಿಗೆ 2025 ನೇ ಸಾಲಿನ ಪ್ರತಿಷ್ಠಿತ ಮುಖ್ಯಮಂತ್ರಿ ಪದಕ ಪ್ರಕಟವಾಗಿದ್ದು ಹಾಸನದ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಎಂ.ಕೆ.ತಮ್ಮಯ್ಯ ಭಾಜನರಾಗಿದ್ದಾರೆ. ಏ.2 ರಂದು ಬೆಂಗಳೂರಿನಲ್ಲಿ ನಡೆಯಲಿರುವ ಸಮಾರಂಭದಲ್ಲಿ ಪದಕ ಪ್ರದಾನ ಮಾಡಲಾಗುವುದು. ಒಟ್ಟು 153 ಮಂದಿಯ ಪಟ್ಟಿಯಲ್ಲಿ 6 ಐಪಿಎಸ್ ಅಧಿಕಾರಿಗಳು ಸ್ಥಾನ ಪಡೆದಿದ್ದಾರೆ.

# ಸಂಘರ್ಷ ಎದುರಿಸಲು ಭಾರತ ಸನ್ನದ್ಧ

## ದೇಶದ ಜನರ ಹಿತಾಸಕ್ತಿ ರಕ್ಷಣೆಗೆ ಕ್ರಮ: ಪ್ರಧಾನಿ ನರೇಂದ್ರ ಮೋದಿ ವಾಗ್ದಾನ

• ಪ್ರಜೋದಯ ವರದಿ

**ನವದೆಹಲಿ:** ಪಶ್ಚಿಮ ಏಷ್ಯಾದಲ್ಲಿನ ಯುದ್ಧವು ಹಲವು ಸವಾಲುಗಳನ್ನು ಒಡ್ಡುತ್ತಿದ್ದು, ಭಾರತ ತನ್ನೆಲ್ಲ ಶಕ್ತಿಯೊಂದಿಗೆ ಸಮರ್ಥವಾಗಿ ಎದುರಿಸುತ್ತಿದೆ. ದೇಶದ ಜನರ ಹಿತಾಸಕ್ತಿ ರಕ್ಷಣೆಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದರು.

ಶನಿವಾರ ಉತ್ತರ ಪ್ರದೇಶದ ನೊಯ್ಡಾ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಉದ್ಘಾಟಿಸಿ ಮಾತನಾಡಿದ ಅವರು, ಪ್ರಸಕ್ತ ಬಿಕ್ಕಟ್ಟನ್ನು ದೇಶದ ಜನರು ಶಾಂತ ಚಿತ್ತ, ತಾಳ್ಮೆ ಹಾಗು ಒಗ್ಗಟ್ಟಿನಿಂದ ಎದುರಿಸಬೇಕು. ಇದು ಜಾಗತಿಕ ಬಿಕ್ಕಟ್ಟು ಆಗಿದ್ದರೂ ಭಾರತದ ಹಿತಾಸಕ್ತಿಗಳ ರಕ್ಷಣೆಯೇ ನಮ್ಮ ಆದ್ಯತೆಯಾಗಬೇಕು. ಇದೇ ನಮ್ಮ ದೊಡ್ಡ ಶಕ್ತಿ ಎಂದು ತಿಳಿಸಿದರು.

ಪಶ್ಚಿಮ ಏಷ್ಯಾ ಯುದ್ಧದಿಂದಾಗುತ್ತಿರುವ ಪರಿಣಾಮಗಳ ಕುರಿತು ಸಂಸತ್‌ನ ಲ್ಲಿಯೂ ಚರ್ಚಿಸಿದ್ದೇನೆ. ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳೊಂದಿಗೂ ಸಮಾಲೋಚನೆ ನಡೆಸಿರುವೆ. ಇಂತಹ ಸಂಕಷ್ಟದ ಸಮಯದಲ್ಲಿ ರಾಜಕೀಯ ಪಕ್ಷಗಳು, ವಿಶೇಷವಾಗಿ ಉತ್ತರ ಪ್ರದೇಶದಲ್ಲಿನ ಪಕ್ಷಗಳು ಬೇಜವಾಬ್ದಾರಿಯುತ ಹೇಳಿಕೆ ನೀಡುವು ದನ್ನು ನಿಲ್ಲಿಸಬೇಕೆಂದು ಮನವಿ ಮಾಡಿದರು.

ದೇಶದ 140 ಕೋಟಿ ಜನರು ಒಟ್ಟಾಗಿ ಶ್ರಮಿಸಿದಾಗ ವಿಕಸಿತ ಭಾರತ ಕನಸು ಸಾಕಾರಗೊಳ್ಳಲು ಸಾಧ್ಯ. ನಾವು ಒಗ್ಗಟ್ಟಾಗುವುದರಿಂದ ಜಾಗತಿಕ ವಿದ್ಯಮಾನಗಳು ಒಡ್ಡುವ ಸವಾಲುಗಳನ್ನು ಎದುರಿಸಲು ಸಾಧ್ಯ ಎಂದರು.



### ಮತ್ತೊಂದು ಎಲ್‌ಪಿಜಿ ಹೊತ್ತ ಹಡಗು

ಪಶ್ಚಿಮ ಏಷ್ಯಾ ಬಿಕ್ಕಟ್ಟಿನ ನಡುವೆ ಸುರಕ್ಷಿತವಾಗಿ ಹಾರ್ಮುಜ್ ಜಲಸಂಧಿಯನ್ನು ದಾಟಿ 47,000 ಮೆಟ್ರಿಕ್ ಟನ್ ದ್ರವೀಕೃತ ಪೆಟ್ರೋಲಿಯಂ ಅನಿಲ ಹೊತ್ತ ಭಾರತೀಯ ಹಡಗು ಜಗ್ ವಸಂತ್ ಗುಜರಾತ್‌ನ ಜಾಮ್‌ನಗರದ ವದಿನಾರ್ ಬಂದರಿಗೆ ಆಗಮಿಸಿದೆ ಎಂದು ಅಧಿಕಾರಿಯೊಬ್ಬರು ಶನಿವಾರ ತಿಳಿಸಿದ್ದಾರೆ.

230 ಮೀಟರ್ ಉದ್ದದ ಈ ಹಡಗು ಪ್ರಸ್ತುತ 17,600 ಮೆಟ್ರಿಕ್ ಟನ್ ಎಲ್‌ಪಿಜಿಯನ್ನು ಮತ್ತೊಂದು ಹಡಗಿನ ಎಂಟಿ ರೋಸ್ ಗ್ಯಾಸ್‌ಗೆ ವರ್ಗಾಯಿಸುತ್ತಿದೆ. ಈ ಪ್ರಕ್ರಿಯೆಯು ಸುಮಾರು 15 ಗಂಟೆ ತೆಗೆದುಕೊಳ್ಳುವ ನಿರೀಕ್ಷೆಯಿದೆ.

> **ಭಾರತವು ಕಚ್ಚಾ ತೈಲ ಹಾಗು ನೈಸರ್ಗಿಕ ಅನಿಲಕ್ಕಾಗಿ ಕೊಲ್ಲಿ ರಾಷ್ಟ್ರಗಳನ್ನು ಅವಲಂಬಿ ಸಿದೆ. ಅಲ್ಲಿನ ಬಿಕ್ಕಟ್ಟಿನಿಂದಾಗಿ ಕಂಡುಬರುತ್ತಿರುವ ಹೊರೆಯನ್ನು ದೇಶದ ಜನರ ಮೇಲೆ ಬೀಳದಂತೆ ಸರ್ಕಾರ ಅಗತ್ಯ ಕ್ರಮ ತೆಗೆದುಕೊಳ್ಳುತ್ತಿದೆ.**
> **-ನರೇಂದ್ರ ಮೋದಿ, ಪ್ರಧಾನಿ**

### ಸೌದಿ ದೊರೆ ಜೊತೆ ಪ್ರಧಾನಿ ಮಾತುಕತೆ

ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ಸೌದಿ ಅರೇಬಿಯಾದ ದೊರೆ ಮತ್ತು ಪ್ರಧಾನಿ ಮೊಹಮ್ಮದ್ ಬಿನ್ ಸಲ್ಮಾನ್ ಅವರೊಂದಿಗೆ ಮಾತನಾಡಿದ್ದು, ಯುದ್ಧದ ಬಗ್ಗೆ ಚರ್ಚಿಸಿದ್ದಾರೆ. ಪಶ್ಚಿಮ ಏಷ್ಯಾ ಪ್ರದೇಶದ ಇಂಧನ ಮೂಲಸೌಕರ್ಯದ ಮೇಲಿನ ಇರಾನ್ ದಾಳಿಯನ್ನು ಭಾರತ ಖಂಡಿಸುತ್ತದೆಂದು ಹೇಳಿದ್ದಾರೆ.

ಸೌದಿ ಅರೇಬಿಯಾದ ಕ್ರೌನ್‌ಪ್ರಿನ್ಸ್ ಮತ್ತು ಪ್ರಧಾನಿ ಮೊಹಮ್ಮದ್ ಬಿನ್ ಸಲ್ಮಾನ್ ಅವರೊಂದಿಗೆ ಮಾತನಾಡಿದೆ. ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಸಂಘರ್ಷದ ಬಗ್ಗೆ ಚರ್ಚಿಸಿದೆ. ಪ್ರಾದೇಶಿಕ ಇಂಧನ ಮೂಲಸೌಕರ್ಯದ ಮೇಲಿನ ದಾಳಿಯನ್ನು ಭಾರತ ಖಂಡಿಸುತ್ತದೆಂದು ನಾನು ಪುನರುಚ್ಚರಿಸಿದೆಂದು ಪ್ರಧಾನಿ ತಮ್ಮ ಎಕ್ಸ್ ಖಾತೆಯಲ್ಲಿ ಪೋಸ್ಟ್ ಮಾಡಿದ್ದಾರೆ.

ಸಂಚಾರ ಸ್ವಾತಂತ್ರ್ಯವನ್ನು ಖಚಿತಪಡಿಸಿಕೊಳ್ಳುವ ಮತ್ತು ಹಡಗು ಮಾರ್ಗಗಳನ್ನು ಮುಕ್ತ ಹಾಗು ಸುರಕ್ಷಿತವಾಗಿಡುವ ಅಗತ್ಯವನ್ನು ನಾವು ಒಪ್ಪಿಕೊಂಡಿದ್ದೇವೆ. ಈ ಕಷ್ಟದ ಸಮಯದಲ್ಲಿ ಭಾರತೀಯ ಸಮುದಾಯದ ಯೋಗಕ್ಷೇಮವನ್ನು ನೋಡಿಕೊಂಡಿದ್ದಕ್ಕಾಗಿ ನಾನು ಅವರಿಗೆ ಧನ್ಯವಾದ ಅರ್ಪಿಸಿದೆ ಎಂದು ಮಾಹಿತಿ ನೀಡಿದ್ದಾರೆ.

## ಏರುತ್ತಲೇ ಇದೆ ಆಟೋ ಗ್ಯಾಸ್ ದರ: ಆಕ್ರೋಶ



• ಪ್ರಜೋದಯ ವರದಿ

**ಬೇಲೂರು:** ಪಟ್ಟಣದಲ್ಲಿ ಸಿಎನ್‌ಜಿ ಮತ್ತು ಆಟೋ ಗ್ಯಾಸ್ ದರದಲ್ಲಿ ನಿರಂತರ ಏರಿಕೆ ಹಿನ್ನಲೆ ಆಟೋ ಚಾಲಕರು ಹಾಗು ಖಾಸಗಿ ಗ್ಯಾಸ್ ಬಂಕ್ ಸಿಬ್ಬಂದಿ ನಡುವೆ ಶನಿವಾರ ವಾಗ್ವಾದ ನಡೆಯಿತು.

ಪ್ರತಿ ಕೆಜಿಗೆ 84.95 ರಿಂದ ಏಕಾಏಕಿ 99.95 ರೂ.ಗೆ ಬೆಲೆ ಏರಿಸಲಾಗಿದೆ. ಸ್ಥಳದಲ್ಲಿ ಜಮಾಯಿಸಿದ ಆಟೋ ಚಾಲಕರು, ವಾರದಿಂದ ಸಿಎನ್‌ಜಿ ದರವನ್ನು ಹಂತ ಹಂತವಾಗಿ ಹೆಚ್ಚಿಸಿರುವುದನ್ನು ಖಂಡಿಸಿದರು.

ಚಾಲಕರು-ಮಾಲೀಕರ ಮನವಿ ಮೇರೆಗೆ ಸ್ಥಳೀಯ ಶಾಸಕ ಹೆಚ್.ಕೆ. ಸುರೇಶ್ ಅವರು, ಕಂಪನಿ ಜೊತೆ ಚರ್ಚಿಸಿ ಆರಂಭದ ದರವನ್ನೇ ಮುಂದುವರಿಸಿ, ಸರ್ಕಾರದ ಹೊಸ ಸುತ್ತೋಲೆ ಬಂದ ನಂತರ ಹೊಸ ದರ ನಿಗದಿಪಡಿಸಿ ಎಂದರು.

ಮೊದಲು 70-75 ರೂ. ಇದ್ದ ದರವನ್ನು 80-85 ರೂ.ಗೆ ಏರಿಸಿ ಇದೀಗ ಏಕಾಏಕಿ 100 ರೂ.ಗೆ ಏರಿಸಿರುವುದು ಖಂಡನೀಯ. ಒಂದೇ ತಿಂಗಳಲ್ಲಿ ಐದಾರು ಬಾರಿ ದರ ಹೆಚ್ಚಿಸಲಾಗಿದೆ. ನಾವು ದಿನಪೂರ್ತಿ ದುಡಿದರೂ ಖರ್ಚು ತೀರಿಸಲು ಸಾಧ್ಯವಾಗುತ್ತಿಲ್ಲ. ಬೆಲೆ ಏರಿಕೆಯಿಂದ ಜೀವನ ನಡೆಸುವುದು ಕಷ್ಟವಾಗಿದೆಯೆಂದು ಆಟೋ ಚಾಲಕರು ಅಳಲು ತೋಡಿಕೊಂಡರು.

ಪ್ರಯಾಣ ದರ ಹೆಚ್ಚಿಸಿದರೆ ಸಾರ್ವಜನಿಕರು ಬರುವುದಿಲ್ಲ. ಮೊದಲೇ ಆಟೋಗಳನ್ನು ಸಾಲ ಮಾಡಿ ಖರೀದಿಸಿರುತ್ತೇವೆ. ಹೀಗಾದರೆ ಸಾಲದ ಕಂತು ಪಾವತಿಸುವುದು ಹೇಗೆ ಎಂದು ಸಂಕಷ್ಟ ತೋಡಿಕೊಂಡರು.

ಹೊಯ್ಸಳ ಆಟೋ ಚಾಲಕರು ಮತ್ತು ಮಾಲೀಕರ ಸಂಘದ ಅಧ್ಯಕ್ಷ ದೀಪು ಅವರು ಮಾತನಾಡಿ, ಚಾಲಕರ ಜೀವನ ಗಮನದಲ್ಲಿಟ್ಟುಕೊಂಡು ಸರ್ಕಾರ ಹಾಗು ಕಂಪನಿಗಳು ತಕ್ಷಣ ಕ್ರಮ ಕೈಗೊಳ್ಳಬೇಕು. ಇಲ್ಲವಾದರೆ ಪ್ರತಿಭಟನೆ ಅನಿವಾರ್ಯ ಎಂದು ಎಚ್ಚರಿಕೆ ನೀಡಿದರು.

ಸಂಘದ ಉಪಾಧ್ಯಕ್ಷ ಶೌಕತ್, ಗೌರವ ಅಧ್ಯಕ್ಷ ಪುಟ್ಟರಾಜು, ಸದಸ್ಯರಾದ ರಘು, ಮಂಜುನಾಥ್, ಚಂದ್ರು, ಅರುಣ್, ಆಲಿ, ಯೋಗೇಶ್, ಮಲ್ಲೇಶ್ ಇದ್ದರು.

# ಯುದ್ಧ ಪರಿಣಾಮ: ಕಾಫಿ ಧಾರಣೆಯಲ್ಲಿ ಚೇತರಿಕೆ

## ಫೆಬ್ರವರಿಯಲ್ಲಿ ಕುಸಿತ ಕಂಡಿದ್ದ ದರ | 1,000 ರಿಂದ 1,800 ರೂ.ವರೆಗೆ ಹೆಚ್ಚಳ

• ಪ್ರಜೋದಯ ವರದಿ

**ಹಾಸನ:** ಅಂತಾರಾಷ್ಟ್ರೀಯ ಮಾರುಕಟ್ಟೆಗೆ ಜಾಗತಿಕ ಕಾಫಿ ಪೂರೈಕೆ ಹೆಚ್ಚಳದಿಂದ ಫೆಬ್ರವರಿ ತಿಂಗಳಲ್ಲಿ ಕುಸಿತ ಕಂಡಿದ್ದ ಕಾಫಿ ಧಾರಣೆ, ಮಧ್ಯಪ್ರಾಚ್ಯ ಯುದ್ಧದ ಪರಿಣಾಮ ಮಾರ್ಚ್ ತಿಂಗಳ ಅಂತ್ಯಕ್ಕೆ ಏರಿಕೆ ಕಂಡಿರುವುದು ಬೆಳೆಗಾರರಿಗೆ ಕೊಂಚ ನಿರಾಳ ತರಿಸಿದೆ.

ಫೆಬ್ರವರಿ ತಿಂಗಳ ಕೊನೆಯ ವಾರದಲ್ಲಿ ಅರೇಬಿಕಾ ಪಾರ್ಚ್‌ಮೆಂಟ್-22,200, ಅರೇಬಿಕಾ ಚೆರಿ-11,800, ರೊಬಸ್ಟಾ ಪಾರ್ಚ್‌ಮೆಂಟ್-17,800, ರೊಬಸ್ಟಾ ಚೆರಿ-8,700 ರೂ. ಗೆ ಕುಸಿತ ಕಂಡು ಬೆಳೆಗಾರರಲ್ಲಿ ಆತಂಕ ತರಿಸಿತ್ತು. ಇದೇ ಬೆಲೆ ಮಾರ್ಚ್ ತಿಂಗಳಲ್ಲೂ ಮುಂದುವರೆದಿದ್ದರಿಂದ ದಾಸ್ತಾನಿಟ್ಟು ಕೊಂಡಿರುವ ಕಾಫಿಯನ್ನು ಮಾರಾಟ ಮಾಡಬೇಕೋ ಬೇಡವೋ ಎಂಬ ಚಿಂತೆಯಲ್ಲೇ ಕಾಫಿ ಬೆಳೆಗಾರರಿದ್ದರು.

ಈ ನಡುವೆ ಇಸ್ರೇಲ್, ಇರಾನ್-ಅಮೇರಿಕಾ ನಡುವೆ ಯುದ್ಧದ ಸಂಘರ್ಷ ತೀವ್ರಗೊಂಡು ಹಾರ್ಮುಜ್ ಸಮುದ್ರ ಮಾರ್ಗ ಮುಚ್ಚಿದ ಪರಿಣಾಮ ಸಾಗಣೆ ವೆಚ್ಚಗಳು ಹೆಚ್ಚಾಗಿ, ಜಾಗತಿಕ ಪೂರೈಕೆ ಒತ್ತಡಕ್ಕೆ ಒಳಗಾದ ಪರಿಣಾಮ ಮಾರ್ಚ್ ತಿಂಗಳ ಕೊನೆಯ ವಾರದಲ್ಲಿ ಬೆಲೆ 1000 ರಿಂದ 1800 ರೂ. ವರೆಗೆ ಬೆಲೆ ಏರಿಕೆ ಕಂಡಿದೆ.

ಕಾಫಿ ಮಾರುಕಟ್ಟೆ ಧಾರಣೆ ಶನಿವಾರ ಅಂತ್ಯಗೊಂಡ ವೇಳೆಗೆ ಅರೇಬಿಕಾ ಪಾರ್ಚ್‌ಮೆಂಟ್- 23,500, ಅರೇಬಿಕಾ ಚೆರಿ-13,000, ರೊಬಸ್ಟಾ ಪಾರ್ಚ್‌ಮೆಂಟ್-18,500, ರೊಬಸ್ಟಾ ಚೆರಿ-10,000ರೂ.ಗೆ ಏರಿಕೆ ಕಂಡಿದೆ.

ಮೇ ತಿಂಗಳ ಐಸಿಇ ಅರೇಬಿಕಾ ಕಾಫಿ ಫ್ಯೂಚರ್ಸ್ +4.58 (+1.61%) ಏರಿಕೆಯಿಂದ ಮುಕ್ತಾಯಗೊಂಡಿತು. ಅದೇ ವೇಳೆ ಐಸಿಇ ರೋಬಸ್ಟಾ ಕಾಫಿ +78 (+2.09%) ಏರಿಕೆಯಿಂದ ದಿನದ ವಹಿವಾಟನ್ನು ಮುಗಿಸಿತು. ಜಾಗತಿಕ ರಾಜಕೀಯ ಉದ್ವಿಗ್ನತೆ ಕಾರಣದಿಂದ ಕಾಫಿ ಬೆಲೆಗಳು ಏರಿಕೆಯಾದೆ. ವಿಶೇಷವಾಗಿ ಇರಾನ್ ಯುದ್ಧದ ಹಿನ್ನಲೆ ಹಾರ್ಮುಜ್ ಜಲಸಂಧಿ ಬಂದ್ ಆಗಿರುವುದು ಜಾಗತಿಕ ಸಾಗಣೆ ವ್ಯವಸ್ಥೆಗೆ ಅಡ್ಡಿಯಾಗುತ್ತಿದೆ. ಈ ಸಮುದ್ರ ಮಾರ್ಗ ಮುಚ್ಚಲ್ಪಟ್ಟಿರುವುದರಿಂದ ಜಾಗತಿಕ ಸಾಗಣೆ ದರಗಳು, ವಿಮಾ ವೆಚ್ಚಗಳು ಮತ್ತು ಇಂಧನ ವೆಚ್ಚಗಳು ಹೆಚ್ಚಾಗಿವೆ. ಇದರ ಪರಿಣಾಮವಾಗಿ ಕಾಫಿ ಆಮದುದಾರರು ಮತ್ತು ರೋಸ್ಟರ್‌ಗಳಿಗೆ ವೆಚ್ಚಗಳು ಕೊಂಚ ಏರಿಕೆಯಾಗಿದೆ. ಯುದ್ಧದ ಪರಿಣಾಮ ಕಾಫಿ ಧಾರಣೆ ಹೀಗೆಯೇ ಇರುತ್ತದೆಂದು ಹೇಳಲು ಸಾಧ್ಯವಾಗುವುದಿಲ್ಲ. ಯುದ್ಧವನ್ನು ಸ್ಥಗಿತಗೊಳಿಸಲು ಉಭಯ ದೇಶಗಳು ಮಾತುಕತೆ ನಡೆಸಲು ಮುಂದಾಗಿವೆ. ಕೆಲವು ದೇಶಗಳಿಗೆ ಹಾರ್ಮುಜ್ ಜಲಸಂಧಿ ಮುಕ್ತವಾಗಿರುವುದರಿಂದ ವ್ಯಾಪಾರ ವಾಹಿ ವಾಟಿಗೆ ಯಾವುದೇ ಅಡ್ಡಿ ಇಲ್ಲ ವೆಂದು ಇರಾನ್ ಸ್ಪಷ್ಟಪಡಿಸಿರುವುದ ರಿಂದ ಬೆಲೆ ಏರಿಕೆ ಕಾಣುತ್ತದೋ ಅಥವಾ ಸ್ಥಿರವಾಗಿರುತ್ತದೆಯೋ ಎಂದು ಊಹಿಸಲು ಸಾಧ್ಯವಾಗದ ಸ್ಥಿತಿಗೆ ತಲುಪಿದೆ.





### ಶನಿವಾರದ ಕಾಫಿ ಧಾರಣೆ: 50 ಕೆ.ಜಿ.ಗೆ

| ಟ್ರೇಡರ್ | ಎಪಿ | ಎಸಿ | ಆರ್‌ಪಿ | ಆರ್‌ಸಿ |
|---|---|---|---|---|
| ವೆಸ್ಟರ್ನ್ ಕಾಫಿ | 23,500 | 13,000 | 18,500 | 10,000 |
| ಲಿಖಿತ್‌ಕಾಫಿ ಸಕಲೇಶಪುರ | 23,300 | 12,500 | 18,500 | 9,500 |
| ಗೀತಾ ಕಾಫಿ ಸಕಲೇಶಪುರ | 23,350 | 12,600 | 18,400 | 9,450 |
| ಬಾಳುಪೇಟೆ | 23,500 | 12,500 | 18,500 | 9,500 |
| ಗ್ರೈನ್‌ಕಾಫಿ ಸಕಲೇಶಪುರ | 23,400 | 12,400 | 18,500 | 9,500 |
| ಸಂಗಮ್ ಚಿಕ್ಕಮಗಳೂರು | 23,500 | 12,000 | 17,900 | 9,200 |
| ಸತ್ಯಕಾಫಿ ಚಿಕ್ಕಮಗಳೂರು | 23,300 | 13,000 | 18,500 | 9,900 |
| ಸಾರಾಗೋಲ್ಡ್ ಚಿಕ್ಕಮಗಳೂರು | 23,100 | 12,200 | 18,200 | 9,900 |

# ಮಹಿಳೆಯರಿಗೆ ಹೆಚ್ಚಿನ ರಾಜಕೀಯ ಸ್ಥಾನಮಾನ ಅವಶ್ಯ

## ಆಕಾಶವಾಣಿ ಉದ್ಘೋಷಕಿ ಸುಜಲಾ ದೇವಿ ಅಭಿಮತ

• ಪ್ರಜೋದಯ ವರದಿ

**ಹಾಸನ:** ಎಲ್ಲಾ ಕ್ಷೇತ್ರಕ್ಕೂ ಪ್ರಮುಖವಾಗಿರುವ ರಾಜಕೀಯ ರಂಗದಲ್ಲಿ ಮಹಿಳೆಯರು ಹೆಚ್ಚಿನ ಅವಕಾಶ ಮತ್ತು ಉನ್ನತ ಸ್ಥಾನಮಾನಗಳನ್ನು ಪಡೆದುಕೊಳ್ಳಲು ಮುಂದಾಗಬೇಕೆಂದು ಹಾಸನ ಆಕಾಶವಾಣಿ ಉದ್ಘೋಷಕಿ ಸುಜಲಾ ದೇವಿ ಅವರು ಕರೆ ನೀಡಿದರು.

ನಗರದ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಶನಿವಾರ ಸಂಜೆ ಕರ್ನಾಟಕ ರಾಜ್ಯ ಮಹಿಳಾ ಸರ್ಕಾರಿ ನೌಕರರ ಸಂಘದಿಂದ ಹಮ್ಮಿಕೊಂಡಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಮತ್ತು ಸೇವಾ ಸಮ್ಮಾನ್ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಮಾತನಾಡಿದ ಅವರು, ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಉನ್ನತ ಸ್ಥಾನದಲ್ಲೇ ಇದ್ದಾರೆ. ಆದರೂ ಅವರಿಗೆ ರಾಜಕೀಯ ವ್ಯಕ್ತಿಗಳಿಂದ ತೊಂದರೆಯಾಗುತ್ತಿದೆ. ಮಹಿಳೆಯರು ರಾಜಕೀಯ ಕ್ಷೇತ್ರದಲ್ಲಿ ಹೆಚ್ಚಿನ ಅವಕಾಶಗಳನ್ನು ಪಡೆದುಕೊಳ್ಳುವತ್ತ ಗಮನಹರಿಸಬೇಕೆಂದು ಹೇಳಿದರು.



ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಶೇ.50 ರಷ್ಟು ರಾಜಕೀಯ ಮೀಸಲಾತಿ ಇದೆ. ಅದು ವಿಧಾನಸಭೆ, ಲೋಕಸಭೆಗೂ ಅನ್ವಯವಾಗುವಂತೆ ಮಾಡಬೇಕು. ಗ್ರಾಮ ಪಂಚಾಯಿತಿ, ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಮಾತ್ರವಲ್ಲದೇ ಇನ್ನೂ ಮೇಲ್ಮಟ್ಟದಲ್ಲೂ ಮಹಿಳೆಯರು ಹೆಚ್ಚಿನ ಅವಕಾಶ ಪಡೆದುಕೊಳ್ಳು ವಂತಾಗಬೇಕು ಎಂದರು.

ಎಲ್ಲರೂ ಹೇಳುವಂತೆ ಮಹಿಳೆಯರು ಪ್ರಸ್ತುತ ದಿನಗಳಲ್ಲಿ ಎಲ್ಲಾ ಕ್ಷೇತ್ರಗಳಲ್ಲಿ ಪುರುಷರಿಗೆ ಸರಿಸಮಾನ ಸ್ಥಾನಮಾನಗಳನ್ನು ಪಡೆದುಕೊಂಡು ಸಾಧನೆ ಮಾಡಿದ್ದಾರೆ. ಎಲ್ಲಾ ಕ್ಷೇತ್ರದಲ್ಲಿ ಎಷ್ಟು ಪ್ರಮಾಣದಲ್ಲಿ ಅವಕಾಶ ಸಿಕ್ಕಿದೆ ಎಂಬುದನ್ನು ನಮಗೆ ನಾವೇ ಕೇಳಿಕೊಳ್ಳಬೇಕು. ಶೇ.50 ರಷ್ಟು ಅವಕಾಶಗಳು ಎಲ್ಲಾ ರಂಗದಲ್ಲೂ ಮಹಿಳೆಯರಿಗೆ ಸಿಕ್ಕಿದೆಯೇ ಎಂದು ಪ್ರಶ್ನಿಸಿದರು.

ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ಜಿಲ್ಲಾಧ್ಯಕ್ಷ ಕೆ.ಆರ್.ಶ್ರೀನಿವಾಸ್ ಅವರು ಮಾತನಾಡಿ, ಈ ಹಿಂದೆ ಮಹಿಳೆಯರು ಅಬಲೆಯರಾಗಿದ್ದರು. ಪ್ರಸ್ತುತ ದಿನಮಾನಗಳಲ್ಲಿ ಸಬಲರಾಗಿ ಸಮಾಜದ ಎಲ್ಲಾ ರಂಗದಲ್ಲೂ ಪ್ರಗತಿ ಸಾಧಿಸಿದ್ದಾರೆ. ಮಹಿಳೆಯರನ್ನು ಪುರುಷರು ಗೌರವಿಸುವ ಕೆಲಸವಾಗುತ್ತಿದೆ. ಒಬ್ಬ ಪುರುಷನ ಯಶಸ್ಸಿನ ಹಿಂದೆ ಮಹಿಳೆ ಇರುವಂತೆ, ಇಂದು ಯಶಸ್ವಿ ಮಹಿಳೆಯ ಹಿಂದೆ ಪುರುಷನ ಶ್ರಮ-ಸಹಕಾರವೂ ಇದೆ.

» ನಾಲ್ಕನೇ ಪುಟದಲ್ಲಿ

### ಮನೆ ಕೆಲಸ ಪುರುಷರಿಗೂ ಹಂಚಿ

ಮಹಿಳೆಯರು ದುಡಿಯುವ ಹಕ್ಕನ್ನು ಪಡೆದುಕೊಂಡಿದ್ದೇವೆ. ಮನೆಯ ಒಳಗೂ ದುಡಿಯ ಬೇಕು, ಮನೆಯ ಹೊರಗೂ ದುಡಿಯಬೇಕು. ಹಾಗಾಗಿ ಮಹಿಳೆಯರು ಇನ್ನೂ ಹೆಚ್ಚಿನ ಒತ್ತಡದಲ್ಲಿ ಸಿಲುಕಿದ್ದಾರೆ. ಅಂದರೆ ನಿಮಗಿನ್ನೂ ಕೆಲಸವನ್ನು ಸಮಾನವಾಗಿ ಹಂಚಿಕೆ ಮಾಡಿಕೊಳ್ಳಲು ಬರುತ್ತಿಲ್ಲ. ಪುರುಷರು ಕಚೇರಿ ಕೆಲಸ ಮಾಡಿಕೊಂಡು ಮನೆಗೆ ಬಂದು ಟಿವಿ ನೋಡುತ್ತಾ ವಿಶ್ರಾಂತಿ ತೆಗೆದುಕೊಳ್ಳುತ್ತಾರೆ. ಮಹಿಳೆ ಹೊರಗಿನ ಕೆಲಸ ಮುಗಿಸಿಕೊಂಡು ಬಂದು ಮನೆಯ ಕೆಲಸ, ಮಕ್ಕಳ ಪೋಷಣೆ ಯನ್ನೂ ಮಾಡಬೇಕು. ಆದ್ದರಿಂದ ಮಹಿಳೆಯರು ಮನೆ ಕೆಲಸವನ್ನು ಪುರುಷರಿಗೂ ಹಂಚಬೇಕೆಂದು ಸುಜಲಾ ದೇವಿ ಅವರು ಪ್ರತಿಪಾದಿಸಿದರು.

## ಸಿಡಿಲು ಬಡಿದು ಐವರು ಕಾರ್ಮಿಕರಿಗೆ ಗಾಯ

• ಪ್ರಜೋದಯ ವರದಿ



**ಸಕಲೇಶಪುರ:** ಸಿಡಿಲು ಬಡಿದು ಕಾಫಿ ತೋಟದಲ್ಲಿ ಕೆಲಸ ಮಾಡುತ್ತಿದ್ದ ಐವರು ಮಹಿಳಾ ಕೂಲಿ ಕಾರ್ಮಿಕರು ಗಾಯಗೊಂಡಿರುವ ಘಟನೆ ತಾಲ್ಲೂಕಿನ ಹರಗರಹಳ್ಳಿ ಗ್ರಾಮದಲ್ಲಿ ಶನಿವಾರ ನಡೆದಿದೆ. ಕುದುರಂಗಿ ಗ್ರಾಮದ ರೂಪ, ಸುಮಿತ್ರ, ಜಯಮ್ಮ ಸೇರಿ ಇನ್ನಿಬ್ಬರು ಸಿಡಿಲು ಬಡಿದು ಗಾಯಗೊಂಡಿದ್ದಾರೆ.

ಹರಗರಹಳ್ಳಿ ಗ್ರಾಮ ಸಮೀಪದ ದೀನಹಳ್ಳಿ ಎಸ್ಟೇಟ್‌ನ ಕಾಫಿ ತೋಟ ದಲ್ಲಿ ಔಷಧಿ ಸಿಂಪಡಿಸುವ ಕೆಲಸದಲ್ಲಿ ತೊಡಗಿದ್ದ ವೇಳೆ ಏಕಾಏಕಿ ಮಳೆ ಸುರಿದಿದೆ. ಈ ಸಂದರ್ಭ ದಲ್ಲಿ ಜೋರಾಗಿ ಸಿಡಿಲು ಬಡಿದ ಪರಿಣಾಮ ಐದು ಕಾರ್ಮಿಕರು ಗಾಯಗೊಂಡಿದ್ದಾರೆ. ರೂಪ ಅವರಿಗೆ ಗಂಭೀರ ಗಾಯವಾಗಿದ್ದು, ಲಕ್ಷ್ಮಿ, ಸುಮಿತ್ರ ಮತ್ತು ಜಯಮ್ಮ ಅವರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಸಿಡಿಲು ಬಡಿದ ತಕ್ಷಣ ಗಾಯಾಳುಗಳನ್ನು ಸ್ಥಳೀಯರು ಸಮೀಪದ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಿದ್ದಾರೆ.

## ಕಾರು ಡಿಕ್ಕಿ: 8ನೇ ತರಗತಿ ವಿದ್ಯಾರ್ಥಿ ಸಾವು

• ಪ್ರಜೋದಯ ವರದಿ



**ಹೊಳೆನರಸೀಪುರ:** ಕಾರು ಡಿಕ್ಕಿಯಾಗಿ 8ನೇ ತರಗತಿ ವಿದ್ಯಾರ್ಥಿ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಕಾಮಸಮುದ್ರ ಗ್ರಾಮದಲ್ಲಿ ಶನಿವಾರ ನಡೆದಿದೆ.

ಗ್ರಾಮದ ರಾಧಾಕೃಷ್ಣ ಎಂಬುವವರ ಪುತ್ರ ಚಿರಂತ್ ಗೌಡ (14) ಮೃತ ವಿದ್ಯಾರ್ಥಿ. ಹಳೇಕೋಟೆ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ 8ನೇ ತರಗತಿ ಓದುತ್ತಿದ್ದ ಚಿರಂತ್ ಗೌಡ ಪರೀಕ್ಷೆ ಮುಗಿಸಿ ಕೆಎಸ್‌ಆರ್‌ಟಿಸಿ ಬಸ್ ಮೂಲಕ ಊರಿಗೆ ಬಂದಿದ್ದ. ಬಸ್ ಇಳಿದು ರಸ್ತೆ ದಾಟುವಾಗ ವೇಗವಾಗಿ ಬಂದ ಮಾರುತಿ ಸುಜುಕಿ ಕಾರು ಗುದ್ದಿದೆ. ಅಪಘಾತದ ರಭಸಕ್ಕೆ ಕಾರಿನ ಚಕ್ರ ವಿದ್ಯಾರ್ಥಿ ಮೇಲೆ ಹರಿದಿದೆ. ಗಂಭೀರ ಗಾಯಗೊಂಡಿದ್ದ ಚಿರಂತ್‌ಗೌಡ ಸ್ಥಳದಲ್ಲೇ ಮೃತಪಟ್ಟಿದ್ದಾನೆ.

ಅಪಘಾತಕ್ಕೆ ರಸ್ತೆ ವಿಭಜಕದ ಮೇಲೆ ಬೆಳೆದು ನಿಂತ ಕುರುಚಲು ಗಿಡಗಳು ಕಾರಣವಾಗಿದೆ. ಕಾರು ಚಾಲಕನಿಗೆ ಬಾಲಕ ಕಾಣದೆ ಇದ್ದರಿಂದ ವೇಗವಾಗಿ ಚಲಾಯಿಸಿದ್ದಾನೆ. ಮೈಸೂರು- ಹಾಸನ ಹೆದ್ದಾರಿಯಲ್ಲಿ ವಾಹನಗಳು ವೇಗವಾಗಿ ಸಂಚರಿಸುತ್ತವೆ. ಎಷ್ಟೇ ಬಾರಿ ಮನವಿ ಮಾಡಿದರೂ ರಸ್ತೆ ಉಬ್ಬು ಅಳವಡಿಸಿಲ್ಲ. ಕೇಂದ್ರೀಯ ನವೋದಯ ಶಾಲೆ, ಪ್ರಸಿದ್ಧ ದೇವಾಲಯಗಳಿರುವ ಕಾಮಸಮುದ್ರ ಗ್ರಾಮದ ಬಳಿ ಹಂಪ್ಸ್ ಅಗತ್ಯ ಇದೆ. ರಸ್ತೆ ಕಾಮಗಾರಿ ಹೊಣೆ ಹೊತ್ತ ಅಧಿಕಾರಿಗಳು ಆಯಾ ಸ್ಥಳದ ಅಗತ್ಯತೆಗಳನ್ನು ಮನಗಾಣಬೇಕಿತ್ತು ಎಂದು ಮೃತ ಬಾಲಕನ ಚಿಕ್ಕಪ್ಪ ಮೋಹನ್ ಅವರು ಆರೋಪಿಸಿದರು.

ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ರಥೋತ್ಸವ ಸಿದ್ಧತೆ ಪರಿಶೀಲಿಸಿದ ಜಿಲ್ಲಾಧಿಕಾರಿ



• ಪ್ರಜೋದಯ ವರದಿ

**ಬೇಲೂರು:** ವಿಶ್ವ ಪ್ರಸಿದ್ಧ ಚೆನ್ನಕೇಶವ ಸ್ವಾಮಿ ದೇವಾಲಯದ ರಥೋತ್ಸವದ ಅಂಗವಾಗಿ ನಡೆಯುತ್ತಿರುವ ಪೂರ್ವ ಸಿದ್ಧತಾ ಕಾರ್ಯಗಳನ್ನು ಜಿಲ್ಲಾಧಿಕಾರಿ ಕೆ.ಎಸ್.ಲತಾ ಕುಮಾರಿ ಅವರು ಶನಿವಾರ ಪರಿಶೀಲಿಸಿದರು.

ದೇವಾಲಯಕ್ಕೆ ಭೇಟಿ ನೀಡಿದ ಜಿಲ್ಲಾಧಿಕಾರಿಯನ್ನು ದೇವಾಲಯದ ವತಿಯಿಂದ ಸ್ವಾಗತಿಸ ಲಾಯಿತು. ನಂತರ ದೇವಾಲಯದ ಆವರಣ ಹಾಗು ಸುತ್ತಮುತ್ತ ನಡೆಯುತ್ತಿರುವ ಸಿದ್ಧತಾ ಕಾರ್ಯಗಳನ್ನು ಪರಿಶೀಲಿಸಿ ಸಂಬಂಧಿಸಿದ ಅಧಿಕಾರಿಗಳಿಗೆ ಅಗತ್ಯ ಸೂಚನೆಗಳನ್ನು ನೀಡಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಜಿಲ್ಲಾಧಿಕಾರಿ, ಚೆನ್ನ ಕೇಶವಸ್ವಾಮಿ ರಥೋತ್ಸವಕ್ಕೆ ರಾಜ್ಯದ ವಿವಿಧ ಭಾಗಗಳಿಂದ ಮಾತ್ರವಲ್ಲದೆ ಹೊರರಾಜ್ಯಗಳಿಂದಲೂ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವ ನಿರೀಕ್ಷೆ ಇದೆ. ಭಕ್ತರ ಅನುಕೂಲಕ್ಕಾಗಿ ಕುಡಿಯುವ ನೀರು, ಸಾರಿಗೆ ವ್ಯವಸ್ಥೆ ಸೇರಿ ಅಗತ್ಯ ಮೂಲಭೂತ ಸೌಲಭ್ಯ ಗಳನ್ನು ಕಲ್ಪಿಸಲು ಕ್ರಮ ಕೈಗೊಳ್ಳಲಾಗಿದೆಂದು ಹೇಳಿದರು. » ನಾಲ್ಕನೇ ಪುಟದಲ್ಲಿ

### ಧಾರ್ಮಿಕ ಪಾವಿತ್ರ್ಯತೆ ರಕ್ಷಿಸಿ ಎಂದ ಸ್ಥಳೀಯರು | ಸಭೆ ನಡೆಸುವುದಾಗಿ ಶಾಸಕರ ಭರವಸೆ

# ಬೆಟ್ಟದ ಭೈರವೇಶ್ವರ: ಚಿತ್ರೀಕರಣ ನಿಷೇಧಕ್ಕೆ ಹೆಚ್ಚಿದ ಒತ್ತಡ

• ಪ್ರಜೋದಯ ವರದಿ

**ಹಾಸನ:** ಸಕಲೇಶಪುರ ತಾಲ್ಲೂಕಿನ ಬೆಟ್ಟದ ಭೈರವೇಶ್ವರ ದೇವಾಲಯದಲ್ಲಿ ಪ್ರೀ ವೆಡ್ಡಿಂಗ್ ಸೇರಿ ಎಲ್ಲಾ ಬಗೆಯ ಚಿತ್ರೀಕರಣ ನಿಷೇಧಿಸಬೇಕೆಂಬ ಕೂಗು ಕೇಳಿಬಂದಿದೆ.

ಪ್ರವಾಸಿಗರ ನೆಚ್ಚಿನ ತಾಣವಾಗಿರುವ ಭೈರವೇಶ್ವರ ಸ್ವಾಮಿ ದೇವಸ್ಥಾನಕ್ಕೆ ನೂರಾರು ವರ್ಷಗಳ ಇತಿಹಾಸವಿದೆ. ದೇವರ ದರ್ಶನ ಹಾಗು ಸುಂದರ ಪರಿಸರ ವೀಕ್ಷಣೆಗೆ ನಿತ್ಯ ನೂರಾರು ಪ್ರವಾಸಿಗರು ಬರುತ್ತಾರೆ. ಆದರೆ ಸಾಮಾಜಿಕ ಜಾಲತಾಣಗಳಿಂದ ಅತಿಯಾದ ಪ್ರಚಾರ ಹಾಗು ಚಿತ್ರೀಕರಣಕ್ಕೆ ಅದ್ಭುತ ಸ್ಥಳವಾಗಿ ಅದು ಮಾರ್ಪಟ್ಟ ಬಳಿಕ ದೇಗುಲಕ್ಕೆ ಬರುತ್ತಿರುವವರ ಸಂಖ್ಯೆಯಲ್ಲಿ ಏರಿಕೆಯಾ ಗಿದೆ. ಶುಕ್ರವಾರ ಪ್ರೀ ವೆಡ್ಡಿಂಗ್ ಶೂಟ್ ನಡೆಸುವ ವೇಳೆ ಸ್ಥಳೀಯರು ಹಾಗು ಛಾಯಾಗ್ರಾಹಕರ ನಡುವೆ ಗಲಾಟೆ ನಡೆದು ರಾದ್ಧಾಂತಕ್ಕೆ ಕಾರಣವಾಗಿದೆ.

**ಸ್ಥಳೀಯರ ಆಕ್ಷೇಪ ಏನು**

ಪ್ರೀ ವೆಡ್ಡಿಂಗ್ ಶೂಟ್‌ಗೆಂದು ಬರುವ ಛಾಯಾಗ್ರಾಹಕರು ಧಾರ್ಮಿಕ ನಂಬಿಕೆಗೆ ಚ್ಯುತಿ ತರುತ್ತಿದ್ದಾರೆನ್ನುವುದು ಸ್ಥಳೀಯರ ಆರೋಪ. ದೇವಾಲಯ ಆವರಣದಲ್ಲಿ ಚಪ್ಪಲಿ ಧರಿಸಿ ಓಡಾಡುವುದು, ವಿವಾಹ ಪೂರ್ವ ಜೋಡಿಗಳನ್ನು ಫೋಟೋಗಾಗಿ ವಿವಿಧ ತೆರನಾಗಿ ನಿಲ್ಲಿಸುವುದು ಅತಿರೇಕದ ವರ್ತನೆಯಾಗಿದೆ. ಜೊತೆಗೆ ಫೋಟೋ ಶೂಟ್ ಮಾತ್ರವಲ್ಲದೆ ಸಿಗರೇಟ್ ಸೇದುವುದು ಸೇರಿ ಮುಂತಾದ ಚಟುವಟಿಕೆಗಳ ಮೂಲಕ ಅಲ್ಲಿ ಸ್ವಚ್ಛತೆ ಹಾಳು ಮಾಡಲಾಗುತ್ತಿದೆ. ನೂರಾರು ವರ್ಷಗಳ ಇತಿಹಾಸ ಹೊಂದಿ ರುವ ದೇಗುಲದ ಪಾವಿತ್ರ್ಯತೆ ಉಳಿಯಬೇಕೆಂದರೆ ಚಿತ್ರೀಕರಣಕ್ಕೆ ಸಂಪೂರ್ಣ ಕಡಿವಾಣ ಹಾಕಬೇಕೆಂಬ ಒತ್ತಾಯ ಕಳೆದ ಎರಡು ದಿನಗಳಿಂದ ಕೇಳಿಬರುತ್ತಿದೆ.



### ಛಾಯಾಗ್ರಾಹಕರ ಮೇಲೆ ಹಲ್ಲೆ: ಏಳು ಜನರ ಬಂಧನ

ಪ್ರೀ ವೆಡ್ಡಿಂಗ್ ಶೂಟ್ ವೇಳೆ ಛಾಯಾಗ್ರಾಹಕರ ಮೇಲೆ ಹಲ್ಲೆ ನಡೆಸಿದ ಪ್ರಕರಣ ಸಂಬಂಧ ಸಕಲೇಶಪುರ ಗ್ರಾಮಾಂತರ ಠಾಣೆ ಪೊಲೀಸರು ಏಳು ಜನರನ್ನು ಬಂಧಿಸಿದ್ದಾರೆ. ದೇವಾಲಯ ಆವರಣದಲ್ಲಿ ಗಲಾಟೆ ಮಾಡಿರುವುದು ಮಾತ್ರವಲ್ಲದೆ ಪೊಲೀಸ್ ಠಾಣೆ ಎದುರೇ ಫೋಟೋಗ್ರಾಫರ್‌ಗಳ ಮೇಲೆ ಹಲ್ಲೆ ಮಾಡಿರುವುದನ್ನು ಪೊಲೀಸರು ಗಂಭೀರವಾಗಿ ಪರಿಗಣಿಸಿದ್ದಾರೆ. ಅಭಿ, ಪ್ರಶಾಂತ್, ರಕ್ಷಾ, ಅರವಿಂದ್, ಉಚಿತ್, ಪ್ರಜ್ವಲ್ ಹಾಗು ನಿಶಾಂತ್‌ನನ್ನು ವಶಕ್ಕೆ ಪಡೆಯಲಾಗಿದೆ. ಆರೋಪಿಗಳ ವಿರುದ್ಧ ಬಿಎನ್‌ಎಸ್ 109 (ಕೊಲೆ ಯತ್ನ), 115 (ಸ್ವಯಂ ಪ್ರೇರಿತವಾಗಿ ಗಾಯಗೊಳಿಸುವುದು), 351 (ಅಪರಾಧ ಬೆದರಿಕೆ), 352 (ಉದ್ದೇಶಪೂರ್ವಕ ಅವಮಾನ), 189 (ಸರ್ಕಾರಿ ನೌಕರಿಗೆ ಅಡ್ಡಿ), 191 (ಸುಳ್ಳು ಮಾಹಿತಿ ನೀಡುವುದು) ಸೆಕ್ಷನ್ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ.

**ದೇಗುಲಕ್ಕಿದೆ 600 ವರ್ಷಗಳ ಇತಿಹಾಸ**


600 ವರ್ಷಗಳಷ್ಟು ಹಳೆಯ ದೆನ್ನಲಾದ ಕದಂಬರ ಶೈಲಿಯ ವಾಸ್ತುಶಿಲ್ಪವನ್ನು ಹೋಲುವ ದೇವಾಲಯ ಸಕಲೇಶಪುರ ಮತ್ತು ಮೂಡಿಗೆರೆ ತಾಲ್ಲೂಕಿನ ಒಕ್ಕಲಿಗರ ಮನೆದೇವರು.

ಈ ದೇವಾಲಯವನ್ನು ಪಾಂಡವರು ವನವಾಸದ ಸಂದರ್ಭದಲ್ಲಿ ಸ್ಥಾಪಿಸಿದರು ಎನ್ನುವ ಪೌರಾಣಿಕ ಕಥೆಯೂ ಇದೆ. ಕಥೆಗೆ ಸಾಕ್ಷಿಯಾಗಿ ಗುಡಿಯ ಹಿಂದಿರುವ ಬೆಟ್ಟಕ್ಕೆ ಪಾಂಡವರ ಗುಡ್ಡ ಅಂತಲೂ ಕರೆಯುತ್ತಾರೆ. ಇಂಥಾ ದುರ್ಗಮ ಪ್ರದೇಶದಲ್ಲಿರುವ, ಸ್ಥಳೀಯರಿಂದ ಬೆಟ್ಟದ ದೇವ್ರ ಗುಡಿ ಅಂತಲೇ ಕರೆಸಿಕೊಳ್ಳುವ ಪುಟ್ಟ ಸುಂದರ ಗುಡಿಯು ಐತಿಹಾಸಿಕವಾಗಿ, ಧಾರ್ಮಿಕವಾಗಿ ಇವೆರಡೂ ತಾಲ್ಲೂಕಿನ ಜನರಿಗೆ ಅತ್ಯಂತ ಮಹತ್ವದ್ದು. ಹಿಂದೆ ಸರಿಯಾದ » ನಾಲ್ಕನೇ ಪುಟದಲ್ಲಿ



> **ಬೆಟ್ಟದ ಭೈರವೇಶ್ವರ ದೇವಾಲಯದಲ್ಲಾದ ಗಲಾಟೆ ವಿಷಯವನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ಸಾಲು ಸಾಲು ರಜೆ ಇರುವುದರಿಂದ ಅಧಿಕಾರಿಗಳ ಸಭೆ ನಡೆಸಲು ಆಗಿಲ್ಲ. ಮಂಗಳ ವಾರ ಸಭೆ ನಡೆಸಿ ದೇವಾಲಯಕ್ಕೆ ಖಾಯಂ ಭದ್ರತಾ ಸಿಬ್ಬಂದಿ ನಿಯೋಜನೆಗೆ ಕ್ರಮ ವಹಿಸಲಾಗುವುದು. ಚಿತ್ರೀಕರಣ ನಿಷೇಧ ಸಂಬಂಧ ಚರ್ಚಿಸಲಾಗುವುದು.**
> **-ಸಿಮೆಂಟ್ ಮಂಜು, ಶಾಸಕ**

# ಕೈದಿ ನಂಬರ್ 46664



ಸಂಪಾದಕರ ಸದ್ಯಶೋಧನೆ 46664 ಈ ನಂಬರ್ ಅಂದ್ರೆ ಏನು? ಈ ನಂಬರ್ ಕಂಡರೆ ಏನು ನೆನಪಾಗುತ್ತದೆ? ಇದು ಕೇವಲ ಐದು ಅಂಕಿಗಳ ಸಮೂಹವಲ್ಲ. ಈ ಸಂಖ್ಯೆ ದಕ್ಷಿಣ ಆಫ್ರಿಕಾದ ಕರಾಳ ಇತಿಹಾಸ, ಒಬ್ಬ ವ್ಯಕ್ತಿಯ ಅಪ್ರತಿಮ ಹೋರಾಟ ಮತ್ತು ನಂತರದ ದಿನಗಳಲ್ಲಿ ಜಾಗತಿಕ ಆರೋಗ್ಯ ಜಾಗೃತಿಯ ಸಂಕೇತವಾಗಿ ಬದಲಾದ ಮಹಾನ್ ಅಭಿಯಾನವಾಗಿದೆ. 46664 ಈ ಸಂಖ್ಯೆಯು ಮೂಲವು ದಕ್ಷಿಣ ಆಫ್ರಿಕಾದ ರಾಬನ್ ದ್ವೀಪದ ಸೆರೆಮನೆಯಲ್ಲಿದೆ. 1964ರಲ್ಲಿ ವರ್ಣಭೇದ ನೀತಿಯ ವಿರುದ್ಧ ಹೋರಾಡಿದಕ್ಕಾಗಿ ನೆಲ್ಸನ್ ಮಂಡೇಲಾ ಅವರಿಗೆ ಜೀವಾವಧಿ ಶಿಕ್ಷೆ ವಿಧಿಸಲಾಯಿತು. ರಾಬನ್ ದ್ವೀಪದ ಸೆರೆಮನೆಗೆ ಬಂದಾಗ ಮಂಡೇಲಾ ಅವರಿಗೆ ಕೈದಿ ನಂಬರ್ 466 ನೀಡಲಾಯಿತು.

ಹೀಗಾಗಿ ಜೈಲಿನ ನಿಯಮದಂತೆ ಅವರಿಗೆ 466/64 ಎಂಬ ಸಂಖ್ಯೆಯನ್ನು ನೀಡಲಾಯಿತು. ಕೈದಿಯಾದ ನೆಲ್ಸನ್ ಮಂಡೇಲಾ ಅವರ ಹೆಸರನ್ನು ಕರೆಯುವಾಗ, ಅವರ ಹೆಸರನ್ನು ಹೇಳುತ್ತಿರಲಿಲ್ಲ, ಬದಲಿಗೆ 46664 ಎಂದು ಸಂಬೋಧಿಸುತ್ತಿದ್ದರು. ಸುಮಾರು 18 ವರ್ಷಗಳ ಕಾಲ ಅವರು ಇದೇ ಸಂಖ್ಯೆಯ ಅಡಿಯಲ್ಲಿ ಜೈಲಿನಲ್ಲಿ ಕಳೆದರು.

ಬಿಳಿಯರ ಸರಕಾರವು ಅವರ ಹೆಸರನ್ನು ಅಳಿಸಿ ಕೇವಲ ಒಂದು ಸಂಖ್ಯೆಯಾಗಿ ಅವರನ್ನು ಗುರುತಿಸಲು ಬಯಸಿತ್ತು. ಆದರೆ, ಅದೇ ಸಂಖ್ಯೆ ಮುಂದೆ ಜಗತ್ತಿನಾದ್ಯಂತ ಸ್ವಾತಂತ್ರ್ಯದ ಸಂಕೇತವಾಗಿ ಮಾರ್ಪಟ್ಟಿತು. ಮಂಡೇಲಾ ಅವರು ಜೈಲಿನಿಂದ ಬಿಡುಗಡೆಯಾಗಿ, ಅಧ್ಯಕ್ಷರಾಗಿ ನಿವೃತ್ತರಾದ ನಂತರ, ಅವರು ಮತ್ತೊಂದು ಗಂಭೀರ ಸವಾಲನ್ನು ಎದುರಿಸಬೇಕಾಯಿತು.

ಅದು ದಕ್ಷಿಣ ಆಫ್ರಿಕಾವನ್ನು ಕಾಡುತ್ತಿದ್ದ ಎಚ್ಐವಿ/ಏಡ್ಸ್ ಸಾಂಕ್ರಾಮಿಕ. 2002ರಲ್ಲಿ, ಮಂಡೇಲಾ ಅವರು ಈ ಮಾರಕ ಕಾಯಿಲೆಯ ಬಗ್ಗೆ ಜಾಗೃತಿ ಮೂಡಿಸಲು ಮತ್ತು ಸಂಶೋಧನೆಗೆ ಹಣ ಸಂಗ್ರಹಿಸಲು ತಮ್ಮ ಹಳೆಯ ಜೈಲು ಸಂಖ್ಯೆಯನ್ನೇ ಅಭಿಯಾನದ ಹೆಸರಾಗಿ ಬಳಸಲು ನಿರ್ಧರಿಸಿದರು.


ಇದಕ್ಕಾಗಿ ನೆಲ್ಸನ್ ಮಂಡೇಲಾ ಫೌಂಡೇಶನ್ ಅಡಿಯಲ್ಲಿ 46664 ಎಂಬ ಜಾಗತಿಕ ಅಭಿಯಾನವನ್ನು ಪ್ರಾರಂಭಿಸಲಾಯಿತು. ಈ ಅಭಿಯಾನದ ಅತ್ಯಂತ ದೊಡ್ಡ ಆಕರ್ಷಣೆಯೆಂದರೆ ಜಾಗತಿಕ ಮಟ್ಟದ ಸಂಗೀತ ಕಛೇರಿಗಳು. ಏಡ್ಸ್ ಕೇವಲ ರೋಗವಲ್ಲ, ಅದು ಮಾನವ ಹಕ್ಕುಗಳ ಪ್ರಶ್ನೆ ಎಂದು ಮಂಡೇಲಾ ಸಾರಿದರು.

ಕೇಪ್ ಟೌನ್‌ನಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಬಾಬ್ ಗೆಲ್ಡಾಫ್, ಕ್ವೀನ್, ಬೊನೊ ಮತ್ತು ಬೆಯಾನ್ಸೆಯಂಥ ಜಾಗತಿಕ ತಾರೆಗಳು ಪಾಲ್ಗೊಂಡಿದ್ದರು. ಅಭಿಯಾನದ ಭಾಗವಾಗಿ, ಜನರು ಸಣ್ಣ ಪ್ರಮಾಣದ ದೇಣಿಗೆ ನೀಡಲು 46664 ಎಂಬ ಸಂಖ್ಯೆಗೆ ಕರೆ ಮಾಡುವ ವ್ಯವಸ್ಥೆ ಮಾಡಲಾಗಿತ್ತು.

ಮಂಡೇಲಾ ಅವರೇ ಸ್ವತಃ ಆ ಧ್ವನಿ ಸಂದೇಶದಲ್ಲಿ ನಾನು ಕೇವಲ 46664 ಸಂಖ್ಯೆಯ ಕೈದಿಯಾಗಿದ್ದೆ ಎಂದು ಹೇಳುವ ಮೂಲಕ ಜನರ ಮನ ತಟ್ಟಿದರು. ಈ ಅಭಿಯಾನವು ಕೇವಲ ಸಂಗೀತಕ್ಕೆ ಸೀಮಿತವಾಗಿರಲಿಲ್ಲ. ಇದು ಮೂರು ಪ್ರಮುಖ ಗುರಿಗಳನ್ನು ಹೊಂದಿತ್ತು.

ಮೊದಲನೆಯದು, ಸಾಮಾಜಿಕ ಕಳಂಕವನ್ನು ಹೋಗಲಾಡಿಸುವುದು. ಏಡ್ಸ್ ಪೀಡಿತರನ್ನು ಸಮಾಜವು ನೋಡುವ ದೃಷ್ಟಿಕೋನವನ್ನು ಬದಲಿಸುವುದು. ಎರಡನೆಯದು, ಔಷಧದ ಲಭ್ಯತೆ. ಬಡರಾಷ್ಟ್ರಗಳ ಜನರಿಗೆ ಅಗ್ಗದ ದರದಲ್ಲಿ ಆಂಟಿ-ರೆಟ್ರೋವೈರಲ್ (ಅ) ಔಷಧಗಳು ಸಿಗುವಂತೆ ಮಾಡುವುದು. ಹಾಗೂ ಮೂರನೆಯದು, ಯುವಜನರ ಸಬಲೀಕರಣ.

> 46664 ಈ ಸಂಖ್ಯೆಯು ಮೂಲವು ದಕ್ಷಿಣ ಆಫ್ರಿಕಾದ ರಾಬನ್ ದ್ವೀಪದ ಸೆರೆಮನೆಯಲ್ಲಿದೆ. 1964ರಲ್ಲಿ ವರ್ಣಭೇದ ನೀತಿಯ ವಿರುದ್ಧ ಹೋರಾಡಿದಕ್ಕಾಗಿ ನೆಲ್ಸನ್ ಮಂಡೇಲಾ ಅವರಿಗೆ ಜೀವಾವಧಿ ಶಿಕ್ಷೆ ವಿಧಿಸಲಾಯಿತು. ರಾಬನ್ ದ್ವೀಪದ ಸೆರೆಮನೆಗೆ ಬಂದಾಗ ಮಂಡೇಲಾ ಅವರಿಗೆ ಕೈದಿ ನಂಬರ್ 466 ನೀಡಲಾಯಿತು.



ಯುವಪೀಳಿಗೆಗೆ ಸುರಕ್ಷಿತ ಜೀವನಶೈಲಿಯ ಬಗ್ಗೆ ಶಿಕ್ಷಣ ನೀಡುವುದು. ಮಂಡೇಲಾ ಅವರು ತಮ್ಮ ಸ್ವಂತ ಮಗ ಮಕ್ಗಾತೋ ಮಂಡೇಲಾ ಏಡ್ಸ್‌ನಿಂದ ಮೃತಪಟ್ಟಾಗ, ಅದನ್ನು ಮುಚ್ಚಿಡದೇ ಬಹಿರಂಗವಾಗಿ ಘೋಷಿಸಿದರು. ಇದು ರೋಗದ ಬಗ್ಗೆ ಇದ್ದ ಮುಜುಗರವನ್ನು ಹೋಗಲಾಡಿಸುವಲ್ಲಿ ದೊಡ್ಡ ಪಾತ್ರ ವಹಿಸಿತು.

ಈ ಅಭಿಯಾನವು ದಕ್ಷಿಣ ಆಫ್ರಿಕಾದ ಗಡಿ ದಾಟಿ ಜಗತ್ತಿನಾದ್ಯಂತ ಹರಡಿತು. ಲಂಡನ್‌ನ ಹೈಡ್ ಪಾರ್ಕ್‌ನಿಂದ ಹಿಡಿದು ನ್ಯೂಯಾರ್ಕ್‌ನವರೆಗೆ ಈ ಅಭಿಯಾನದ ಅಡಿಯಲ್ಲಿ ಕಾರ್ಯಕ್ರಮಗಳು ನಡೆದವು. ಮಂಡೇಲಾ ಅವರ ಜನ್ಮದಿನವಾದ ಜುಲೈ 18 ಅನ್ನು ಮಂಡೇಲಾ ದಿನ ಎಂದು ಆಚರಿಸಲು ಈ ಅಭಿಯಾನವು ಪ್ರೇರಣೆಯಾಯಿತು.

ಇಂದು 46664 ಎಂಬುದು ಸಾಮಾಜಿಕ ನ್ಯಾಯ, ಹೋರಾಟ ಮತ್ತು ಮಾನವೀಯತೆಯ ಜಾಗತಿಕ ಬ್ರ್ಯಾಂಡ್ ಆಗಿದೆ. ಮಂಡೇಲಾ ಅವರು ದೈಹಿಕವಾಗಿ ನಮ್ಮೊಂದಿಗಿಲ್ಲದಿದ್ದರೂ, ಈ ಸಂಖ್ಯೆಯ ಮೂಲಕ ಅವರು ಆರಂಭಿಸಿದ ಮಾನವೀಯ ಕಾರ್ಯಗಳು ಇಂದಿಗೂ ಅನೇಕ ಸಂಘಟನೆಗಳ ಮೂಲಕ ಮುಂದುವರಿಯುತ್ತಿವೆ.

ನೆಲ್ಸನ್ ಮಂಡೇಲಾ ಅವರು ಒಂದು ಕಾಲದಲ್ಲಿ ತಮ್ಮನ್ನು ಬಂಧಿಯಾಗಿಸಿದ್ದ ಸಂಖ್ಯೆಯನ್ನೇ (46664) ಲಕ್ಷಾಂತರ ಜನರ ಜೀವ ಉಳಿಸುವ ಮತ್ತು ಸ್ವಾತಂತ್ರ್ಯ ನೀಡುವ ಅಸ್ತ್ರವನ್ನಾಗಿ ಬದಲಿಸಿದರು. ಇದು ಒಬ್ಬ ವ್ಯಕ್ತಿಯ ದೃಢಸಂಕಲ್ಪವು ನಕಾರಾತ್ಮಕತೆಯನ್ನು ಹೇಗೆ ಸಕಾರಾತ್ಮಕ ಬದಲಾವಣೆಯನ್ನಾಗಿ ಪರಿವರ್ತಿಸಬಲ್ಲದು ಎಂಬುದಕ್ಕೆ ಅತ್ಯುತ್ತಮ ಉದಾಹರಣೆಯಾಗಿದೆ.

**– ವಿಶ್ವೇಶ್ವರ** ಭಟ್

# ಎಥೆನಾಲ್‌ಗೆ ಉತ್ತೇಜನ ಸಿಗಲಿ

> » ವಿಶ್ವವು ಇಂದು ಪ್ರತಿಯೊಂದು ಕೆಲಸ-ಕಾರ್ಯಗಳಿಗೆ ಪೆಟ್ರೋಲಿಯಂ ಉತ್ಪನ್ನಗಳ ಮೇಲೆ ಅವಲಂಬಿತವಾಗಿದೆ. ಆದರೆ ಇವುಗಳ ಅತಿಯಾದ ಬಳಕೆಯಿಂದಾಗಿ ಪರಿಸರವು ಹದಗೆಡುತ್ತಿರುವುದು ಸುಳ್ಳೇನಲ್ಲ. ಇದನ್ನು ಗಂಭೀರವಾಗಿ ಪರಿಗಣಿಸಿರುವ ಭಾರತ ಮತ್ತು ವಿಶ್ವದ ಹಲವು ದೇಶಗಳು ಜೀವಸಂಕುಲದ ಆರೋಗ್ಯಕ್ಕಾಗಿ ಪರಿಸರ ಮಾಲಿನ್ಯವನ್ನು ತಡೆಗಟ್ಟಲು ಪ್ರಯತ್ನಿಸುತ್ತಿವೆ.

ಕೃಷಿರಂಗ

ಪ್ರಸ್ತುತ ಉಲ್ಬಣಿಸಿರುವ ಮಧ್ಯಪ್ರಾಚ್ಯ ಯುದ್ಧದ ಬಿಕ್ಕಟ್ಟು ವಿಶ್ವವನ್ನು ತಲ್ಲಣಗೊಳಿಸಿದೆ. ಕಾರಣ, ವಿಶ್ವದ ಬಹುತೇಕ ಭಾಗವು ಮಧ್ಯಪ್ರಾಚ್ಯದಲ್ಲಿನ ಕಚ್ಚಾತೈಲ ಮತ್ತು ಹೊರ್ಮುಜ್ ಜಲಸಂಧಿಯ ಮೇಲೆ ಅವಲಂಬಿತವಾಗಿದೆ. ಇವೆರಡು ಸೇವೆಗಳು ಸಾರ್ವಜನಿಕವಾಗಿ ಸರಳವಾದಲ್ಲಿ ಮಾತ್ರ ಪ್ರಪಂಚವು ಸುಖಿಯಾಗಿರುತ್ತದೆ ಎಂದರೆ ತಪ್ಪಾಗಲಿಕ್ಕಿಲ್ಲ.

ಸದ್ಯ ಇವೆರಡು ಅತ್ಯಂತ ಬಿಗುವಿನ ವಾತಾವರಣದಿಂದ ಕೂಡಿರುವುದರಿಂದ ಜಗತ್ತಿನ ಸಾರಿಗೆ-ಸಂಪರ್ಕ ಹಾಗೂ ಆಮದು-ರಫ್ತು ಸೇರಿದಂತೆ ಬಹುತೇಕ ಅಂತರಾಷ್ಟ್ರೀಯ ವ್ಯಾಪಾರ ಚಟುವಟಿಕೆಗಳು ತೊಂದರೆಯಲ್ಲಿವೆ.

ವಿಶ್ವವು ಇಂದು ಪ್ರತಿಯೊಂದು ಕೆಲಸ-ಕಾರ್ಯಗಳಿಗೆ ಪೆಟ್ರೋಲಿಯಂ ಉತ್ಪನ್ನಗಳ ಮೇಲೆ ಅವಲಂಬಿತವಾಗಿದೆ. ಆದರೆ ಇವುಗಳ ಅತಿಯಾದ ಬಳಕೆಯಿಂದಾಗಿ ಪರಿಸರವು ಹದಗೆಡುತ್ತಿರುವುದು ಸುಳ್ಳೇನಲ್ಲ. ಇದನ್ನು ಗಂಭೀರವಾಗಿ ಪರಿಗಣಿಸಿರುವ ಭಾರತ ಮತ್ತು ವಿಶ್ವದ ಹಲವು ದೇಶಗಳು ಜೀವಸಂಕುಲದ ಆರೋಗ್ಯಕ್ಕಾಗಿ ಪರಿಸರ ಮಾಲಿನ್ಯವನ್ನು ತಡೆಗಟ್ಟಲು ಪ್ರಯತ್ನಿಸುತ್ತಿವೆ.

ಇದರ ಭಾಗವಾಗಿ ಸೌರಶಕ್ತಿ, ನವೀಕರಿಸಬಹುದಾದ ಇಂಧನಗಳು, ಪವನಶಕ್ತಿ, ಹಸಿರು ಇಂಧನಗಳು ಮತ್ತು ಎಥೆನಾಲ್‌ಗಳ ಬಳಕೆಯು ಪ್ರಾಮುಖ್ಯವನ್ನು ಪಡೆದಿದೆ. ಪ್ರಸ್ತುತ ಭಾರತದಲ್ಲಿ ಲಭ್ಯವಿರುವ ವಿವಿಧ ನೈಸರ್ಗಿಕ ಸಂಪನ್ಮೂಲಗಳನ್ನು ಅತ್ಯಂತ ಅಚ್ಚು ಕಟ್ಟಾಗಿ ಬಳಸುತ್ತಿರುವುದು ಶ್ಲಾಘನೀಯವಲ್ಲದೆ ಅಭಿವೃದ್ಧಿಶೀಲ ರಾಷ್ಟಗಳಿಗೆ ಮಾದರಿಯಾಗಿದೆ.

ಇವುಗಳಲ್ಲಿ ಪರಿಸರಸ್ನೇಹಿ ಇಂಧನವಾಗಿರುವ ಎಥೆನಾಲ್ ಉತ್ಪಾದನೆಗೆ ಭಾರತದಲ್ಲಿ ವಿಪುಲ ಅವಕಾಶಗಳಿವೆ. ಆರ್ಥಿಕ ಸಂಕಷ್ಟದಲ್ಲಿರುವ ಸಕ್ಕರೆ ಉದ್ದಿಮೆಯನ್ನು ಕಾಪಾಡಲು, ನಷ್ಟದಲ್ಲಿರುವ ರೈತರನ್ನು ಸಂರಕ್ಷಿಸಲು, ಹೆಚ್ಚುತ್ತಿರುವ ಪರಿಸರ ಮಾಲಿನ್ಯವನ್ನು ತಡೆಗಟ್ಟಲು ಹಾಗೂ ವಿದೇಶಿ ವಿನಿಮಯವನ್ನು ಉಳಿಸಲು ಕೇಂದ್ರ ಸರಕಾರವು 2018ರ ವರ್ಷದಿಂದ ಬ್ರೆಜಿಲ್ ಮಾದರಿಯಂತೆ ಎಥೆನಾಲ್ ಉತ್ಪಾದಿಸಲು ಸಕ್ಕರೆ ಕಾರ್ಖಾನೆಗಳಿಗೆ ಅನುಮತಿ ನೀಡಿತು.

ಇದು ಸರಕಾರಕ್ಕೆ, ರೈತರಿಗೆ ಮತ್ತು ಸಕ್ಕರೆ ಕಾರ್ಖಾನೆಗಳಿಗೆ ಐತಿಹಾಸಿಕ ತಿರುವನ್ನು ತಂದು ಕೊಟ್ಟಿತು. ಕಬ್ಬು ಮತ್ತು ಧಾನ್ಯಗಳು ಎಥೆನಾಲ್ ಉತ್ಪಾದಿಸಲು ಅವಶ್ಯವಿರುವ ಪ್ರಮುಖ ಕಚ್ಚಾವಸ್ತುಗಳಾಗಿವೆ. ಕಳೆದ ಎರಡು ದಶಕಗಳಿಂದ ಭಾರತದಲ್ಲಿ ಇವುಗಳ ಉತ್ಪಾದನೆಯು ಹೆಚ್ಚಳವಾಗಿದೆ.

ಭಾರತದಲ್ಲಿ ಅಂದಾಜು 60 ದಶಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಕಬ್ಬು ಬೆಳೆದು ಅಂದಾಜು 500 ಮಿಲಿಯನ್ ಟನ್ ಕಬ್ಬು ಉತ್ಪಾದಿಸಲಾಗುತ್ತಿದೆ. ಇದರಿಂದ 360 ಲಕ್ಷ ಟನ್ ಸಕ್ಕರೆ ಅಥವಾ 24000 ಕೋಟಿ ಲೀಟರ್ ಎಥೆನಾಲ್ ಅನ್ನು ಉತ್ಪಾದಿಸಬಹುದಾಗಿದೆ. ಆದರೆ ಸದ್ಯ ಭಾರತದಲ್ಲಿ ಒಟ್ಟಾರೆ 360 ಲಕ್ಷ ಟನ್ ಸಕ್ಕರೆ ಉತ್ಪಾದಿಸಿದರೆ ಸಕ್ಕರೆ ದರದಲ್ಲಿ ಕುಸಿತವಾಗಿ ಕಬ್ಬು ಬೆಳೆಗಾರರಿಗೆ ದರ ಪಾವತಿಸಲು ವಿಳಂಬವಾಗುವ ಅಪಾಯವಿದೆ; ಅದರಂತೆ 24000 ಕೋಟಿ ಲೀಟರ್‌ನಷ್ಟು ಎಥೆನಾಲ್ ಅನ್ನು ಉತ್ಪಾದಿಸಲು ಹಾಗೂ ಬಳಸಲು ಭಾರತದಲ್ಲಿ ಸೂಕ್ತ ವ್ಯವಸ್ಥೆಗಳಿಲ್ಲ.

ಭಾರತವು ವಿಶ್ವದಲ್ಲಿಯೇ ಅತಿಹೆಚ್ಚು ಅಂದರೆ 260 ಲಕ್ಷ ಟನ್ ಸಕ್ಕರೆಯನ್ನು ಗೃಹ ಬಳಕೆಯಲ್ಲಿ ಬಳಸುವ ದೇಶವಾಗಿರುವುದರಿಂದ ಒಟ್ಟು 360 ಲಕ್ಷಟನ್ ಸಕ್ಕರೆ ಉತ್ಪಾದನೆಯ ಬದಲಾಗಿ 260 ಲಕ್ಷಟನ್ ಸಕ್ಕರೆಯನ್ನು ಮಾತ್ರ ಉತ್ಪಾದಿಸಿ ಉಳಿದ 100 ಲಕ್ಷ ಟನ್ ಸಕ್ಕರೆಯ ಉತ್ಪಾದನೆಯ ಬದಲಾಗಿ ಅಂದಾಜು 7000 ಕೋಟಿ ಲೀಟರ್‌ನಷ್ಟು ಎಥೆನಾಲ್ ಉತ್ಪಾದನೆ ಮಾಡಬಹುದು.






ಪ್ರಸಕ್ತ ವರ್ಷ 330 ಲಕ್ಷ ಟನ್ ಸಕ್ಕರೆ ಮತ್ತು ಇನ್ನುಳಿದ 30 ಲಕ್ಷ ಟನ್ ಸಕ್ಕರೆಯ ಬದಲಾಗಿ 2000 ಕೋಟಿ ಲೀಟರ್‌ನಷ್ಟು ಎಥೆನಾಲ್ ಉತ್ಪಾದನೆಯನ್ನು ನಿರೀಕ್ಷಿಸಲಾಗುತ್ತಿದೆ. ಪ್ರಸ್ತುತ ಭಾರತದಲ್ಲಿ 380 ಡಿಸ್ಟಿಲರಿ ಘಟಕಗಳಿಂದ 2000 ಕೋಟಿ ಲೀಟರ್‌ನಷ್ಟು ಎಥೆನಾಲ್ ಉತ್ಪಾದಿಸಿ ಶೇ.20ರವರೆಗೆ ಪೆಟ್ರೋಲ್‌ನಲ್ಲಿ ಮಿಶ್ರಣಗೊಳಿಸಲಾಗುತ್ತಿದೆ. ಇದರಿಂದ ಸರಕಾರಕ್ಕೆ 1.5 ಲಕ್ಷ ಕೋಟಿ ರು. ವಿದೇಶಿ ವಿನಿಮಯ ಸಂಗ್ರಹವಾಗಿದೆ.

ಭಾರತದ ಅರ್ಥವ್ಯವಸ್ಥೆಗೆ ಇದೊಂದು ಮಹಾನ್ ಶಕ್ತಿಯಾಗಿದೆ. ಭಾರತವನ್ನು ಆರ್ಥಿಕವಾಗಿ ಮತ್ತಷ್ಟು ಪ್ರಬಲಗೊಳಿಸಲು ಅವಕಾಶವಿರುವ ಒಟ್ಟು 24000 ಕೋಟಿ ಲೀಟರ್‌ನಷ್ಟು ಎಥೆನಾಲ್ ಉತ್ಪಾದಿಸಿ ಅಂದಾಜು 18 ಲಕ್ಷ ಕೋಟಿ ರು. ವಿದೇಶಿ ವಿನಿಮಯ ಸಂಗ್ರಹಿಸುವತ್ತ ಕೇಂದ್ರ ಸರಕಾರವು ಚಿಂತನೆ ನಡೆಸಬೇಕಾಗಿದೆ.

ಸದ್ಯ ಸಂಭವಿಸುತ್ತಿರುವ ಬಿಕ್ಕಟ್ಟುಗಳು ಭವಿಷ್ಯದಲ್ಲಿಯೂ ಮುಂದುವರಿಯುವ ಅಪಾಯಗಳಿವೆ ಹಾಗೂ ಶೀಘ್ರದಲ್ಲಿಯೇ ತೈಲಬಾವಿಗಳು ಖಾಲಿಯಾಗುವ ಸೂಚನೆಗಳಿರುವ ಹಿನ್ನೆಲೆಯಲ್ಲಿ ಕಡಿಮೆ ಖರ್ಚಿನ ಪರಿಸರಸ್ನೇಹಿ ಇಂಧನವಾಗಿರುವ ಎಥೆನಾಲ್ ಉತ್ಪಾದನೆಗೆ ಭಾರತದಲ್ಲಿ ಮುಕ್ತ ಅವಕಾಶ ದೊರೆಯಬೇಕು. ಈಗ ತಲೆದೋರಿರುವ ಮಧ್ಯಪ್ರಾಚ್ಯ ಯುದ್ಧದ ಬಿಕ್ಕಟ್ಟಿನ ಸಮಯವು ಎಥೆನಾಲ್ ವಿಷಯದಲ್ಲಿ ಕೇಂದ್ರ ಸರಕಾರವು ಐತಿಹಾಸಿಕ ನಿರ್ಣಯ ಕೈಗೊಳ್ಳಲು ಸಕಾಲವಾಗಿದೆ.

ಬ್ರೆಜಿಲ್ ಮತ್ತು ಅಮೆರಿಕ ರಾಷ್ಟಗಳಂತೆ ಭಾರತದಲ್ಲಿಯೂ ಎಥೆನಾಲ್ ಮಿಶ್ರಣ ಪ್ರಮಾಣವನ್ನು ಇನ್ನಷ್ಟು ಹೆಚ್ಚಿಸಬೇಕು ಮತ್ತು ಡೀಜೆಲ್‌ನಲ್ಲಿಯೂ ಎಥೆನಾಲ್ ಅನ್ನು ಮಿಶ್ರಣಗೊಳಿಸಿ ಭಾರತವನ್ನು ಇಂಧನ ಸ್ವಾವಲಂಬಿ ದೇಶವನ್ನಾಗಿ ಪರಿವರ್ತಿಸಬೇಕು.

ಈಗಾಗಲೇ ಭಾರತದಲ್ಲಿ ಎಥೆನಾಲ್‌ಗೆ ಸರಿಹೊಂದುವ ವಾಹನಗಳನ್ನು ತಯಾರಿಸಲಾಗುತ್ತಿದೆಯಲ್ಲದೆ ಎಥೆನಾಲ್ ಬಳಕೆಯ ವಿಷಯದಲ್ಲಿದ್ದ ಗೊಂದಲಗಳಿಗೆ ಸುಪ್ರೀಂ ಕೋರ್ಟ್ ಸಹ ಪೂರಕವಾದ ತೀರ್ಪನ್ನು ನೀಡಿದೆ. ಅದರಂತೆ ಎಥೆನಾಲ್ ಆಧಾರಿತ ಸ್ಟವ್‌ಗಳನ್ನು ದೇಶಾದ್ಯಂತ ಪರಿಚಯಿಸಿ ಎಥೆನಾಲ್ ಬಳಕೆಯನ್ನು ಮತ್ತಷ್ಟು ವಿಸ್ತರಿಸಬಹುದಾಗಿದೆ.

ಇದಕ್ಕಾಗಿ ಎಥೆನಾಲ್ ಕಾರ್ಖಾನೆಗಳಿಗೆ ಸಹಾಯ, ಸಹಕಾರ ಮತ್ತು ಸಹಾಯಧನವನ್ನು ಒದಗಿಸಬೇಕು. ಇದರಿಂದ ಪರಿಸರದ ಸಂರಕ್ಷಣೆಯಾಗುವುದಲ್ಲದೆ ಮನುಕುಲದ ಆರೋಗ್ಯವು ಸುಧಾರಿಸುತ್ತದೆ.

**– ಬಸವರಾಜ** ಶಿವಪ್ಪ ಗಿರಗಾಂವಿ

# ಹಣ್ಣಿನ ವ್ಯಾಪಾರಿ ಮತ್ತು ಗ್ರಾಹಕ.

ಸೀತಮ್ಮ ರಸ್ತೆಬದಿಯ ಹಣ್ಣಿನ ವ್ಯಾಪಾರಿ, ಆಗಲೇ ಆಕೆಗೆ 60 ವಯಸು ದಾಟಿತ್ತು, ಆದರೂ ಹೊಟ್ಟೆಪಾಡಿಗಾಗಿ ಮಳೆ ಬಿಸಿಲು ಗಾಳಿಯನ್ನು ಲೆಕ್ಕಿಸದೆ ರಸ್ತೆಬದಿಯ ಗಾಡಿಯಲ್ಲಿ ಕಿತ್ತಳೆ ಹಣ್ಣನ್ನು ಮಾರುತ್ತಿದ್ದಳು.

ರಮೇಶ ದಿನಾಲು ಆಕೆಯ ಬಳಿಗೆ ಬಂದು ಕಿತ್ತಳೆ ಹಣ್ಣನ್ನು ಕೊಂಡುಕೊಳ್ಳುತ್ತಿದ್ದನು, ಅದನ್ನು ಕೊಳ್ಳುವ ಮೊದಲು ಪ್ರತಿದಿನ ಹಣ್ಣು ಸಿಹಿಯಾಗಿದೆಯಾ ಇಲ್ಲ ಹುಳಿಯ, ನೋಡುವ ಒಂದು ಹಣ್ಣು ಕೊಡು ಎಂದು ಅದನ್ನು ಸುಲಿದು ಅದರಿಂದ ಸ್ವಲ್ಪವಷ್ಟೆ ತಿಂದು ಏನಿದು ಬಹಳ ಹುಳಿಯಾಗಿದೆ ಎಂದು ಆಕೆಗೆ ಮತ್ತೆ ಕೊಡುತ್ತಿದ್ದ, ಆಕೆ ಅದನ್ನು ತಿಂದು ಇಲ್ಲ ಇದು ಬಹಳ ಸಿಹಿಯಾಗಿದೆ ಅನ್ನುತ್ತಲೇ, ಇಲ್ಲ ನೀನು ಪೂರ್ತಿ ತಿಂದು ನೋಡು, ಅನ್ನುತ್ತಾ ರಮೇಶ ಒಂದು ಕಿಲೋ ಹಣ್ಣನ್ನು ತೆಗೆದುಕೊಂಡು ಹೋಗುವುದು ದಿನಾ ನಡೆಯುತ್ತಿತ್ತು. ಪ್ರತಿ ದಿನವೂ ಹಣ್ಣನ್ನು ಸುಲಿದು ಆಕೆಗೆ ಕೊಟ್ಟು ತನಗೆ ಒಂದು ಕಿಲೋ ಹಣ್ಣನ್ನು ತೆಗೆದುಕೊಳ್ಳುತ್ತಿದ್ದ.

ಇದನ್ನೆಲ್ಲಾ ನೋಡುತ್ತಿದ್ದ ರಮೇಶ ನ ಗೆಳೆಯ ಹೌದು ನೀನು ಯಾಕೆ ಹೀಗೆ ಮಾಡುತ್ತೀಯಾ, ಹಣ್ಣು ಹುಳಿ ಇದೆ ಅನ್ನುತ್ತೀಯಾ ಮತ್ತೆ ಅದೇ ಹಣ್ಣನ್ನು ತೆಗೆದುಕೊಳ್ಳುತ್ತೀಯ, ಯಾಕೆ ಬೇರೆ ಕಡೆಯಲ್ಲಿ ತೆಗೆದುಕೊಳ್ಳಬಾರದು. ಆಗ ರಮೇಶ ಅದು ಹಾಗಲ್ಲ ಆಕೆ ತನ್ನೆದುರು ಅಷ್ಟೆಲ್ಲ ಹಣ್ಣುಗಳನ್ನು ಇಟ್ಟುಕೊಂಡರೂ ಅದರಿಂದ ಒಂದೇ ಒಂದು ಹಣ್ಣನ್ನು ತಿನ್ನುತ್ತಿಲ್ಲ. ಹಾಗಾಗಿ ನಾನು ಸುಲಿದು ಕೊಟ್ಟರೆ ಆಕೆಗೆ ಮತ್ತೆ ಅದನ್ನು ಮಾರಲಿಕ್ಕಾಗದೆ ತಿನ್ನುತ್ತಾಳೆ ಅದಕ್ಕಾಗಿ ಅಷ್ಟೇ.

ರಮೇಶನ ಗೆಳೆಯನಿಗೆ ಈ ಆಟದ ಮರ್ಮ ಅರ್ಥವಾಯಿತು.

ಇತ್ತ ಇದನ್ನೆಲ್ಲಾ ನೋಡುತ್ತಿದ್ದ ಸೀತಮ್ಮನ ಗೆಳತಿ ಸಹ ವ್ಯಾಪಾರಿ, ಏನಿದು ದಿನಾ ಬರುತ್ತಾನೆ ಹಣ್ಣು ಹುಳಿ ಅನ್ನುತ್ತಾನೆ ಮತ್ತೆ ಹಣ್ಣನ್ನು ಕೊಂಡು ಹೋಗುತ್ತಾನೆ ಅನ್ನಲು ಸೀತಮ್ಮ ಅದು ಹಾಗಲ್ಲ ಆತನ ಇಚ್ಚೆ ನಾನು ಒಂದಾದರು ಹಣ್ಣನ್ನು ತಿನ್ನಬೇಕೆಂಬುದು. ಅದಕ್ಕೆ ಸುಮ್ಮಗೆ ಕಾರಣ ಹೇಳುತ್ತಾನೆ, ಆದರೆ ನಾನು ಆತನ ಚೀಲದಲ್ಲಿ ಒಂದು ಕಿಲೋ ಹಣ್ಣಿನ ಜೊತೆಗೆ ಒಂದು ಹಣ್ಣನ್ನು ಕೂಡಿ ಹಾಕುತ್ತೇನೆ, ಅದು ಆತನಿಗೆ ಗೊತ್ತಿಲ್ಲ. ಅವನು ಮಾಡಿದ ಉಪಕಾರಕ್ಕೆ ನಾನು ತಿರುಗಿ ಮಾಡುತ್ತೇನೆ. ಅಷ್ಟೇ.

ನೀತಿ... ನಾವು ಯಾರಿಗಾದರೂ ಉಪಕಾರ ಮಾಡಿದರೆ ಅದು ನಮಗೆ ಬೇರೆ ರೂಪದಲ್ಲಿ ಮತ್ತೆ ದೊರಕುತ್ತದೆ.

**– ಕಮಲಾತನಯ** (ಕಾಪು ಲಕ್ಷ್ಮೀಕಾಂತ ತಂತ್ರಿ)



# ಮರೆವು ಮತ್ತು ಸ್ಮೃತಿ: ಅಂತರಂಗದ ಮೌನ ಸಂವಾದ

ಮಾನವನ ಮನಸ್ಸು ಒಂದು ನದಿ. ಅದರ ಹರಿವು ಕಾಲ. ಅದರ ತೀರಗಳಲ್ಲಿ ನೆಲೆಸಿರುವುದು ಸ್ಮೃತಿಗಳು. ಆ ನದಿಯೊಳಗೆ ಕರಗಿ ಹೋಗುವುದು ಮರೆವು. ಈ ಎರಡರ ಮಧ್ಯೆ ಮಾನವನ ಅಸ್ತಿತ್ವವು ನಿರಂತರವಾಗಿ ರೂಪಾಂತರಗೊಳ್ಳುತ್ತಿರುತ್ತದೆ. ನಾವು ಬದುಕುತ್ತಿರುವೆವು ಎಂದು ಭಾಸವಾಗುವುದು ವರ್ತಮಾನದಲ್ಲಿ, ಆದರೆ ವಾಸ್ತವದಲ್ಲಿ ನಾವು ಬದುಕುವುದು ಸ್ಮೃತಿಗಳ ನೆರಳಿನಲ್ಲಿ. ಒಂದು ವಾಸನೆ, ಒಂದು ಧ್ವನಿ, ಒಂದು ದೃಶ್ಯ ಇವು ಕ್ಷಣದ ವರ್ಷಗಳ ಹಿಂದಿನ ಅನುಭವವನ್ನು ಮತ್ತೆ ಜೀವಂತಗೊಳಿಸುತ್ತವೆ. ಈ ರೀತಿಯಾಗಿ ಸ್ಮೃತಿ ಕಾಲವನ್ನು ಅಳಿಸುತ್ತದೆ. ಭೂತಕಾಲವನ್ನು ವರ್ತಮಾನಕ್ಕೆ ತರಿಸುತ್ತದೆ.


ಆದರೆ ಮನುಷ್ಯನ ಮನಸ್ಸು ಎಲ್ಲವನ್ನೂ ಹಿಡಿದುಕೊಳ್ಳಲು ಸಾಧ್ಯವಿಲ್ಲ. ಅದು ಕೆಲವು ಅನುಭವಗಳನ್ನು ನಿಧಾನವಾಗಿ ಕರಗಿಸಿಕೊಳ್ಳುತ್ತದೆ. ಮರೆವು ಎಂಬ ಮೌನ ಪ್ರಕ್ರಿಯೆ ಅಲ್ಲಿ ಆರಂಭವಾಗುತ್ತದೆ. ಮರೆವು ಎಂದರೆ ಕಳೆದುಕೊಳ್ಳುವುದು ಎಂದು ನಾವು ಭಾವಿಸುತ್ತೇವೆ. ಆದರೆ ಮರೆವು ಎಂದರೆ ಮನಸ್ಸಿನ ಮೌನದಲ್ಲಿ ನಡೆಯುವ ಶುದ್ಧೀಕರಣ.

ಅತಿಯಾದ ನೋವುಗಳನ್ನು, ಭಾರವಾದ ಅನುಭವಗಳನ್ನು, ಮನಸ್ಸು ನಿಧಾನವಾಗಿ ಕರಗಿಸುತ್ತದೆ. ಇದು ಮನಸ್ಸಿನ ಒಳಗಿನ ಕಾಲಚಕ್ರ. ಸ್ಮೃತಿ ಹಿಡಿದುಕೊಳ್ಳುವ ಶಕ್ತಿಯಾದರೆ, ಮರೆವು ಬಿಡುವ ಶಕ್ತಿ. ಈ ಎರಡು ಶಕ್ತಿಗಳ ಸಮತೋಲನವೇ ಮನಸ್ಸಿನ ಆರೋಗ್ಯ.

**ಅಹಂಕಾರವನ್ನೂ ಕಟ್ಟುತ್ತವೆ:** ತತ್ವಶಾಸ್ತ್ರದ ದೃಷ್ಟಿಯಲ್ಲಿ ನೋಡಿದರೆ, ಸ್ಮೃತಿ ಅಸ್ತಿತ್ವವನ್ನು ಕಟ್ಟುತ್ತದೆ. ನಾನು ಎಂಬ ಭಾವನೆ ಸ್ಮೃತಿಗಳಿಂದಲೇ ಹುಟ್ಟುತ್ತದೆ. ನನ್ನ ಹೆಸರು, ನನ್ನ ಸಂಬಂಧಗಳು, ನನ್ನ ಅನುಭವಗಳು ಇವೆಲ್ಲವೂ ಸ್ಮೃತಿಯೇ. ಆದರೆ ಈ ಸ್ಮೃತಿಗಳು ಅಹಂಕಾರವನ್ನೂ ಕಟ್ಟುತ್ತವೆ.

ನನಗೆ ಆಗಿದ್ದ ನೋವು, ನಾನು ಅನುಭವಿಸಿದ ಅವಮಾನ, ನನ್ನ ಸಾಧನೆ ಎನ್ನುವ ಎಲ್ಲವೂ ಮನಸ್ಸನ್ನು ಕಟ್ಟಿ ಹಾಕುತ್ತವೆ. ಹೀಗೆ ಸ್ಮೃತಿ ಬಂಧನವಾಗುತ್ತದೆ. ಧ್ಯಾನ ಪರಂಪರೆಯಲ್ಲಿ ಹೇಳುವ ಒಂದು ಗಂಭೀರ ಸತ್ಯ ಇದೆ- ಸ್ಮೃತಿಗಳಿಂದ ಮುಕ್ತವಾದಾಗ ಮಾತ್ರವೇ ಮನಸ್ಸು ಮೌನವನ್ನು ಅನುಭವಿಸುತ್ತದೆ.





ಅಂದರೆ, ಮರೆವು ಆಧ್ಯಾತ್ಮಿಕ ಅರ್ಥದಲ್ಲಿ ಕೇವಲ ಜೈವಿಕ ಪ್ರಕ್ರಿಯೆಯಲ್ಲ, ಅದು ಅಂತರಂಗದ ವಿಮುಕ್ತಿ. ಆದರೆ ಸಂಪೂರ್ಣ ಮರೆವು ಸಾಧ್ಯವಿಲ್ಲ. ಏಕೆಂದರೆ ಸ್ಮೃತಿಯೇ ಮಾನವ ಜೀವನದ ದಿಕ್ಕು. ಸ್ಮೃತಿ ಇಲ್ಲದ ಮನಸ್ಸಿಗೆ ಅಸ್ತಿತ್ವವೇ ಇಲ್ಲ.

ಹೀಗಾಗಿ ಮನುಷ್ಯನು ಸ್ಮೃತಿಯನ್ನು ಸಂಪೂರ್ಣವಾಗಿ ತ್ಯಜಿಸಲು ಸಾಧ್ಯವಿಲ್ಲ. ಆದ್ದರಿಂದ ಜೀವನದ ಜ್ಞಾನವೆಂದರೆ ಸ್ಮೃತಿಯನ್ನು ಅಳಿಸುವುದಲ್ಲ, ಬದಲಿಗೆ ಅದನ್ನು ಮೃದುವಾಗಿಸುವುದು. ನೋವನ್ನು ನೆನಪಿಟ್ಟುಕೊಂಡರೂ ಅದು ಗಾಯವಾಗದಂತೆ ನೋಡಿ ಕೊಳ್ಳುವುದು. ಅನುಭವವನ್ನು ಉಳಿಸಿಕೊಂಡರೂ ಅದು ಬಂಧನವಾಗದಂತೆ ಕಾಳಜಿ ವಹಿಸುವುದು. ಇಲ್ಲಿಯೇ ಮರೆವಿನ ಸೂಕ್ಷ್ಮ ಪಾತ್ರ ಆರಂಭವಾಗುತ್ತದೆ.

ಮರೆವು ಮನಸ್ಸನ್ನು ಹಗುರಗೊಳಿಸುತ್ತದೆ. ಅದು ಭೂತಕಾಲದ ಭಾರವನ್ನು ಕಡಿಮೆ ಮಾಡುತ್ತದೆ. ಮರೆವು ಇಲ್ಲದೆ ಕ್ಷಮೆ ಸಾಧ್ಯವಿಲ್ಲ, ಮರೆವು ಇಲ್ಲದೆ ಹೊಸ ಸಂಬಂಧಗಳು ಹುಟ್ಟುವುದಿಲ್ಲ. ಮಾನವ ಜೀವನದಲ್ಲಿ ಕೆಲವು ಸ್ಮೃತಿಗಳು ದೀಪಗಳಂತೆ. ಅವು ದಾರಿಯನ್ನು ತೋರಿಸುತ್ತವೆ. ಕೆಲವು ಸ್ಮೃತಿಗಳು ನೆರಳಿನಂತೆ, ಅವು ಮನಸ್ಸನ್ನು ಕತ್ತಲು ಗೊಳಿಸುತ್ತವೆ. ಮರೆವು ಈ ನೆರಳನ್ನು ನಿಧಾನವಾಗಿ ಕರಗಿಸುವ ಬೆಳಕು.


**ಹೊಸ ಒತ್ತಡದ ಸೃಷ್ಟಿ:** ಆಧುನಿಕ ಯುಗದಲ್ಲಿ ಈ ಸಮತೋಲನ ಕಷ್ಟವಾಗುತ್ತಿದೆ. ಮನುಷ್ಯನ ಮಿದುಳು ಮರೆತರೂ, ಹೊರಜಗತ್ತು ಮರೆಯಲು ಬಿಡುವುದಿಲ್ಲ. ಚಿತ್ರಗಳು, ಬರಹಗಳು, ದಾಖಲೆಗಳು, ಸಾಮಾಜಿಕ ಮಾಧ್ಯಮಗಳು, ಡಿಜಿಟಲ್ ಜಗತ್ತು, ಡೇಟಾ ಸಂಗ್ರಹಗಳು ಎಲ್ಲವೂ ನೆನಪುಗಳನ್ನು ಗಟ್ಟಿಗೊಳಿಸುತ್ತಿವೆ. ಹೀಗಾಗಿ ಮರೆವು ಎಂಬ ಮಾನವೀಯ ಅನುಭವವೇ ಕಡಿಮೆಯಾಗುತ್ತಿದೆ.

ಇದು ಮನಸ್ಸಿನ ಮೇಲೆ ಹೊಸ ಒತ್ತಡವನ್ನು ಸೃಷ್ಟಿಸುತ್ತಿದೆ. ಮನುಷ್ಯನು ಮರೆತು ಮುಂದೆ ಸಾಗಲು ಬಯಸುತ್ತಾನೆ. ಆದರೆ ಜಗತ್ತು ಅವನಿಗೆ ನೆನಪಿಸುತ್ತಲೇ ಇರುತ್ತದೆ. ಮನುಷ್ಯ ಮರೆಯಲೆತ್ನಿಸಿದರೂ, ಯಂತ್ರಗಳು ನೆನಪಿಟ್ಟುಕೊಳ್ಳುವ ಈ ಯುಗದಲ್ಲಿ, ನಾವು ಮರೆವೆಂಬ ವರವನ್ನು ದಕ್ಕಿಸಿಕೊಳ್ಳುವುದೇ ಕಷ್ಟವಾಗಿದೆ.

ಜ್ಞಾನವೆಂದರೆ ಕೇವಲ ಹೆಚ್ಚು ನೆನಪಿಟ್ಟುಕೊಳ್ಳುವುದಲ್ಲ, ಯಾವುದನ್ನು ಮರೆತರೆ ಬದುಕು ಸುಂದರವಾಗುತ್ತದೆ ಎಂಬ ಅರಿವು ಕೂಡ. ಈ ಸಂದರ್ಭದಲ್ಲಿ ಒಂದು ಗಂಭೀರ ಪ್ರಶ್ನೆ ಮೂಡುತ್ತದೆ. ಬದುಕು ಎಂದರೆ ಸ್ಮೃತಿಗಳ ಸಂಗ್ರಹವೇ? ಅಥವಾ ಮರೆವಿನ ಸ್ವಾತಂತ್ರ್ಯವೇ? ಬಹುಶಃ ಬದುಕು ಎರಡರ ನಡುವಿನ ಮೌನ. ಸ್ಮೃತಿಗಳಿಲ್ಲದ ದಿಕ್ಕಿಲ್ಲ, ಮರೆವಿಲ್ಲದೆ ಹಗುರತೆ ಇಲ್ಲ. ಕೊನೆಯಲ್ಲಿ ಮನುಷ್ಯ ಅರಿಯುವ ಸತ್ಯ ಇದೇ, ನಾವು ನೆನಪಿಟ್ಟುಕೊಂಡದ್ದು ನಮ್ಮ ಕಥೆ. ನಾವು ಮರೆತು ಬಿಟ್ಟದ್ದು ನಮ್ಮ ಶಾಂತಿ. ಸ್ಮೃತಿ ಕಾಲವನ್ನು ಉಳಿಸುತ್ತದೆ. ಮರೆವು ಮನಸ್ಸನ್ನು ಅರಳಿಸುತ್ತದೆ. ಈ ಎರಡರ ನಡುವಿನ ಸಮತೋಲನವೇ, ಮಾನವ ಜೀವನದ ಮೌನ ಜ್ಞಾನ.

**ಉಪನಿಷತ್ತಿನಲ್ಲಿ ಮರೆವು ಮತ್ತು ಸ್ಮೃತಿ;** ಮಾನವನ ಮನಸ್ಸು ನೆನಪುಗಳ ಮನೆ. ಆದರೆ ಅದೇ ಮನಸ್ಸು ಮರೆವಿನ ದಾರಿಯೂ ಹೌದು. ಒಂದು ಕಡೆ ಅದು ನೆನಪುಗಳನ್ನು ಸಂಗ್ರಹಿಸುತ್ತಾ, ಅನುಭವದ ಸೌಧವನ್ನು ನಿರ್ಮಿಸುತ್ತದೆ. ಇನ್ನೊಂದು ಕಡೆ, ಅದೇ ನೆನಪುಗಳನ್ನು ನಿಧಾನವಾಗಿ ಕರಗಿಸುತ್ತಾ, ಸೌಧವು ಕುಸಿಯದಂತೆ, ಪುನರ್ ನವೀಕರಣಗೊಳಿಸುತ್ತಾ ಸಾಗುತ್ತದೆ. ಈ ಎರಡು ವಿರುದ್ಧ ಶಕ್ತಿಗಳ ನಡುವೆ ಮಾನವನ ಅಂತರಂಗದ ಬದುಕು ರೂಪುಗೊಳ್ಳುತ್ತದೆ.

> ■ ನನಗೆ ಆಗಿದ್ದ ನೋವು, ನಾನು ಅನುಭವಿಸಿದ ಅವಮಾನ, ನನ್ನ ಸಾಧನೆ ಎನ್ನುವ ಎಲ್ಲವೂ ಮನಸ್ಸನ್ನು ಕಟ್ಟಿ ಹಾಕುತ್ತವೆ. ಹೀಗೆ ಸ್ಮೃತಿ ಬಂಧನವಾಗುತ್ತದೆ. ಧ್ಯಾನ ಪರಂಪರೆಯಲ್ಲಿ ಹೇಳುವ ಒಂದು ಗಂಭೀರ ಸತ್ಯ ಇದೆ- ಸ್ಮೃತಿಗಳಿಂದ ಮುಕ್ತವಾದಾಗ ಮಾತ್ರವೇ ಮನಸ್ಸು ಮೌನವನ್ನು ಅನುಭವಿಸುತ್ತದೆ.



ಉಪನಿಷತ್ತುಗಳ ದೃಷ್ಟಿಯಲ್ಲಿ ಈ ಪ್ರಕ್ರಿಯೆ ಕೇವಲ ಮಾನಸಿಕವಲ್ಲ. ಅದು ಅಸ್ತಿತ್ವದ ಗಂಭೀರ ತಾತ್ವಿಕ ಪ್ರಶ್ನೆ. ಉಪನಿಷತ್ತುಗಳು ಮನಸ್ಸನ್ನು ಸಂಸ್ಕಾರಗಳ ಸಂಗ್ರಹ ಎಂದು ನೋಡುತ್ತವೆ. ಪ್ರತಿಯೊಂದು ಅನುಭವವೂ ಮನಸ್ಸಿನಲ್ಲಿ ಒಂದು ಗುರುತನ್ನು ಬಿಡುತ್ತದೆ. ಈ ಗುರುತುಗಳೇ ಸಂಸ್ಕಾರಗಳು. ಸಂಸ್ಕಾರಗಳು ಸೇರಿ ಸ್ಮೃತಿಗಳನ್ನು ರೂಪಿಸುತ್ತವೆ.

ಸ್ಮೃತಿಗಳು ಸೇರಿ ವ್ಯಕ್ತಿತ್ವವನ್ನು ಕಟ್ಟುತ್ತವೆ. ಅಂದರೆ, ನಾವು ಯಾರು? ಎಂಬುದು ನಮ್ಮ ಸ್ಮೃತಿಗಳಿಂದಲೇ ರೂಪುಗೊಳ್ಳುತ್ತದೆ. ಆದರೆ ಉಪನಿಷತ್ತಿನ ಗಂಭೀರ ಪ್ರಶ್ನೆ ಇಲ್ಲಿಂದ ಪ್ರಾರಂಭವಾಗುತ್ತದೆ. ಸ್ಮೃತಿಗಳಿಂದ ರೂಪುಗೊಂಡ ನಾನು ನಿಜವೇ? ಅಥವಾ ಅದು ಮನಸ್ಸಿನ ನಿರ್ಮಿತಿಯೇ? ಧ್ಯಾನಪರಂಪರೆಯಲ್ಲಿ ಹೇಳುವುದು, ನಾನು ಎಂಬ ಭಾವನೆ ಬಹುಪಾಲು ಸ್ಮೃತಿಗಳ ಒಟ್ಟು ರೂಪ. ನನ್ನ ಹೆಸರು, ನನ್ನ ಇತಿಹಾಸ, ನನ್ನ ಸಂಬಂಧಗಳು ಇವೆಲ್ಲವೂ ಸ್ಮೃತಿಗಳ ಮೇಲೆ ನಿಂತಿವೆ. ಈ ಸ್ಮೃತಿಗಳನ್ನು ಕ್ಷಣ ಕ್ಷಣದ ನೆನಪುಗಳಾಗಿ ವಿಭಜಿಸಿ ಇಟ್ಟರೆ, ನಾನು ಎಂಬ ಭಾವನೆ ಕ್ಷೀಣಿಸುತ್ತದೆ. ಇಲ್ಲಿಯೇ ಮರೆವಿನ ತಾತ್ವಿಕ ಅರ್ಥ ಶುರುವಾಗುತ್ತದೆ.

**ಅಹಂಕಾರದ ಸಡಿಲಿಕೆ:** ಮರೆವು ಎಂದರೆ ಕೇವಲ ನೆನಪು ಕಳೆದುಕೊಳ್ಳುವುದು ಅಂತಲ್ಲ, ಅದು ಅಹಂಕಾರದ ಸಡಿಲಿಕೆ. ಮನಸ್ಸು ತನ್ನ ಹಳೆಯ ಗುರುತುಗಳನ್ನು ಬಿಡಲು ಆರಂಭಿಸಿದಾಗ, ನಾನು ಎಂಬ ಕಟ್ಟಡ ನಿಧಾನವಾಗಿ ಕರಗುತ್ತದೆ. ಉಪನಿಷತ್ತುಗಳು ಇದನ್ನೇ ಅಂತರಂಗ ಶುದ್ಧೀಕರಣ ಎಂದು ಸೂಚಿಸುತ್ತವೆ. ಉಪನಿಷತ್ತಿನ ಧ್ಯಾನ ಪರಂಪರೆಯಲ್ಲಿ, ಮನಸ್ಸಿನ ಅಲೆಗಳನ್ನು ಶಾಂತಗೊಳಿಸುವುದು ಮುಖ್ಯ. ಈ ಅಲೆಗಳು ಸ್ಮೃತಿಗಳೇ.

ಪ್ರತಿಯೊಂದು ಸ್ಮೃತಿ ಒಂದು ಅಲೆ. ಈ ಅಲೆಗಳು ಶಾಂತವಾದಾಗ ಮನಸ್ಸು ಮೌನವಾಗುತ್ತದೆ. ಆ ಮೌನದ ಆತ್ಮಸ್ವರೂಪ ಪ್ರತ್ಯಕ್ಷವಾಗುತ್ತದೆ ಎಂದು ತತ್ವಶಾಸ್ತ್ರ ಹೇಳುತ್ತದೆ. ಈ ದೃಷ್ಟಿಯಲ್ಲಿ ಮರೆವು ಒಂದು ಆಧ್ಯಾತ್ಮಿಕ ಪ್ರಕ್ರಿಯೆ. ಅದು ಅನುಭವಗಳನ್ನು ಅಳಿಸುವುದಿಲ್ಲ, ಆದರೆ ಅವುಗಳ ಹಿಡಿತವನ್ನು ಕಡಿಮೆ ಮಾಡುತ್ತದೆ.

ಮನಸ್ಸು ಸ್ಮೃತಿಗಳನ್ನು ಹಿಡಿದುಕೊಳ್ಳದೆ ಬಿಡಲು ಕಲಿತಾಗ, ಅಂತರಂಗ ಹಗುರಗೊಳ್ಳುತ್ತದೆ. ಆದರೆ ಉಪನಿಷತ್ತುಗಳು ಸಂಪೂರ್ಣ ಮರೆವನ್ನೇ ಗುರಿಯನ್ನಾಗಿ ಮಾಡುವುದಿಲ್ಲ. ಏಕೆಂದರೆ ಸ್ಮೃತಿಯೇ ಜ್ಞಾನಕ್ಕೆ ಮೂಲ. ಗುರುಗಳ ಉಪದೇಶ, ಅನುಭವದ ಪಾಠ, ಬದುಕಿನ ಅರಿವು ಇವೆಲ್ಲವೂ ಸ್ಮೃತಿಗಳ ಉಳಿಯುತ್ತವೆ, ಉಳಿಯಬೇಕು ಎನ್ನುವುದು ಮೂಲ ಆಶಯವು ಸಹ.

ಹೀಗಾಗಿ ಉಪನಿಷತ್ತುಗಳು ಸೂಚಿಸುವ ಮಾರ್ಗವೆಂದರೆ ಸ್ಮೃತಿಯನ್ನು ಉಳಿಸಿಕೊಳ್ಳಿ, ಆದರೆ ಅದಕ್ಕೆ ಬಂಧಿಯಾಗಬೇಡಿ. ಈ ಸಮತೋಲನವೇ ಯೋಗದ ಮನೋವಿಜ್ಞಾನ. ನನ್ನದು ಎಂದುಕೊಂಡಾಗ ಸ್ಮೃತಿ ಬಂಧನವಾಗುತ್ತದೆ. ಕೇವಲ ಅನುಭವವಾಗಿ ನೋಡಿದಾಗ ಸ್ಮೃತಿ ಜ್ಞಾನವಾಗುತ್ತದೆ. ಇಲ್ಲಿಯೇ ಮರೆವು ಮತ್ತೊಂದು ರೂಪದಲ್ಲಿ ಕಾಣಿಸುತ್ತದೆ. ಮರೆವು ಎಂದರೆ ಸಂಪೂರ್ಣ ಕಳೆದುಕೊಳ್ಳುವುದಲ್ಲ, ಅದು ಅಹಂಕಾರದಿಂದ ದೂರವಾಗುವುದು ಮಾತ್ರ.

ಒಬ್ಬ ಮನುಷ್ಯ, ತನ್ನ ಹಳೆಯ ಅವಮಾನವನ್ನು ನೆನಪಿಟ್ಟುಕೊಂಡರೂ ಅದು ಅವನನ್ನು ನೋಯಿಸದಿದ್ದರೆ, ಅಲ್ಲಿ ಮರೆವು ನಡೆದಿದೆ. ಅನುಭವ ಉಳಿದಿದೆ, ನೋವು ಕರಗಿದೆ. ಈ ರೀತಿಯ ಮರೆವು ಮನಸ್ಸಿನ ಪರಿಪಕ್ವತೆಯನ್ನು ಸಂಕೇತಿಸುತ್ತದೆ. ಉಪನಿಷತ್ತುಗಳಲ್ಲಿ ಸಾಕ್ಷೀಭಾವ ಎಂಬ ಕಲ್ಪನೆ ಇದೆ.

ಮನುಷ್ಯನು ತನ್ನ ಮನಸ್ಸಿನ ಅಲೆಗಳನ್ನು ಸಾಕ್ಷಿಯಾಗಿ ನೋಡುವಾಗ, ಸ್ಮೃತಿಗಳು ನಿಧಾನವಾಗಿ ತಮ್ಮ ಹಿಡಿತವನ್ನು ಕಳೆದುಕೊಳ್ಳುತ್ತವೆ. ಅವು ಬರುತ್ತವೆ, ಹೋಗುತ್ತವೆ. ಮನಸ್ಸು ಅವನ್ನು ಹಿಡಿದುಕೊಳ್ಳುವುದಿಲ್ಲ. ಈ ಸ್ಥಿತಿಯಲ್ಲಿ ಮರೆವು ಸಹಜವಾಗುತ್ತದೆ. ಅದು ಬಲವಂತದ ಮರೆವು ಅಲ್ಲ, ಮೌನವಾಗಿ ಕರಗುವ ಮರೆವು.

**ಮರೆವು ಅಸ್ತಿತ್ವದ ವಿಮುಕ್ತಿ:** ಆಧುನಿಕ ಜೀವನದಲ್ಲಿ ಸಮಸ್ಯೆ ಏನೆಂದರೆ, ನಾವು ಸ್ಮೃತಿಗಳನ್ನು ಸಂಗ್ರಹಿಸುತ್ತೇವೆ. ಆದರೆ ಅವನ್ನು ಬಿಡಲು ಕಲಿಯುವುದಿಲ್ಲ. ನೋವುಗಳು ವರ್ಷಗಳವರೆಗೆ ಮನಸ್ಸಿನಲ್ಲಿ ಉಳಿಯುತ್ತವೆ. ಅಹಂಕಾರಗಳು ಸ್ಮೃತಿಗಳ ಮೇಲೆ ಕಟ್ಟಲ್ಪಡುತ್ತವೆ. ಇದರಿಂದ ಮನಸ್ಸು ಭಾರವಾಗುತ್ತದೆ. ಉಪನಿಷತ್ತುಗಳ ಸಂದೇಶ ಇಲ್ಲಿ ಪ್ರಸ್ತುತವಾಗುತ್ತದೆ- ಸ್ಮೃತಿಗಳಲ್ಲಿ ಬದುಕಬೇಡಿ, ಅವುಗಳ ಸಾಕ್ಷಿಯಾಗಿ ಉಳಿಯಿರಿ. ಸ್ಮೃತಿ ಅಸ್ತಿತ್ವದ ಇತಿಹಾಸ.

ಮರೆವು ಅಸ್ತಿತ್ವದ ವಿಮುಕ್ತಿ. ಈ ಎರಡರ ನಡುವಿನ ಸಮತೋಲನವೇ ಜ್ಞಾನ. ಕೊನೆಯಲ್ಲಿ ಉಪನಿಷತ್ತಿನ ಮೌನ ಹೇಳುವುದು ಇದನ್ನೇ- ಸ್ಮೃತಿಗಳನ್ನು ಮೀರಿ ಹೋಗುವ ಮೌನದಲ್ಲಿ, ಮರೆವನ್ನೂ ಮೀರಿ ಉಳಿಯುವ ಚೇತನದಲ್ಲಿ, ಮಾನವನು ತನ್ನ ನಿಜಸ್ವರೂಪವನ್ನು ಕಂಡುಕೊಳ್ಳುತ್ತಾನೆ. ಅಲ್ಲಿ ಸ್ಮೃತಿಯೂ ಇಲ್ಲ, ಮರೆವೂ ಇಲ್ಲ. ಉಳಿಯುವುದು ಕೇವಲ ಜಾಗೃತಿ ಮಾತ್ರ. ಮರೆವು ಎಂದರೆ ಕೇವಲ ನೆನಪು ಕಳೆದುಕೊಳ್ಳುವುದು ಅಲ್ಲ, ಅದು (ಸಡಿಲಗೊಳ್ಳುವುದು).

ಒಬ್ಬ ವ್ಯಕ್ತಿ ತನ್ನ ಹಳೆಯ ಅನುಭವವನ್ನು ನೆನಪಿಟ್ಟುಕೊಂಡರೂ ಅದಕ್ಕೆ ಪ್ರತಿಕ್ರಿಯಿಸದಿದ್ದರೆ, ಮನೋವಿಜ್ಞಾನದ ಪ್ರಕಾರ ನಡೆದಿದೆ ಎಂದರ್ಥ. ಈ ಸ್ಥಿತಿಯೇ ಸ್ಥಿತ ಪ್ರಜ್ಞತೆ. ಧ್ಯಾನದಲ್ಲಿ ಈ ಪ್ರಕ್ರಿಯೆ ಸಹಜವಾಗಿ ನಡೆಯುತ್ತದೆ. ಮನಸ್ಸು, ಸ್ಮೃತಿಗಳನ್ನು ಗಮನಿಸುತ್ತಾ ಕುಳಿತಾಗ, ಅವು ನಿಧಾನವಾಗಿ ತಮ್ಮ ಶಕ್ತಿಯನ್ನು ಕಳೆದುಕೊಳ್ಳುತ್ತವೆ.

ಅವು ಅಲೆಗಳಂತೆ ಮೇಲೆದ್ದು, ಧಾವಿಸಿ, ಹಾಗೆಯೇ ಲೀನವಾಗಿ ಹೋಗುತ್ತವೆ. ಮನಸ್ಸು ಅವುಗಳಿಗೆ ಅಂಟಿಕೊಳ್ಳುವುದಿಲ್ಲ. ಮನೋವಿಜ್ಞಾನ ಇದನ್ನು non-reactive awareness ಎಂದು ಕರೆದರೆ, ಉಪನಿಷತ್ತು ಇದನ್ನು ಸಾಕ್ಷೀಭಾವ ಎಂದು ಕರೆಯುತ್ತದೆ. ಈ ಸಾಕ್ಷೀ ಭಾವದಲ್ಲಿ ಮರೆವು ಅತ್ಯಂತ ನೈಜವಾಗುತ್ತದೆ. ಅದು ಯಾವುದೇ ಪ್ರಯತ್ನವಿಲ್ಲದೆ, ತಂತಾನೇ ಆಗುವ, ಕರಗುವ ಮರೆವು. ಅಂದರೆ ಸ್ಮೃತಿ ಉಳಿಯುತ್ತದೆ.

ಆದರೆ ಅದರ ಭಾರ ಉಳಿಯುವುದಿಲ್ಲ, ಅನುಭವ ಉಳಿಯುತ್ತದೆ, ಆದರೆ ಬಂಧನ ಉಳಿಯುವುದಿಲ್ಲ. ಇಲ್ಲಿಯೇ ಮನೋವಿಜ್ಞಾನ ಮತ್ತು ಉಪನಿಷತ್ತುಗಳ ಸಂಗಮವಾಗುತ್ತದೆ. ಮನೋ ವಿಜ್ಞಾನ ಮನಸ್ಸಿಗೆ ಚಿಕಿತ್ಸೆ ನೀಡುವ ದಾರಿಯಲ್ಲಿ ಸಾಗಿದರೆ, ಉಪನಿಷತ್ತು ಮನಸ್ಸನ್ನು ಮೀರುವ ದಾರಿಯನ್ನು ಸೂಚಿಸುತ್ತದೆ.

ಸ್ಮೃತಿ ಮನಸ್ಸಿನ ರಚನೆಗೆ ಕಾರಣವಾದರೆ, ಮರೆವು ಮನಸ್ಸನ್ನು ಹಗುರಗೊಳಿಸಲು ಸಹಕರಿಸುತ್ತದೆ. ಆದರೆ ಇವೆರಡನ್ನೂ ಮೀರಿ ಇರುವ ಸ್ಥಿತಿಯೂ ಇದೆ, ಅದೇ ಜಾಗೃತಿ. ಆ ಜಾಗೃತಿಯಲ್ಲಿ ಸ್ಮೃತಿಗಳು ಬಂದು ಹೋಗುವ ಅತಿಥಿಗಳಷ್ಟೇ. ಅರಿವಿಗೆ ಬಾರದಂತೆ ಮರೆವು ನಡೆದಿರುತ್ತದೆ. ಮನಸ್ಸು ಮೌನವಾಗುತ್ತದೆ. ಕೊನೆಯಲ್ಲಿ ಮನುಷ್ಯ ಅರಿಯುವ ಸತ್ಯವೆಂದರೆ- ನಮ್ಮ ಅಸ್ತಿತ್ವ ಸ್ಮೃತಿಗಳಲ್ಲೂ ಅಲ್ಲ, ಮರೆವಲ್ಲೂ ಅಲ್ಲ ಎಂಬುದು.

ಅವುಗಳನ್ನು ಗಮನಿಸುವ ಚೇತನವೇ ನಮ್ಮ ನಿಜವಾದ ಅಸ್ತಿತ್ವ. ಸ್ಮೃತಿ ನಮ್ಮ ಅವಿರತ ಕಾರ್ಯೋನ್ಮುಖತೆ. ಮರೆವು ನಮ್ಮ ವಿಶ್ರಾಂತಿ. ಇವೆರಡನ್ನೂ ಮೀರಿದ ಎಚ್ಚರದ ಸ್ಥಿತಿಯೇ ನಮ್ಮ ಮೂಲ ಸ್ವರೂಪ. ಹಾಗಾಗಿ, ಬದುಕೆಂದರೆ ಸ್ಮೃತಿಗಳ ಸಂಗ್ರಹವಲ್ಲ, ಅವುಗಳ ನಡುವಿನ ಮೌನವನ್ನು ಅರಿಯುವ ಒಂದು ದೀರ್ಘ ಪ್ರಯಾಣ. ಬದುಕೆಂದರೆ ನಾವು ನೆನಪಿಟ್ಟುಕೊಂಡ ಕ್ಷಣಗಳಷ್ಟೇ ಅಲ್ಲ, ನಾವು ಮರೆತು ಮುಂದೆ ನಡೆದ ಕ್ಷಣಗಳೂ ಕೂಡ..

**– ಮಾಯಾ ಬಾಲಚಂದ್ರ**, ಶ್ರೀನಿವಾಸಪುರ


## ನನಗೆ ಆಗಿದ್ದ ನೋವು!

- ನನ್ನ ಹೆಸರು, ನನ್ನ ಸಂಬಂಧಗಳು, ನನ್ನ ಅನುಭವಗಳು ಇವೆಲ್ಲವೂ ಸ್ಮೃತಿಯೇ.
- ಈ ಸ್ಮೃತಿಗಳು ಅಹಂಕಾರವನ್ನೂ ಕಟ್ಟುತ್ತವೆ.
- ನನಗೆ ಆಗಿದ್ದ ನೋವು, ನಾನು ಅನುಭವಿಸಿದ ಅವಮಾನ, ನನ್ನ ಸಾಧನೆ ಎನ್ನುವ ಎಲ್ಲವೂ ಮನಸ್ಸನ್ನು ಕಟ್ಟಿ ಹಾಕುತ್ತವೆ. ಹೀಗೆ ಸ್ಮೃತಿ ಬಂಧನವಾಗುತ್ತದೆ.
- ಧ್ಯಾನ ಪರಂಪರೆಯಲ್ಲಿ ಹೇಳುವ ಒಂದು ಗಂಭೀರ ಸತ್ಯ ಇದೆ- ಸ್ಮೃತಿಗಳಿಂದ ಮುಕ್ತವಾದಾಗ ಮಾತ್ರವೇ ಮನಸ್ಸು ಮೌನವನ್ನು ಅನುಭವಿಸುತ್ತದೆ.
- ಅಂದರೆ, ಮರೆವು ಆಧ್ಯಾತ್ಮಿಕ ಅರ್ಥದಲ್ಲಿ ಕೇವಲ ಜೈವಿಕ ಪ್ರಕ್ರಿಯೆಯಲ್ಲ, ಅದು ಅಂತರಂಗದ ವಿಮುಕ್ತಿ. ಆದರೆ ಸಂಪೂರ್ಣ ಮರೆವು ಸಾಧ್ಯವಿಲ್ಲ.
- ಏಕೆಂದರೆ ಸ್ಮೃತಿಯೇ ಮಾನವ ಜೀವನದ ದಿಕ್ಕು. ಸ್ಮೃತಿ ಇಲ್ಲದ ಮನಸ್ಸಿಗೆ ಅಸ್ತಿತ್ವವೇ ಇಲ್ಲ.
- ಹೀಗಾಗಿ ಮನುಷ್ಯನು ಸ್ಮೃತಿಯನ್ನು ಸಂಪೂರ್ಣವಾಗಿ ತ್ಯಜಿಸಲು ಸಾಧ್ಯವಿಲ್ಲ.
- ಆದ್ದರಿಂದ ಜೀವನದ ಜ್ಞಾನವೆಂದರೆ ಸ್ಮೃತಿಯನ್ನು ಅಳಿಸುವುದಲ್ಲ, ಬದಲಿಗೆ ಅದನ್ನು ಮೃದುವಾಗಿಸುವುದು.
- ನೋವನ್ನು ನೆನಪಿಟ್ಟುಕೊಂಡರೂ ಅದು ಗಾಯವಾಗದಂತೆ ನೋಡಿ ಕೊಳ್ಳುವುದು.
- ಅನುಭವವನ್ನು ಉಳಿಸಿಕೊಂಡರೂ ಅದು ಬಂಧನವಾಗದಂತೆ ಕಾಳಜಿ ವಹಿಸುವುದು.
- ಇಲ್ಲಿಯೇ ಮರೆವಿನ ಸೂಕ್ಷ್ಮ ಪಾತ್ರ ಆರಂಭವಾಗುತ್ತದೆ.
- ಮರೆವು ಮನಸ್ಸನ್ನು ಹಗುರಗೊಳಿಸುತ್ತದೆ.
- ಅದು ಭೂತಕಾಲದ ಭಾರವನ್ನು ಕಡಿಮೆ ಮಾಡುತ್ತದೆ.
- ಮರೆವು ಇಲ್ಲದೆ ಕ್ಷಮೆ ಸಾಧ್ಯವಿಲ್ಲ.
- ಮರೆವು ಇಲ್ಲದೆ ಹೊಸ ಸಂಬಂಧಗಳು ಹುಟ್ಟುವುದಿಲ್ಲ.
- ಮಾನವ ಜೀವನದಲ್ಲಿ ಕೆಲವು ಸ್ಮೃತಿಗಳು ದೀಪಗಳಂತೆ.

# ಭಾವ ಲಹರಿ

## ಕನ್ನಡ ಕವನಗಳು

### ಮಧುರ ಪ್ರೇಮವನೂ ಮೀಟಿ....



ನಿನ್ನ ಕೈಹಿಡಿದು ನಾ, ಬರುವೆನು ಜೊತೆಗೆ
ಬಾಳ ಪಯಣದಲಿ ನಾ, ಇರುವೆನು ಜೊತೆಗೆ
ಪ್ರೀತಿ ತುಂಬಿದಾ ಗಳಿಗೆ, ಹೇಳು ಹೆಸರಲೇನಿದೆ
ತನುವಿನಾ ನೋವನು ಎಲ್ಲಾ, ಮರೆವೆನು ಜೊತೆಗೆ
ಪ್ರಣಯ ಒಂದೊಂದು ಸವಿಯಾ, ಕೇಳುವೆಯಲ್ಲೇ
ನನಸ ಒಡೆತನದ ನಡುವೆ, ಮೆರೆವೆನು ಜೊತೆಗೆ
ಶೋಕ ಮರೆಸಿದಾ ಸಮಯ, ಬಳಿಯಲ್ಲೇ ಇರುವೆ
ಯಾರು ಕೊಡದಿರುವ ಒಲವಾ, ತರುವೆನು ಜೊತೆಗೆ
ಹೃದಯದಾ ಒಳಗಿನ ಭಾವ, ಕಾಣೆಯೇನು ವೀಣೆ
ಮಧುರ ಪ್ರೇಮವನೂ ಮೀಟಿ, ಬೆರೆವೆನು ಜೊತೆಗೆ

**– ಹಾ. ಮ ಸತೀಶ** ಬೆಂಗಳೂರು

### ಮೌನ ಪಯಣ

ಮೌನವಾಯಿತು ಪಯಣವಿಂದು
ಸೋತುಹೋಗುತ ಮನವು ಯಿಂದು
ತನುವಿನಾಳಕೆ ನೋವೆ ಕಾಣಲು
ಧರೆಗೆ ಕುಸಿಯಿತು ಜೀವವು
ಹುಟ್ಟು ಜೀವನ ಪಾಠವಲ್ಲವು
ಕಲಿಕೆ ಬಂಡಿಲಿ ಇಹುದುಯೆಲ್ಲವು
ಬದುಕ ಚೆಲುವಲಿ ಅರಳಿ ಸಾಗಲು
ಮುರಿಯ ಬಾರದು ಬಾಳ ಚಕ್ರವು
ತನ್ನ ತಪ್ಪನು ಮುಚ್ಚಿ ಮರೆಸುತ
ಇತರ ತಪ್ಪನು ಎತ್ತಿ ಹಿಡಿಯುತ
ಸಾಗುತಿರಲದು ಇಹುದೆ ಒಲುಮೆ
ಹೃದಯ ಭಾವನೆ ಸೋಲದೆ
ಕಲಿತು ಬೆಳೆವರು ಆಸ್ತಿ ಎನಿಪರು
ಕನಸು ಇರುತಲಿ ಬೆಳಗುತಿಹರು
ಬರಿದೆ ಬರೆಯುತ ಸಾಗುತಿಹರೆ
ತಿರುಳು ಇಲ್ಲದೆ ಬದುಕುತಿಹರೆ
ಮರೆಯಲಾರದ ಮಾತುಗಳಿಗೆ
ಮರೆಯ ಬಾರದ ಸ್ವಾರ್ಥಿಗಳಿಗೆ
ಮರೆತು ಹೋಗದ ದ್ವೇಷಿಗಳಿಗೆ
ಪಾಠ ಕಲಿಸದೆ ಹೋದೆನೆ ?!



# ನಮ್ಮ ವಿರುದ್ಧ ನಾವೇ ಸಾರಿದ ಯುದ್ಧ!

> ಪಶ್ಚಿಮಘಟ್ಟಗಳಿಂದ ಬರುವ ನದಿಗಳೂ ಇದಕ್ಕೆ ಹೊರತಾಗಿಲ್ಲ. ಅಪ್ಪಟ ಮಲೆನಾಡಿನ ಕಾಡಿನೊಳಗೆ ಹುಟ್ಟಿ ಹರಿದು ಬರುವ ತುಂಗಾ ನದಿಯನ್ನು ಈ ಮಂಡಳಿ ರಾಜ್ಯದ ಅತ್ಯಂತ ಮಲಿನಕಾರಿ ನದಿಗಳ ಕೆಟಗರಿಗೆ (ಸಿ) ಸೇರಿಸಿತು. ಅಲ್ಯೂಮಿನಿಯಂ ಅಂಶ ಅಪಾಯಕಾರಿ ಮಟ್ಟದಲ್ಲಿರುವುದರಿಂದ ನದಿಯ ನೀರು ಕುಡಿಯಲು ಮಾತ್ರವಲ್ಲ ಸ್ನಾನಕ್ಕೂ ಯೋಗ್ಯವಲ್ಲ ಎಂದು ಹೇಳಿತು.

ಕಾಡುದಾರಿ

ಅತ್ತ ಗಲ್ಫ್‌ನಲ್ಲಿ ಇರಾನ್- ಇಸ್ರೇಲ್- ಅಮೆರಿಕ ಹೊಡೆದಾಡಿಕೊಳ್ಳುತ್ತಿವೆ. ತೈಲ ರಿಫೈನರಿಗಳು ದಾಳಿಗೆ ತುತ್ತಾಗಿವೆ. ಉಭಯ ಪಕ್ಷಗಳ ಮುಂದಿನ ಗುರಿ ಬಹುಶಃ ವೈರಿಗಳ ಜಲ ಸಂಸ್ಕರಣಾಗಾರ ಆಗಿರಬಹುದು ಎಂಬ ಅಂದಾಜು. ಯಾಕೆಂದರೆ, ಸದಾ ಶುದ್ಧ ಕುಡಿಯುವ ನೀರಿಗೆ ತತ್ವಾರ ಅನುಭವಿಸುವ ಗಲ್ಫ್ ದೇಶಗಳಿಗೆ ಅವುಗಳೇ ಜೀವಾಳ. ಸಮರ ಎಲ್ಲ ನೈತಿಕ ನೆಲೆಗಳನ್ನು ದಾಟಿರುವುದರಿಂದ, ಯಾವ ಕ್ಷಣದಲ್ಲೂ ಅಂಥ ದಾಳಿ ನಡೆಯಬಹುದು ಎನ್ನಲಡ್ಡಿಯಿಲ್ಲ.

ಅದೇನೋ ಸರಿ. ಆದರೆ ನಮ್ಮ ದೇಶದ, ರಾಜ್ಯದ ಜಲಮೂಲಗಳ ಸರ್ವನಾಶಕ್ಕಾಗಿ ನಾವೇ ಹೂಡಿರುವ ಯುದ್ಧದ ಬಗ್ಗೆ ನಿಮಗೆ ಗೊತ್ತೆ? ಇಲ್ಲಿ ನಾವು ಅಂದರೆ ಯಾರು, ಈ ಯುದ್ಧದ ಸ್ವರೂಪ ಏನು, ಇದರ ಹಿಂದಿನ ಉದ್ದೇಶ ಏನು, ಲಾಭ ಯಾರಿಗೆ, ನಷ್ಟ ಯಾರಿಗೆ ಎಂಬುದನ್ನೆ ಮುಂದೆ ನೋಡಬಹುದು.

ಸಾಮಾನ್ಯವಾಗಿ ಪಶ್ಚಿಮಘಟ್ಟಗಳಲ್ಲಿ ಹುಟ್ಟಿ ಹರಿದು ಬರುವ ನದಿಗಳ ನೀರು ಶುದ್ಧವಾಗಿರುತ್ತದೆ ಎಂದು ಭಾವನೆ. ಆದರೆ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ (ಸಿಪಿಸಿಬಿ) ಇತ್ತೀಚೆಗೆ ಒಂದು ವರದಿ ನೀಡಿತು. ಅದರಲ್ಲಿ, ನಮ್ಮ ರಾಜ್ಯದ ನದಿಗಳು ಎಷ್ಟು ಅಪಾಯಕಾರಿಯಾಗಿ ಮಲಿನಗೊಂಡಿವೆ ಎಂಬ ಅಂಕಿಅಂಶ ನೀಡಿತು.

ಪಶ್ಚಿಮಘಟ್ಟಗಳಿಂದ ಬರುವ ನದಿಗಳೂ ಇದಕ್ಕೆ ಹೊರತಾಗಿಲ್ಲ. ಅಪ್ಪಟ ಮಲೆನಾಡಿನ ಕಾಡಿನೊಳಗೆ ಹುಟ್ಟಿ ಹರಿದು ಬರುವ ತುಂಗಾ ನದಿಯನ್ನು ಈ ಮಂಡಳಿ ರಾಜ್ಯದ ಅತ್ಯಂತ ಮಲಿನಕಾರಿ ನದಿಗಳ ಕೆಟಗರಿಗೆ (ಸಿ) ಸೇರಿಸಿತು. ಅಲ್ಯೂಮಿನಿಯಂ ಅಂಶ ಅಪಾಯಕಾರಿ ಮಟ್ಟದಲ್ಲಿರುವುದರಿಂದ ನದಿಯ ನೀರು ಕುಡಿಯಲು ಮಾತ್ರವಲ್ಲ ಸ್ನಾನಕ್ಕೂ ಯೋಗ್ಯವಲ್ಲ ಎಂದು ಹೇಳಿತು.

ತುಂಗಾ ನದಿ ಮಾತ್ರವಲ್ಲ. ರಾಜ್ಯದಲ್ಲಿ 12 ಪ್ರಮುಖ ನದಿಗಳಲ್ಲಿ ಸುಮಾರು 700 ಕಿ.ಮೀ. ದೂರದಷ್ಟು ಹರಿಯುವ ನೀರು ಅಪಾಯಕಾರಿ ಮಟ್ಟದಲ್ಲಿ ಮಲಿನಗೊಂಡಿದೆಯಂತೆ. ರಾಜ್ಯದ ಜೀವನಾಡಿಗಳೆನಿಸಿದ ಕಾವೇರಿ, ಭದ್ರಾ, ಕಬಿನಿ, ಕೃಷ್ಣಾ, ಶಿಂಷಾ, ಭೀಮಾ, ನೇತ್ರಾವತಿ, ಅರ್ಕಾವತಿ, ಲಕ್ಷ್ಮಣತೀರ್ಥ, ಕಾಗಿಣಾ ಕೂಡ ವಿಪರೀತ ಗಲೀಜಾಗಿವೆ.

ದಕ್ಷಿಣ ಕನ್ನಡ ಜಿಲ್ಲೆಯನ್ನು ತೊಳೆಯುವ ನೇತ್ರಾವತಿಯನ್ನು ಬಿ ಕೆಟಗರಿಗೆ ಸೇರಿಸಲಾಗಿದೆ. ಅದರ ನೀರು ಕೂಡ ಸಂಸ್ಕರಿಸದೇ ಕುಡಿಯಲು ಅಯೋಗ್ಯವಂತೆ. ಮಾಲಿನ್ಯಕ್ಕೆ ಹಲವು ಕಾರಣ. ಮುಖ್ಯವಾಗಿ ಪೇಟೆಗಳ ಚರಂಡಿ ನೀರು ಸಂಸ್ಕರಿಸದೇ ನದಿ ಸೇರುವುದು. ಆಮೇಲೆ ಕೈಗಾರಿಕೆಗಳ ತ್ಯಾಜ್ಯ. ತುಂಗೆಯ ಉದಾಹರಣೆ ನೋಡುವುದಾದರೆ, ಶಿವಮೊಗ್ಗ ಮಹಾನಗರ ಪಾಲಿಕೆ ಪ್ರತಿ ದಿನ 34 ದಶಲಕ್ಷ ಲೀಟರ್ ಸಾಮರ್ಥ್ಯದ ಕೊಳಚೆ ನೀರು ಸಂಸ್ಕರಣಾ ಘಟಕ (ಎಸ್‌ಟಿಪಿ) ಸ್ಥಾಪಿಸಿದೆ. ಇದಕ್ಕೆ ಕೇವಲ 11 ದಶಲಕ್ಷ ಲೀಟರ್ ತ್ಯಾಜ್ಯ ನೀರು ಬರುತ್ತಿದೆ.

ಕಾರಣ ಒಳಚರಂಡಿ ಸಂಪರ್ಕ ಸರಿಯಾಗಿಲ್ಲ. ಉಳಿದ 23 ದಶಲಕ್ಷ ಲೀಟರ್ ಕೊಳಚೆ ತುಂಗೆ ಗೆ ಹೋಗುತ್ತದೆ. ಇನ್ನು ದಟ್ಟ ಕಾಡುಗಳ ನಡುವಿನಿಂದ ಭೋರ್ಗರೆದು ಬರುವ ಉತ್ತರ ಕನ್ನಡದ ಕಾಳಿ ನದಿ ಕೂಡ, ದಾಂಡೇಲಿಯ ಕೊಳಚೆ ನೀರಿನಿಂದ ಕೊಳಕಾಗುತ್ತದೆ. ಇನ್ನು ಮನುಷ್ಯರೇ ಬಿಡುವ ನೇರ ತ್ಯಾಜ್ಯ.

ಮಲೆನಾಡು ಹಾಗೂ ಕರಾವಳಿಯ ನದಿ ತೀರಗಳಲ್ಲಿ ಕೆಲವು ಪ್ರಮುಖ ಧಾರ್ಮಿಕ ಕೇಂದ್ರಗಳಿವೆ. ಅಲ್ಲಿಗೆ ಪ್ರತಿವರ್ಷ ಒಂದೆರಡು ಕೋಟಿ ಯಾತ್ರಾರ್ಥಿಗಳು ಭೇಟಿ ನೀಡುತ್ತಾರೆ. ಅವರು ಉಳಿದುಕೊಂಡ ಗೆಸ್ಟ್ ಹೌಸ್‌ಗಳು, ಹೋಟೆಲ್‌ಗಳಲ್ಲಿ ಮಾಡಿದ ಮಾನವ ತ್ಯಾಜ್ಯ ನೇರವಾಗಿ ನದಿಯ ಒಡಲು ಸೇರುತ್ತದೆ. ಇದಕ್ಕೆ ಸಾಕ್ಷಿಯೂ ಉಂಟು.

ಮಾನವನ ಮಲದಲ್ಲಿ ಕೋಲಿಫಾರ್ಮ್ ಎಂಬ ಬ್ಯಾಕ್ಟೀರಿಯಾ ಇರುತ್ತದೆ. ಈ ಕೋಲಿ ಫಾರ್ಮ್ ಪ್ರಮಾಣ ನೇತ್ರಾವತಿ ನದಿಯ ನೀರಿನಲ್ಲಿ ಪ್ರತಿ 100 ಮಿಲಿ ಗ್ರಾಂಗೆ 13 ಎಂಪಿಎನ್ (ಮೋಸ್ಟ್ ಪೋರ್ಟ್ಬಲ್ ನಂಬರ್) ಇದೆ. ಪುಣ್ಯಕ್ಷೇತ್ರಗಳಲ್ಲಿ ಹರಿಯುವ ತುಂಗೆ, ನೇತ್ರಾವತಿ, ಕಾವೇರಿ ನದಿಗಳಿಗೆ ಇನ್ನೂ ಕೆಲವರ ಕಾಟ ಇದೆ. ಇವರಿಗೆ ಭಕ್ತಿಯ ಜೊತೆಗೆ ಸ್ವಚ್ಛತೆಯ ಪ್ರಜ್ಞೆ, ಸ್ವಚ್ಛತೆಯೇ ದೇವರು ಎಂಬ ತಿಳಿವಳಿಕೆ ಇಲ್ಲ.

ಮಿಂದ ಬಳಿಕ ತಮ್ಮ ಬಟ್ಟೆಗಳನ್ನು ನದಿಗೇ ಬಿಸಾಡಿದರೆ ಪುಣ್ಯ ಬರುತ್ತದೆ ಎಂದು ಭಾವಿಸುವವರು ಇವರು. ಇದರಿಂದ ನದಿ ಎಷ್ಟು ಕೊಳಕಾಗುತ್ತದೆ ಎಂಬ ಯೋಚನೆ ಇವರಿಗಿಲ್ಲ. ಗಂಜಾಂನ ನಿಮಿಷಾಂಬ ಮತ್ತು ಶ್ರೀರಂಗಪಟ್ಟಣದ ವಿಶ್ವನಾಥ ದೇವಾಲಯಗಳಲ್ಲಿ ದೇಗುಲದ ಪಕ್ಕವೇ ಇರುವ ಕಾವೇರಿ ನದಿ ನೀರು ಕೊಳಕಾಗಿರುವುದರಿಂದ, ದೇವರ ಅಭಿಷೇಕಕ್ಕೆ ಇದನ್ನು ನೇರವಾಗಿ ಬಳಸುತ್ತಿಲ್ಲ.

ಇದೆಲ್ಲ ಪಶ್ಚಿಮಘಟ್ಟಗಳಿಂದ ಬರುವ ನದಿಗಳ ಕತೆಯಾದರೆ, ಕೈಗಾರಿಕೆಗಳು ದಟ್ಟವಾಗಿರುವ ಬಯಲುಸೀಮೆ ಹಾಗೂ ಬೆಂಗಳೂರಿನ ನದಿಗಳ ಕತೆ ದೇವರಿಗೇ ಪ್ರೀತಿ. ಇದೆಲ್ಲ ಜಲಮೂಲಗಳಾದ ನದಿಗಳ ಮೇಲೆ ಶ್ರೀಸಾಮಾನ್ಯರಾದ ನಾವೇ ಸಾರಿರುವ ಕ್ರೂರ ಯುದ್ಧದ ನಿದರ್ಶನ.

ಇವೆಲ್ಲ ನಮ್ಮ ನಿಮ್ಮಂಥ ಸಾಮಾನ್ಯರ ಕತೆಯಾಯಿತು. ಇನ್ನೂ ದೊಡ್ಡವರ ಯುದ್ಧಗಳ ರೀತಿ ಬೇರೆ. ಉದಾಹರಣೆಗೆ ಎತ್ತಿನಹೊಳೆ ಎಂಬ ಪರಮವ್ಯರ್ಥ ಯೋಜನೆಯನ್ನು ನೋಡಿ. ಪಶ್ಚಿಮಘಟ್ಟಗಳಲ್ಲಿ ಹುಟ್ಟುವ ಹೊಳೆಗಳ ನೀರನ್ನು ಬಯಲುಸೀಮೆ ಪ್ರದೇಶಗಳಾದ ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಬೆಂಗಳೂರು ಗ್ರಾಮಾಂತರ, ರಾಮನಗರ, ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಗಳಿಗೆ ಕುಡಿಯಲು ಪೂರೈಸುವುದು ಇದರ ಉದ್ದೇಶ.

ಈ ಯೋಜನೆ ಯಾವಾಗ ತುದಿ ಮುಟ್ಟುತ್ತದೆ, ನೀರು ಯಾವಾಗ ಎಲ್ಲಿಗೆ ಬರುತ್ತದೆ, ಎಲ್ಲಿಂದ ಎಷ್ಟು ನೀರು ಎತ್ತಲಾಗುತ್ತದೆ ಎಂಬುದು ನಿಖರವಾಗಿ ಯಾರಿಗೂ ಗೊತ್ತಿಲ್ಲ. 24 ಟಿಎಂಸಿ ನೀರು ಸಿಗುತ್ತದೆ ಎಂಬ ಹಸೀ ಸುಳ್ಳನ್ನು ಹೇಳುತ್ತಲೇ ಇದ್ದಾರೆ.

ಯೋಜನೆ ಮುಂದೆ ಮುಂದೆ ಹೋಗುತ್ತಲೇ ಇದೆ. ಅಂದಾಜು ವೆಚ್ಚ ಈಗಾಗಲೇ 23000 ಕೋಟಿಯನ್ನು ದಾಟಿದೆ. ಕಳೆದೆರಡು ವರ್ಷಗಳಲ್ಲಿ ಇದರ ಪೈಪ್‌ಲೈನ್ ಹಾದು ಹೋದ ಜಾಗಗಳಲ್ಲಿ ಸೋರಿಕೆ, ಭೂಕಂಪನ, ಭೂಕುಸಿತ ಕಂಡುಬಂದಿದೆ. ಈ ಪ್ರದೇಶಗಳಲ್ಲಿ ಇರುವವರನ್ನು ದೇವರೇ ಕಾಪಾಡಬೇಕು. ಎತ್ತಿದ ನೀರು ಗುರಿ ತಲುಪುವುದಂತೂ ಕನಸಿನ ಮಾತು. ಎಲ್ಲಿಂದ ಎತ್ತಲಾಗಿದೆಯೋ ಅಲ್ಲಿಗೆ ಆಗುವ ಹಾನಿಯ ಬಗ್ಗೆ ಯಾರಿಗೂ ಕಾಳಜಿ ಇಲ್ಲ.

ಇದರ ಮೇಲಿನಿಂದ ಈಗ ಆಗುಂಬೆಯಲ್ಲಿ ಹಾಗೂ ಶಿರಾಡಿ ಘಾಟಿಯಲ್ಲಿ ಸುರಂಗ ಮಾರ್ಗದ ಯೋಜನೆಯ ಪ್ರಸ್ತಾವ ಮಾಡಲಾಗಿದೆ. ಎಲ್ಲವೂ ಕೋಟಿ ಯೋಜನೆಗಳೇ. ಮಂಗಳೂರು- ಬೆಂಗಳೂರು ಸಂಪರ್ಕಿಸುವ ಶಿರಾಡಿ ಘಾಟಿಯಲ್ಲಿ ಸುರಂಗ, ಗ್ರೀನ್ ಫೀಲ್ಡ್ ಮಾರ್ಗ ನಿರ್ಮಾಣಕ್ಕೆ ಸಮಗ್ರ ಯೋಜನಾ ವರದಿ ತಯಾರಿಸಲು ಕೇಂದ್ರ ಸರ್ಕಾರ ಒಪ್ಪಿಗೆ ಸೂಚಿಸಿದೆ.

ಇದು ಕಾರ್ಯಸಾಧು ಅಲ್ಲ ಎಂದು 2022ರಲ್ಲಿ ಕೇಂದ್ರ ಸಚಿವ ನಿತಿನ್ ಗಡ್ಕರಿ ಲೋಕಸಭೆಗೆ ಉತ್ತರ ನೀಡಿದ್ದರು. ಆದರೆ ಸುರಂಗ ನಿರ್ಮಾಣಕ್ಕೆ ಒಪ್ಪಿಗೆ ನೀಡುವಂತೆ ಕರ್ನಾಟಕ ಸರ್ಕಾರ 3 ಬಾರಿ ಕೇಂದ್ರಕ್ಕೆ ಮನವಿ ಸಲ್ಲಿಸಿದೆ. ಇನ್ನು ಶಿವಮೊಗ್ಗ ಮತ್ತು ಉಡುಪಿ ಜಿಲ್ಲೆಗಳನ್ನು ಸಂಪರ್ಕಿಸುವ ಆಗುಂಬೆ ಘಾಟಿಯಲ್ಲಿ ರಾಷ್ಟ್ರೀಯ ಹೆದ್ದಾರಿ 169ಎ ಅಡಿಯಲ್ಲಿ ಸುರಂಗ ಮಾರ್ಗ ನಿರ್ಮಿಸಲು ಕೇಂದ್ರ ಸರ್ಕಾರ ಯೋಜನೆ ರೂಪಿಸುತ್ತಿದೆ.

2.33 ಕೋಟಿ ರು. ವೆಚ್ಚದಲ್ಲಿ ಡಿಪಿಆರ್ ಸಿದ್ಧಪಡಿಸಲಾಗುತ್ತಿದೆ. ಇವೆರಡೂ ಸಾರಿಗೆ ಮತ್ತು ಪ್ರವಾಸೋದ್ಯಮಕ್ಕೆ ಪೂರಕವಂತೆ. ಶಿರಾಡಿ ಘಾಟಿಯ ಯೋಜನೆಯನ್ನೇನೋ ಸಮರ್ಥಿಸಿ ಕೊಳ್ಳಬಹುದು. ಇದು ರಾಜ್ಯದ ಬ್ಯುಸೀ ಹೆದ್ದಾರಿಗಳಂದು.

ಇಲ್ಲೂ ಪರಿಸರ ಸೂಕ್ಷ್ಮ ಅಂಶಗಳಿವೆ. ಆದರೆ ಆಗುಂಬೆಯ ಮೇಲಾಗುವ ದೌರ್ಜನ್ಯವನ್ನು ಸಹಿಸಿಕೊಳ್ಳುವುದಾದರೂ ಹೇಗೆ? ಯುನೆಸ್ಕೋ ಗುರುತಿಸಿದ ಜೀವವೈವಿಧ್ಯ ತಾಣಗಳಲ್ಲಿ ಒಂದಾಗಿರುವ ಆಗುಂಬೆಯ ಮೇಲೆ ಈ ಯೋಜನೆಯಿಂದ ಆಗಬಹುದಾದ ಹಾನಿಯ ಬಗ್ಗೆ, ಅದರ ಧಾರಣ ಶಕ್ತಿಯ ಬಗ್ಗೆ ಈ ರಾಜಕಾರಣಿಗಳಿಗೆ ಹೇಳುವವರು ಯಾರು? ಎಲ್ಲ ಯೋಜನೆಗಳೂ ಸೇರಿ ಕೊನೆಗೂ ಹಯಾಗುವುದು ಜೀವವೈವಿಧ್ಯ, ಸಸ್ಯವೈವಿಧ್ಯದ ಮೇಲೆ. ಜೊತೆಗೆ ನೀರಿನ ಹರಿವಿನ ಮೇಲೆ.

ಇಲ್ಲಿ ಆಗುವ ಸಣ್ಣಸಣ್ಣ ಮಾನವ ಹಸ್ತಕ್ಷೇಪವೂ ಹೇಗೆ ಹಾನಿಕರ ಎಂಬುದಕ್ಕೆ ಒಂದು ನಿದರ್ಶನವಿದೆ. ಇತ್ತೀಚೆಗೆ ಕುದುರೆಮುಖ ಕಾಡಿಗೆ ಬೆಂಕಿ ಬಿತ್ತು. ಲಕ್ಷಗಟ್ಟಲೆ ಹೆಕ್ಟೇರ್ ಶೋಲಾ ಅರಣ್ಯ ಸುಟ್ಟು ಬೂದಿಯಾಯಿತು. ಇದೇನೂ ಪ್ರಾಕೃತಿಕ ಬೆಂಕಿಯಲ್ಲ. ಕಾಡಿನ ಬೆಂಕಿಯೆಲ್ಲವೂ ಮನುಷ್ಯಕೃತ್ಯವೇ. ಒಂದು ಬೆಂಕಿ ಬಿದ್ದರೆ ಆ ನಂತರದ ಮಳೆಗಾಲಕ್ಕೆ ಹುಲುಸಾಗಿ ಹುಲ್ಲು ಚಿಗುರುತ್ತದೆ ನಿಜ. ಆದರೆ ಪದೇಪದೆ ಬೆಂಕಿ ಬೀಳುತ್ತಲೇ ಇದ್ದರೆ ಈ ಹುಲ್ಲಿನ ಬೇರುಗಳೂ ಬೆಂದುಹೋಗಿ ಬೆಟ್ಟ ಬೋಳಾಗುತ್ತದೆ.

ಶೋಲಾ ಕಾಡುಗಳ ಅಪರೂಪದ ಗುಣ ಎಂದರೆ, ಬೀಳುವ ಮಳೆನೀರನ್ನು ನಿಧಾನವಾಗಿ ಹರಿಯುವಂತೆ ಮಾಡಿ, ನಿಲ್ಲುವಂತೆ, ಇಂಗುವಂತೆ ಮಾಡಿ, ಈ ಬೆಟ್ಟಗಳು ನೀರಿನ ಖಜಾನೆಗಳಾಗುವಂತೆ ಮಾಡುವುದು. ವರ್ಷವಿಡೀ ಇಲ್ಲಿಂದ ಹೊರಡುವ ನದಿಗಳಿಗೆ ಇದೇ ನೀರ ಸೆಲೆ. ಎಲ್ಲಿ ಶೋಲಾ ಅರಣ್ಯ ಇಲ್ಲವೋ ಅಲ್ಲಿ ನೀರು ನಿಲ್ಲದೇ ಹರಿದು ಹೋಗಿ ತೊರೆಗಳೂ ಬತ್ತುತ್ತವೆ.

ನೆಲವೂ ಸವಕಳಿಯಾಗುತ್ತದೆ. ಇದನ್ನು ಬರೆಯುತ್ತಿರುವಾಗಲೇ ಬರುತ್ತಿರುವ ಸುದ್ದಿ ಎಂದರೆ, ಮಲೆನಾಡು ಭಾಗದಲ್ಲಿ ನಡೆಯುತ್ತಿರುವ ಖನಿಜ ನಿಕ್ಷೇಪ ಸರ್ವೇಕ್ಷಣೆಯ ವರ್ತಮಾನ. ಚಿಕ್ಕಮಗಳೂರು, ದಕ್ಷಿಣ ಕನ್ನಡ ಸೇರಿದಂತೆ ಮಲೆನಾಡಿನ ಭಾಗದಲ್ಲಿ ಇತ್ತೀಚೆಗೆ ಕೆಲವು ತಿಂಗಳಿನಿಂದ ತಗ್ಗಿನಲ್ಲಿ ವಿಮಾನಗಳು ಹಾರಾಡುತ್ತಿವೆ.

ಇವು ಬೇರೇನೂ ಅಲ್ಲ, ಭಾರತೀಯ ಭೂವೈಜ್ಞಾನಿಕ ಸರ್ವೇಕ್ಷಣಾ ಇಲಾಖೆ ನಡೆಸುತ್ತಿರುವ ವೈಜ್ಞಾನಿಕ ಸಮೀಕ್ಷೆಯ ಲಘು ವಿಮಾನಗಳು. ಭೂಗರ್ಭದ ರಚನೆ, ಖನಿಜ ಸಂಪನ್ಮೂಲ ಮತ್ತು ಜಲ ಸಂಪನ್ಮೂಲಗಳ ಪತ್ತೆಗಾಗಿ ಈ ಹೈಟೆಕ್ ವೈಮಾನಿಕ ಸಮೀಕ್ಷೆ ನಡೆಯುತ್ತಿದೆ.

ಪಶ್ಚಿಮ ಘಟ್ಟಗಳಲ್ಲಿ ಸಾಕಷ್ಟು ಖನಿಜ ನಿಕ್ಷೇಪ ಇರುವುದಂತೂ ನಿಜ. ಇದು ಪತ್ತೆಯಾಗಲೂಬಹುದು. ಆಮೇಲೇನಾಗುತ್ತದೆ? ಇದು ಸ್ಥಳೀಯರ, ಇಲ್ಲಿ ವನ್ಯವೈವಿಧ್ಯ ಮತ್ತು ಜಲಮೂಲದ ಮೇಲಿನ ತೂಗುಗತ್ತಿ ಎಂದು ತಿಳಿಯಲು ಹೆಚ್ಚಿನ ಜಾಣ್ಮೆ ಬೇಕಿಲ್ಲ.

ನಮ್ಮ ಜಲಸಂಪನ್ಮೂಲಗಳನ್ನು ಸಾಧ್ಯವಾದಷ್ಟು ಹಾಳುಗೆಡಹುವುದು ಹೊರತುಪಡಿಸಿ ಸಂರಕ್ಷಣೆಯ ಕುರಿತು ನಮ್ಮಲ್ಲಿ ಯಾವುದೇ ಯೋಜನೆಗಳು ಇಲ್ಲ. ಎಲ್ಲರೂ ಎಷ್ಟು ನೀರು ಮತ್ತು ಕಾಸು ದೋಚಬಹುದು ಎಂದು ನೋಡುತ್ತಿದ್ದಾರೆಯೇ ಹೊರತು, ಇದನ್ನು ಮುಂದಿನ ಜನಾಂಗಕ್ಕೂ ಉಳಿಸಿಕೊಂಡು ಹೋಗುವುದು ಹೇಗೆ ಎಂದು ಯೋಚಿಸುತ್ತಿಲ್ಲ. ನರಕವನ್ನು ಸೃಷ್ಟಿಸಿ ಹೋಗುವ ನಮ್ಮನ್ನು ಮುಂದಿನ ತಲೆಮಾರುಗಳು ಕ್ಷಮಿಸುವುದಿಲ್ಲ.

**– ಹರೀಶ್** ಕೇರ



> ಅಷ್ಟಾವಕ್ರರು ಗಂಭೀರವಾಗಿ ಹೇಳಿದರು: ನಿನ್ನ ಆಸೆಗಳೂ ಹಾಗೆಯೇ. ನೀನು ಆಸೆಗಳನ್ನು ಹೊರಗಿನ ವಸ್ತುಗಳಲ್ಲಿ ಅಥವಾ ನಿನ್ನ ವ್ಯಕ್ತಿತ್ವದಲ್ಲಿ ಹುಡುಕುತ್ತಿದ್ದೀಯ. ಆದರೆ ನಿಜವಾದ ಮಸಿ ಇರುವುದು ನಾನು ಸುಖಿಯಾಗಲು ಇದು ಬೇಕು ಎಂದು ನೀನು ನಿನ್ನನ್ನು ಗುರುತಿಸಿ ಕೊಂಡಿದ್ದೀಯಲ್ಲ, ಆ ತಪ್ಪಾದ ಅರಿವಿನಲ್ಲಿ.

## ಕನ್ನಡಿ ಮತ್ತು ಕಲೆಯ ಭ್ರಮೆ: ಅಷ್ಟಾವಕ್ರ ಗೀತೆ

ಒಂದೊಳ್ಳೆ ಮಾತು

ಒಮ್ಮೆ ಒಬ್ಬ ರಾಜ ತೀವ್ರವಾದ ಮಾನಸಿಕ ಆತಂಕದಲ್ಲಿದ್ದ. ಅವನ ಬಳಿ ಎಲ್ಲವೂ ಇತ್ತು–ರಾಜ್ಯ, ಸಂಪತ್ತು, ಸೌಂದರ್ಯ. ಆದರೂ ಅವನು ಇನ್ನೂ ಏನೋ ಬೇಕು ಎಂಬ ಹಂಬಲದಲ್ಲಿದ್ದ. ಅಷ್ಟಾವಕ್ರ ಮುನಿಗಳ ಬಳಿ ಹೋಗಿ, ಮುನಿಗಳೇ, ನನ್ನ ಆಸೆಗಳನ್ನು ನಾನು ಹೇಗೆ ನಿಯಂತ್ರಿಸಲಿ? ಅವು ನನ್ನನ್ನು ಬಂಧಿಸಿವೆ ಎಂದು ಕೇಳಿಕೊಂಡ. ಅಷ್ಟಾವಕ್ರರು ನಸುನಕ್ಕು ಅವನನ್ನು ಒಂದು ದೊಡ್ಡ ಕನ್ನಡಿಯ ಮುಂದೆ ನಿಲ್ಲಿಸಿದರು.

ಆ ಕನ್ನಡಿಯಲ್ಲಿ ರಾಜನ ಮುಖದ ಮೇಲೆ ಸ್ವಲ್ಪ ಮಸಿ ಇತ್ತು. ಅಷ್ಟಾವಕ್ರರು ಹೇಳಿದರು, ರಾಜನೇ, ಆ ಕನ್ನಡಿಯ ಮೇಲೆ ನಿನ್ನ ಬಿಂಬಕ್ಕೆ ಹತ್ತಿರುವ ಮಸಿಯನ್ನು ಅಳಿಸಲು ಪ್ರಯತ್ನಿಸು. ರಾಜ ಗಾಬರಿಯಿಂದ ಕನ್ನಡಿಯ ಮೇಲೆ ಕೈ ಆಡಿಸಿದ. ಎಷ್ಟು ಅಳಿಸಿದರೂ ಕನ್ನಡಿಯ ಮೇಲಿನ ಆ ಕಲೆ ಹೋಗಲಿಲ್ಲ. ರಾಜನಿಗೆ ಸಿಟ್ಟು ಬಂತು, ಮುನಿಗಳೇ, ಕನ್ನಡಿಯ ಮೇಲಿರುವ ಕಲೆಯನ್ನಲ್ಲ, ನನ್ನ ಮುಖದ ಮೇಲಿರುವ ಮಸಿಯನ್ನು ನಾನು ತೊಳೆದು ಕೊಳ್ಳಬೇಕು. ಆಗಷ್ಟೇ ಬಿಂಬ ಸರಿಯಾಗುತ್ತದೆ ಎಂದ!

ಅಷ್ಟಾವಕ್ರರು ಗಂಭೀರವಾಗಿ ಹೇಳಿದರು: ನಿನ್ನ ಆಸೆಗಳೂ ಹಾಗೆಯೇ. ನೀನು ಆಸೆಗಳನ್ನು ಹೊರಗಿನ ವಸ್ತುಗಳಲ್ಲಿ ಅಥವಾ ನಿನ್ನ ವ್ಯಕ್ತಿತ್ವದಲ್ಲಿ ಹುಡುಕುತ್ತಿದ್ದೀಯ. ಆದರೆ ನಿಜವಾದ ಮಸಿ ಇರುವುದು ನಾನು ಸುಖಿಯಾಗಲು ಇದು ಬೇಕು ಎಂದು ನೀನು ನಿನ್ನನ್ನು ಗುರುತಿಸಿ ಕೊಂಡಿದ್ದೀಯಲ್ಲ, ಆ ತಪ್ಪಾದ ಅರಿವಿನಲ್ಲಿ.

ನೀನು ಆಸೆಯನ್ನು ಹೊರಗೆ ಎದುರಿಸುತ್ತಿಲ್ಲ, ನೀನೇ ಆಸೆಯಾಗಿ ಬದಲಾಗಿದ್ದೀಯ. ಅಲ್ಲಿಯವರೆಗೆ ರಾಜ ತನ್ನನ್ನು ತಾನು ಬಾಧಿತ ವ್ಯಕ್ತಿ ಎಂದು ಅಂದುಕೊಂಡಿದ್ದ. ಆದರೆ ಅಷ್ಟಾವಕ್ರರ ಮಾತು ಅವನನ್ನು ಎಚ್ಚರಿಸಿತು.

ಆ ಕ್ಷಣದಲ್ಲಿ ಅವನಿಗೆ ಅರಿವಾಯಿತು –ಸಮಸ್ಯೆ ಆಸೆಗಳಲ್ಲ, ನಾನು ಈ ದೇಹ, ನಾನು ಈ ಮನಸ್ಸು, ನಾನು ಈ ಆಸೆ ಎಂಬ ತಪ್ಪಾದ ಗುರುತಿಸುವಿಕೆ. ಅಷ್ಟಾವಕ್ರ ಗೀತೆಯು ನಮಗೆ ಕಲಿಸುವುದು ಜೀವನವನ್ನು ಸುಧಾರಿಸುವುದನ್ನಲ್ಲ, ಬದಲಾಗಿ ಸುಧಾರಿಸಲು ಯತ್ನಿಸುತ್ತಿರುವ ಆ ಸುಳ್ಳು ನಾನು ಎಂಬ ಅಸ್ಮಿತೆಯನ್ನು ಕಳೆದುಕೊಳ್ಳುವುದನ್ನು.

ಅಷ್ಟಾವಕ್ರ ಗೀತೆಯ ಮೊದಲ ಅಧ್ಯಾಯದಲ್ಲಿದೆ:

ಮುಕ್ತಾಭಿಮಾನೀ ಮುಕ್ತೋ ಹಿ ಬದ್ಧೋ ಬದ್ಧಾಭಿಮಾನಿನಃ
ಕಿಂವದಂತೀಹ ಸತ್ಯೇಯಂ ಯಾ ಮತಿಃ ಸಾ ಗತಿರ್ಭವೇತ್

ಅಷ್ಟಾವಕ್ರರು ಇಲ್ಲಿ ದೊಡ್ಡ ಸತ್ಯವೊಂದನ್ನು ಬಿಚ್ಚಿಡುತ್ತಾರೆ. ನೀವು ನಾನು ಪಾಪಿ, ನಾನು ಆಸೆಬುರುಕ, ನಾನು ಸಂಸಾರಿ ಎಂದು ನಿಮ್ಮನ್ನು ನೀವು ಒಂದು ಚೌಕಟ್ಟಿಗೆ ಹಾಕಿಕೊಂಡ ತಕ್ಷಣ, ಆ ಚೌಕಟ್ಟೇ ನಿಮ್ಮ ಪಂಜರವಾಗುತ್ತದೆ.


ನೀವು ಆಸೆಯನ್ನು ಬಿಡಲು ಹೋರಾಡುತ್ತಿದ್ದೀರಿ ಎಂದರೆ, ನೀವು ಈಗಾಗಲೇ ನಾನು ಆಸೆ ಉಳ್ಳವನು ಎಂದು ಒಪ್ಪಿಕೊಂಡಿದ್ದೀರಿ ಎಂದರ್ಥ. ನಿಮ್ಮ ಮತಿ (ಬುದ್ಧಿ/ನಂಬಿಕೆ) ಹೇಗಿದೆಯೋ ನಿಮ್ಮ ಸ್ಥಿತಿಯೂ ಹಾಗೆಯೇ ಇರುತ್ತದೆ. ನೀವು ನಿಮ್ಮನ್ನು ದೇಹ ಮತ್ತು ಮನಸ್ಸಿನಿಂದ ಬೇರ್ಪಡಿಸಿ ನಾನು ಕೇವಲ ಸಾಕ್ಷಿ ಚೈತನ್ಯ ಎಂದು ಅರಿತ ಕ್ಷಣದಲ್ಲಿ, ಯಾವ ಆಸೆಯೂ ನಿಮ್ಮನ್ನು ಮುಟ್ಟಲಾರದು.

ಏಕೆಂದರೆ ಆಸೆ ಇರುವುದು ಮನಸ್ಸಿಗೆ, ಆತ್ಮಕ್ಕಲ್ಲ. ಈ ಶ್ಲೋಕವು ಸುಧಾರಣೆಯ ಬಗ್ಗೆ ಮಾತನಾಡುವುದಿಲ್ಲ. ನೀವು ಕೆಟ್ಟವರಿಂದ ಒಳ್ಳೆಯವರಾಗಿ ಎಂದು ಅಷ್ಟಾವಕ್ರರು ಹೇಳುತ್ತಿಲ್ಲ. ಬದಲಾಗಿ, ನೀವು ಮೊದಲೇ ಮುಕ್ತರು, ಆದರೆ ನೀವು ಬಂಧಿತರೆಂದು ಭ್ರಮೆಯಲ್ಲಿದ್ದೀರಿ ಎಂದು ನೆನಪಿಸುತ್ತಿದ್ದಾರೆ.


ನಾವು ನಮ್ಮನ್ನು ಯಾವುದರ ಜೊತೆ ಗುರುತಿಸಿಕೊಳ್ಳುತ್ತೇವೆಯೋ ಅದೇ ನಮ್ಮ ಸಂಕೋಲೆಯಾಗುತ್ತದೆ. ಒಂದು ಹಳೆಯ ಗಾದೆ ಮಾತಿದೆ – ಯಾದೃಶೀ ಭಾವನಾ ಯಸ್ಯ ಸಿದ್ಧಿರ್ಭವತಿ ತಾದೃಶೀ ಅಂದರೆ, ಮನುಷ್ಯನ ಬುದ್ಧಿ ಅಥವಾ ಆಲೋಚನೆ ಹೇಗಿರುತ್ತದೆಯೋ, ಅವನ ಗತಿಯೂ ಹಾಗೆಯೇ ಆಗುತ್ತದೆ. ಇಂದಿನ ದಿನಗಳಲ್ಲಿ ಪ್ರಾಪಂಚಿಕ ವಸ್ತುಗಳಲ್ಲಿ ಸುಖವನ್ನು ಅರಸುತ್ತಿರುವ ನಾವು, ಬೇರೆಯವರನ್ನು ಮೆಚ್ಚಿಸಲು ನಮ್ಮದಲ್ಲದ ಬದುಕನ್ನು ಆವಾಹಿಸಿ ಕೊಂಡಿರುವ ನಮ್ಮಂಥವರಿಗೆ ಈ ಮಾತುಗಳು ದೊಡ್ಡ ಪಾಠ.

ಆದ್ದರಿಂದಲೇ ನಮ್ಮ ಆಲೋಚನೆಗಳನ್ನ ಹಿಡಿತದಲ್ಲಿರಿಸಿಕೊಂಡು ಆಸೆಗಳ ಮೂಲವನ್ನು ಅರ್ಥ ಮಾಡಿಕೊಂಡು ಅವುಗಳಿಂದ ಬೇರ್ಪಟ್ಟಾಗ ಜೀವನ ಸರಳವಾಗುತ್ತದೆ.

**– ರೂಪಾ** ಗುರುರಾಜ್



## ನಾನು ಮರವಾಗಿದ್ದರೆ ಪ್ರಕೃತಿಯ ಹೃದಯದ ಧ್ವನಿ





ನಾನು ಮರವಾಗಿದ್ದರೆ ಎಂಬ ಕಲ್ಪನೆ ನನ್ನ ಮನಸ್ಸಿನಲ್ಲಿ ಮೂಡಿದಾಗ, ಅದು ಕೇವಲ ಒಂದು ಕನಸಲ್ಲ; ಅದು ಪ್ರಕೃತಿಯೊಂದಿಗಿನ ನನ್ನ ಆತ್ಮೀಯ ಸಂಬಂಧದ ಅಭಿವ್ಯಕ್ತಿ. ಮರಗಳು ಮಾತಾಡುವುದಿಲ್ಲ, ಆದರೆ ಅವುಗಳ ಮೌನದಲ್ಲೇ ಸಾವಿರ ಕಥೆಗಳಿವೆ. ನಾನು ಒಂದು ಮರವಾಗಿದ್ದರೆ, ನನ್ನ ಜೀವನದ ಪ್ರತಿಯೊಂದು ಕ್ಷಣವೂ ಇತರರಿಗಾಗಿ ಸಮರ್ಪಿತವಾಗಿರುತ್ತಿತ್ತು.

ನಾನು ಒಂದು ಹಸಿರು ನೆರಳು ನೀಡುವ ದೊಡ್ಡ ಮರವಾಗಿರುತ್ತಿದ್ದೆ. ಬೇಸಿಗೆಯ ಉರಿಯುವ ಬಿಸಿಲಿನಲ್ಲಿ, ನನ್ನ ನೆರಳಿನಲ್ಲಿ ವಿಶ್ರಾಂತಿ ಪಡೆಯುವ ಜನರನ್ನು ನೋಡಿ ನನಗೆ ಅಪಾರ ಸಂತೋಷವಾಗುತ್ತಿತ್ತು. ದಾರಿಹೋಕರು, ಕಾರ್ಮಿಕರು, ವಿದ್ಯಾರ್ಥಿಗಳು ಯಾರೇ ಆಗಿರಲಿ, ನನ್ನ ನೆರಳಿನಲ್ಲಿ ಕುಳಿತು ಕ್ಷಣಕಾಲ ಶಾಂತಿಯನ್ನು ಅನುಭವಿಸಿದರೆ, ಅದು ನನ್ನ ಜೀವನದ ಉದ್ದೇಶವೇ ಆಗಿರುತ್ತಿತ್ತು.

ವ'ಂಳ'ಯಂ ಕಾಲದಲ್ಲಿ, ನನ್ನ ಎಲೆಗಳ ಮೇಲೆ ಬಿದ್ದ ಮಳೆಯ ಹನಿಗಳು ಸಂಗೀತದಂತೆ ಕೇಳಿಸುತ್ತಿದ್ದವು. ಹನಿಗಳ ಆಟದಲ್ಲಿ ನಾನು ಆನಂದಿಸುತ್ತಿದ್ದೆ. ನನ್ನ ಬೇರುಗಳು ಭೂಮಿಯನ್ನು ಬಲವಾಗಿ ಹಿಡಿದುಕೊಂಡು, ಮಣ್ಣಿನ ಕೊಚ್ಚು ಹೋಗುವುದನ್ನು ತಡೆಯುತ್ತವೆ. ನಾನು ಕೇವಲ ಒಂದು ಮರವಾಗಿರದೇ, ಭೂಮಿಯ ರಕ್ಷಕನಾಗಿರುತ್ತಿದ್ದೆ.

ನಾನು ಮರವಾಗಿದ್ದರೆ, ಪಕ್ಷಿಗಳಿಗೆ ಮನೆ ಆಗುತ್ತಿದ್ದೆ. ಚಿಲಿಪಿಲಿ ಹಾಡುವ ಹಕ್ಕಿಗಳು ನನ್ನ ಕೊಂಬೆಗಳ ಮೇಲೆ ಗೂಡು ಕಟ್ಟಿಕೊಂಡು ತಮ್ಮ ಜೀವನವನ್ನು ನಡೆಸುತ್ತಿದ್ದವು. ಬೆಳಗಿನ ಜಾವ ಅವರ ಕಲರವ ನನ್ನ ದಿನವನ್ನು ಆರಂಭಿಸುತ್ತಿತ್ತು. ಹಕ್ಕಿಗಳ ಸಂತೋಷವೇ ನನ್ನ ಸಂತೋಷವಾಗುತ್ತಿತ್ತು. ನಾನು ಅವರಿಗೆ ಆಶ್ರಯ ನೀಡುವ ಮೂಲಕ ಪ್ರಕೃತಿಯ ಒಂದು ಮಹತ್ವದ ಭಾಗವಾಗಿರುತ್ತಿದ್ದೆ.

ಮನುಷ್ಯರಿಗೆ ನಾನು ಉಸಿರಾಗಿರುತ್ತಿದ್ದೆ. ನಾನು ನೀಡುವ ಆಮ್ಲಜನಕ ಅವರ ಬದುಕಿನ ಮೂಲವಾಗಿರುತ್ತದೆ. ಅವರಿಂದ ಹೊರಬರುವ ಕಾರ್ಬನ್ ಡೈಆಕ್ಸೈಡ್ ಅನ್ನು ನಾನು ತೆಗೆದುಕೊಂಡು, ಮತ್ತೆ ಅವರಿಗೆ ಜೀವ ನೀಡುತ್ತಿದ್ದೆ. ಈ ನಿಸ್ವಾರ್ಥ ಸೇವೆಯಲ್ಲೇ ನನ್ನ ಜೀವನದ ಅರ್ಥ ಇರುತ್ತಿತ್ತು. ಪ್ರತಿಫಲದ ನಿರೀಕ್ಷೆಯಿಲ್ಲದೆ ನೀಡುವುದೇ ನನ್ನ ಧರ್ಮವಾಗಿರುತ್ತಿತ್ತು.

ಆದರೆ, ನಾನು ಮರವಾಗಿದ್ದರೆ, ನನಗೆ ನೋವುಗಳೂ ಇರುತ್ತಿದ್ದವು. ಕೆಲವರು ನನ್ನ ಕೊಂಬೆಗಳನ್ನು ಕತ್ತರಿಸುತ್ತಾರೆ, ಕೆಲವರು ನನ್ನನ್ನು ಸಂಪೂರ್ಣವಾಗಿ ಕಡಿದು ಹಾಕುತ್ತಾರೆ. ನನ್ನ ಅಳಲು ಯಾರಿಗೂ ಕೇಳಿಸದು. ನಾನು ಮಾತಾಡಲಾರೆ, ಕಣ್ಣೀರಿಡಲಾರೆ. ಆದರೆ ನನ್ನ ಹೃದಯದಲ್ಲಿ ನೋವು ತುಂಬಿರುತ್ತಿತ್ತು. ಪ್ರಕೃತಿಯನ್ನು ಉಳಿಸಿ ಎಂಬ ನನ್ನ ಮೌನದ ಕೂಗು ಮಾನವರಿಗೆ ಕೇಳಿಸಲಿ ಎಂದು ನಾನು ಆಶಿಸುತ್ತಿದ್ದೆ.

ನಾನು ಮರವಾಗಿದ್ದರೆ, ಮಕ್ಕಳಿಗೆ ಪ್ರೇರಣೆಯಾಗುತ್ತಿದ್ದೆ. ಅವರು ನನ್ನ ನೆರಳಿನಲ್ಲಿ ಆಟವಾಡುತ್ತಾ, ನನ್ನ ಬಗ್ಗೆ ತಿಳಿದುಕೊಳ್ಳುತ್ತಿದ್ದರು. ಮರಗಳನ್ನು ಉಳಿಸಬೇಕು ಎಂಬ ಅರಿವು ಅವರಲ್ಲಿ ಮೂಡುತ್ತಿದ್ದರೆ, ಅದು ನನ್ನ ಜೀವನದ ದೊಡ್ಡ ಸಾಧನೆ ಆಗುತ್ತಿತ್ತು.

ಸಂಜೆ ವೇಳೆಗೆ, ಸೂರ್ಯಾಸ್ತದ ಹೊಳಪಿನಲ್ಲಿ ನಾನು ಇನ್ನಷ್ಟು ಸುಂದರವಾಗಿ ಕಾಣುತ್ತಿದ್ದೆ. ಗಾಳಿ ಬೀಸಿದಾಗ ನನ್ನ ಎಲೆಗಳು ತೂಗುತ್ತಾ ಒಂದು ರಾಗವನ್ನು ಮೂಡಿಸುತ್ತಿದ್ದವು. ಆ ರಾಗದಲ್ಲಿ ಪ್ರಕೃತಿಯ ಸೌಂದರ್ಯ ಪ್ರತಿಫಲಿಸುತ್ತಿತ್ತು. ನಾನು ಮಾತಾಡದೆ ಇದ್ದರೂ, ನನ್ನ ಅಸ್ತಿತ್ವವೇ ಒಂದು ಸಂದೇಶವಾಗಿರುತ್ತಿತ್ತು ನೀವು ಪ್ರಕೃತಿಯನ್ನು ಕಾಪಾಡಿದರೆ, ಪ್ರಕೃತಿ ನಿಮ್ಮನ್ನು ಕಾಪಾಡುತ್ತದೆ.

ಕೊನೆಯಲ್ಲಿ, ನಾನು ಮರವಾಗಿದ್ದರೆಟಿ ಎಂಬ ಕಲ್ಪನೆ ನಮಗೆ ಒಂದು ಪಾಠವನ್ನು ಕಲಿಸುತ್ತದೆ. ಮರಗಳು ನಿಸ್ವಾರ್ಥವಾಗಿ ನೀಡುತ್ತವೆ, ಸಹಿಸುತ್ತವೆ, ಮತ್ತು ಬದುಕನ್ನು ಉಳಿಸುತ್ತವೆ. ನಾವು ಕೂಡ ಅವರಂತೆ ಬದುಕಲು ಪ್ರಯತ್ನಿಸಿದರೆ, ಈ ಜಗತ್ತು ಇನ್ನಷ್ಟು ಸುಂದರವಾಗುತ್ತದೆ.

ಹೀಗಾಗಿ, ನಾನು ಮರವಾಗಿದ್ದರೆ ನಾನು ಕೇವಲ ಒಂದು ಸಸ್ಯವಲ್ಲ, ಜೀವಗಳಿಗೆ ಆಶ್ರಯ ನೀಡುವ, ಪ್ರೀತಿಯನ್ನು ಹಂಚುವ, ಮತ್ತು ಪ್ರಕೃತಿಯ ಹೃದಯದ ಧ್ವನಿಯಾಗಿರುತ್ತಿದ್ದೆ.

**– ವಿಶ್ವಾಸ್ ಡಿ ಗೌಡ,** ಸಕಲೇಶಪುರ
9743636831

## ಅಜ್ಜಿ ಮನೆಯ ಯಾತ್ರೆ

ಪರೀಕ್ಷೆಗಳ ನಡುವೆ ಎಲ್ಲರೂ ಕಳೆದು ಹೋಗಿದ್ದೀರಿ ಎಂದು ನನಗೆ ಗೊತ್ತು. ಆದ್ದರಿಂದ ತುಂಬಾ ಗಂಭೀರ ವಿಷಯಗಳನ್ನು ನಾನಿವತ್ತು ಹೇಳುವುದಿಲ್ಲ. ನೀವು ಪರೀಕ್ಷೆಯನ್ನು ಬರೆದುದಾಗಿದೆ ಫಲಿತಾಂಶ ಹೇಗೋ ಏನೋ ಎಂದು ದುಸ್ವಪ್ನ ಕಾಣಬೇಡಿ. ಅದರ ಬದಲಾಗಿ ನಿಮ್ಮ ಮುಂದಿನ ದಿನಗಳ ಬಗ್ಗೆ ಹಗಲು ಗನಸುಗಳನ್ನು ನೋಡಿ. ರಜೆಯನ್ನು ಯೋಜಿಸಿ. ರಜೆಯಲ್ಲಿ ಅಜ್ಜಿಯ ಮನೆಗೆ ಹೋಗುವುದು ನಿಮ್ಮ ಯೋಜನೆಯ ಒಂದು ಭಾಗವಾಗಿರಲಿ.

ಅಜ್ಜಿಯ ಮನೆಯ ವಾಸ ನಿಮ್ಮ ಜೀವನದ ಏಕತಾನತೆಯನ್ನು ನಿವಾರಿಸುವ ಒಂದು ದಿವ್ಯೌಷಧಿ ಎಂಬುದು ನಿಮಗೆ ನೆನಪಿರಲಿ. ಅಜ್ಜಿ ಮಾಡುವ ತಿಂಡಿಗಳು, ಅದರ ಹಿಂದಿರುವ ಪ್ರೀತಿ, ಒತ್ತಡ ಮುಕ್ತ ವಾತಾವರಣ ಗ್ರಾಮೀಣ ಬದುಕು, ಅಲ್ಲಿನ ಆಟಗಳು ನಿಮ್ಮ ಬದುಕಿಗೆ ಹೊಸ ಚೈತನ್ಯವನ್ನು ಮೂಡಿಸುತ್ತದೆ. ಸೃಜನಶೀಲತೆಯನ್ನು ಹೆಚ್ಚಿಸುತ್ತದೆ. ನಿಮ್ಮ ಕಲ್ಪನಾ ಶಕ್ತಿ ಇಮ್ಮಡಿಯಾಗುತ್ತದೆ.

ಹೀಗೆ ಅಜ್ಜಿಯ ಮನೆಗೆ ಅಥವಾ ಪಿಕ್ನಿಕ್ ನಮಗೆ ಹೇಗೆ ಉತ್ಸಾಹ ತುಂಬುತ್ತದೆ ಅಂತ ಕೇಳುತ್ತೀರಾ? ಪ್ರತಿ ಬಾರಿ ಜೀವಜಾಲದ ಬದಲಾವಣೆ ರಾಸಾಯನಿಕ ಎನ್ನುತ್ತೀರಲ್ಲ ಪ್ರವಾಸಕ್ಕೆ ಹೋಗಿಬಂದ ಮೇಲೆ ನಮ್ಮಲ್ಲಿ ತುಂಬುವ ಹುಮ್ಮಸ್ಸು ಕೂಡಾ ರಾಸಾಯನಿಕವೇ ಎಂದು ಕೇಳುತ್ತೀರಾ? ಅದೂ ಸರಿಯೇ ಇದೂ ರಾಸಾಯನಿಕವೇ. ಇಂತಹ ಸಂದರ್ಭಗಳಲ್ಲಿ ದೇಹದಲ್ಲಿ ಒಂದು ರಾಸಾಯನಿಕ ಸ್ವಲ್ಪ ಜಾಸ್ತಿ ಬಿಡುಗಡೆಯಾಗುತ್ತದೆ. ಈ ರಾಸಾಯನಿಕದ ಹೆಸರು ಸೆರಟೋನಿನ್. ಇದೊಂದು ನರ ಚೋದಕ ಮತ್ತು ಒಂದು ಹಾರ್ಮೋನ್. ಇದನ್ನು ರಾಸಾಯನಿಕವಾಗಿ 5 ಅಂದರೆ 5. ಇದನ್ನು ಸಂತಸದ ಹಾರ್ಮೋನ್ ಎಂದು ಕರೆಯುತ್ತೇವೆ. ಈ ಸೆರಟೋನಿನ್ ಮೂಲತಃ ನಿಮ್ಮ ಭಾವನೆಗಳನ್ನು, ಹಸಿವು, ಜೀರ್ಣಕ್ರಿಯೆ, ಮತ್ತು ನಿದ್ದೆಯನ್ನು ಪ್ರಭಾವಿಸುತ್ತದೆ. ಇಂತಹ ರಾಸಾಯನಿಕ ಹೆಚ್ಚುವರಿಯಾಗಿ ಸ್ರವಿಸಿದರೆ ನಿಮ್ಮ ಸಂತೋಷ ಮತ್ತಷ್ಟು ಹೆಚ್ಚುತ್ತದೆ. ಅಜ್ಜಿಮನೆಗೆ ಹೋದಾಗ ನಿಮ್ಮಜ್ಜಿ ಮೊಮ್ಮಕ್ಕಳು ಬರುತ್ತಾರೆಂದು ಗೇರು ಬೀಜ ಸುಟ್ಟು ರುಚಿಯಾಗಿ ಸಿದ್ದಪಡಿಸಿ ನೆಲಗಡಲೆಯ ಉಂಡೆ, ಚಕ್ಕುಲಿ ಹೀಗೆ ಒಣ ಹಣ್ಣುಗಳು ಮತ್ತು ಬೀಜಗಳ ದಾಸ್ತಾನನ್ನು ನಿಮಗಾಗಿ ಸಂಗ್ರಹಿಸಿಟ್ಟಿರುತ್ತಾರೆ. ಇವುಗಳು ನಿಮಗೆ ತಿನ್ನಲು ಯಥೇಚ್ಚವಾಗಿ ಲಭ್ಯ.

ಈ ಸೆರಟೋನಿನ್ ಇದೆಯಲ್ಲ ಇದು ತಯಾರಾಗಲು ಅವಶ್ಯಕ ಅಮೈನೋ ಆಮ್ಲವಾದ ಟ್ರಿಪ್ಟೋಫೇನ್ ಬೇಕು. ಅಂದರೆ ಇದನ್ನು ನಮ್ಮ ದೇಹ ತಯಾರಿಸಲಾರದು. ಆಹಾರದ ಮೂಲಕ ನಾವೇ ಒದಗಿಸಬೇಕು. ಇದು ನಾವು ಬಳಸುವ ಮೊಟ್ಟೆ, ಹಾಲು, ಒಣ



ಹಣ್ಣುಗಳು ಮತ್ತು ಬೀಜಗಳು, ಮಾಂಸ, ಬೆಣ್ಣೆಗಳಲ್ಲಿ ದೊರೆಯುತ್ತದೆ. ಪಿಕ್ನಿಕ್‌ಗಳಿಗೆ, ಅಜ್ಜಿ ಮನೆಗೆ ಹೋದಾಗ ಇವುಗಳು ನಿಮ್ಮ ಹೊಟ್ಟೆ ಸೇರಲು ಕಾಯುತ್ತಿರುತ್ತವೆ ಅಲ್ಲವೇ. ಆದ್ದರಿಂದ ಮಕ್ಕಳ ರಜೆಯು ಅಜ್ಜಿಯ ಮನೆಯ ಪ್ರವಾಸವಿಲ್ಲದೇ ಪೂರ್ಣವಾಗುವುದಿಲ್ಲ. ಏಕೆಂದರೆ ಅಜ್ಜಿ ಮನೆಯ ಯಾತ್ರೆ ನಮಗೆ ಹೊಸ ಹುಮ್ಮಸ್ಸು ತುಂಬುತ್ತದೆ.

**– ದಿವಾಕರ ಶೆಟ್ಟಿ ಎಚ್,** ಮಂಗಳೂರು

# ಸಮಾಜದ ಅಭಿರುಚಿ ಸಾಗುತ್ತಿರುವ ದಾರಿ ಆತಂಕಕಾರಿ

## ಕಸಾಪ ಜಿಲ್ಲಾಧ್ಯಕ್ಷ ಮಲ್ಲೇಶಗೌಡ ಹೇಳಿಕೆ | ಸರ್ಕಾರಿ ಕಾಲೇಜಿನಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ

• ಪ್ರಜೋದಯ ವರದಿ

**ಹಾಸನ:** ಕ್ಷೇತ್ರದ ಅಭಿವೃದ್ಧಿಗಾಗಿ ಜನರಿಂದ ಆಯ್ಕೆಯಾದ ಶಾಸಕ ಐಪಿಎಲ್ ಟಿಕೆಟ್ ಕೇಳುತ್ತಾರೆ, ರಾಷ್ಟ್ರಕ್ಕೆ ಬೂಕರ್ ಪ್ರಶಸ್ತಿ ತಂದು ಕೊಡ ಮಹಿಳೆಯನ್ನು ಸ್ವಾಗತಿಸಬೇಕಾದವರು ಕ್ರಿಕೆಟಿಗರ ಸ್ವಾಗತಿಸಲು ನಿಲ್ಲುತ್ತಿರುವುದು ಸಮಾಜದ ಅಭಿರುಚಿ ಎತ್ತ ಸಾಗುತ್ತಿದೆ ಎಂಬುದರ ದ್ಯೋತಕವಾಗಿದೆ ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಎಚ್.ಎಲ್.ಮಲ್ಲೇಶಗೌಡ ಅವರು ಹೇಳಿದರು.



ನಗರದ ಆರ್.ಸಿ.ರಸ್ತೆ ಗಂಧದ ಕೋಠಿ ಆವರಣದಲ್ಲಿರುವ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ 2025-2026ನೇ ಸಾಲಿನ ಸಾಂಸ್ಕೃತಿಕ ಕ್ರೀಡೆ, ಎನ್‌ಎಸ್‌ಎಸ್, ರೆಡ್‌ಕ್ರಾಸ್ ಮತ್ತು ಸ್ಕೌಟ್ಸ್ ಅಂಡ್ ಗೈಡ್ಸ್ ಚಟುವಟಿಕೆಗಳ ಉದ್ಘಾಟನಾ ಸಮಾರಂಭಕ್ಕೆ ಚಾಲನೆ ನೀಡಿ ಮಾತನಾಡಿ, ಶಿಕ್ಷಣದಲ್ಲಿ ಕಲಾ ವಿಭಾಗ ಮಹತ್ತರ ಪಾತ್ರ ವಹಿಸುತ್ತದೆ. ಇತ್ತೀಚಿನ ದಿನಗಳಲ್ಲಿ ಕಲಾ ವಿಭಾಗಕ್ಕೆ ದಾಖಲಾತಿ ಕಡಿಮೆಯಾಗುತ್ತಿರುವುದು ಬೇಸರದ ಸಂಗತಿ. ಶಿಕ್ಷಣವು ಕೇವಲ ಪುಸ್ತಕ ಜ್ಞಾನ ಅಥವಾ ಅಂಕಗಳಿಗೆ ಸೀಮಿತವಾಗಬಾರದು. ಅದು ವ್ಯಕ್ತಿತ್ವ ರೂಪಿಸುವ ಶಕ್ತಿಯಾಗಬೇಕು ಎಂದರು.

ಪ್ರಸ್ತುತ ದಿನಗಳಲ್ಲಿ ಶೈಕ್ಷಣಿಕ ದಿನಚರಿ ಅಸ್ತವ್ಯಸ್ತವಾಗಿದೆ. ಅದನ್ನು ಸರಿಪಡಿಸಬೇಕಾಗಿದೆ. ಇತ್ತೀಚಿನ ದಿನಗಳಲ್ಲಿ ಉನ್ನತ ಶಿಕ್ಷಣ ವ್ಯವಸ್ಥೆಯನ್ನು ಗಂಭೀರವಾಗಿ ಪರಿಗಣಿಸುತ್ತಿಲ್ಲ. ಅಂತೆಯೇ ಸಾಮಾನ್ಯ ವ್ಯವಸ್ಥೆಯನ್ನು ಕಡೆಗಣಿಸಲಾಗುತ್ತಿದೆ. ವಿದ್ಯಾರ್ಥಿಗಳು ಶಿಕ್ಷಣ ಎಂಬ ಪದದ ಅರ್ಥವನ್ನು ಮೊದಲು ತಿಳಿದುಕೊಳ್ಳಬೇಕು. ಪ್ರಾಥಮಿಕ ಶಿಕ್ಷಣದಿಂದ ಪದವಿ ಪೂರ್ವ ಶಿಕ್ಷಣದವರೆಗೆ ಶಿಕ್ಷಣ ವ್ಯವಸ್ಥೆ ಗಟ್ಟಿಯಾಗಬೇಕು. ಕಿರಿಯರಿಂದ ಹಿರಿಯರವರೆಗೆ ಅಭಿರುಚಿ ಹಾಳಾಗಿದೆ ಎಂದರು.

ತಮಗೂ ಐಪಿಎಲ್ ಟಿಕೆಟ್ ಕೊಡಿ ಎಂದು ಶಾಸಕರು ನಮ್ಮ ರಾಜ್ಯದಲ್ಲಿದ್ದಾರೆ. ಅವರ ಅಭಿರುಚಿ ಏನಾಗಬೇಕಿತ್ತು, ಕ್ಷೇತ್ರದ ಜನರು ಅವರನ್ನು ಯಾವ ಉದ್ದೇಶಕ್ಕೆ ಆಯ್ಕೆ ಮಾಡಿದ್ದಾರೆ. ಈ ಬಗ್ಗೆ ಯುವ ಸಮಾಜ ಯೋಚನೆ ಮಾಡಬೇಕಿದೆ ಎಂದರು.

ಅಂತಾರಾಷ್ಟ್ರೀಯ ಬೂಕರ್ ಪ್ರಶಸ್ತಿ ತಂದ ಹೆಣ್ಣು ಮಗಳನ್ನು ಕರೆತರಲು ಹೋಗಬೇಕಾದ ಮಹನೀಯರು ಕ್ರಿಕೆಟ್ ತಂಡವನ್ನು ಆಹ್ವಾನಿಸುವಲ್ಲಿ ಮುಂಚೂಣಿಯಲ್ಲಿರುತ್ತಾರೆ. ಇವೆಲ್ಲವೂ ಒಳ್ಳೆಯ ಬೆಳವಣಿಗೆಗಳಲ್ಲ, ನಮ್ಮ ಅಭಿರುಚಿಗಳನ್ನು ತಿದ್ದಿಕೊಳ್ಳುವ ಕೆಲಸವಾಗಬೇಕಿದೆ ಎಂದು ತಿಳಿಸಿದರು.

ಪ್ರಾಂಶುಪಾಲ ಡಿ.ಕೆ.ಮಂಜಯ್ಯ ಅವರು ಮಾತನಾಡಿ, ನಾವು ಜಗರು ಮತ್ತು ಜಾಗೃತಿಯ ಕಾಲಘಟ್ಟದಲ್ಲಿದ್ದೇವೆ. ಹದಿಹರೆಯದ ವಯಸ್ಸಿನಲ್ಲಿ ಗುರು-ಹಿರಿಯರ ಮಾರ್ಗದರ್ಶನ ಪಡೆಯಬೇಕು. ಶಿಕ್ಷಣ ವ್ಯವಸ್ಥೆಯಲ್ಲಿ ಪಠ್ಯ ಮತ್ತು ಪಠ್ಯೇತರ ಚಟುವಟಿಕೆಯಲ್ಲಿ ಭಾಗವಹಿಸಬೇಕೆಂದರು. ಬಂದು ಹೋಗುವುದರ ಜೊತೆಗೆ ಸಂಬಂಧಗಳ ಬೆಸುಗೆ ಬಹಳ ಮುಖ್ಯವಾಗಿದೆ. ಯಾವುದೇ ವ್ಯವಸ್ಥೆಯಾಗಲಿ ನಿಷ್ಠೆ, ಪ್ರಾಮಾಣಿಕತೆ, ಪರಿಶುದ್ಧ ಮನಸ್ಥಿತಿ ಇರಬೇಕು. ಅವಕಾಶ ಸಿಕ್ಕಾಗ ಬಳಸಿಕೊಳ್ಳಬೇಕು ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಪ್ರಾಸ್ತಾವಿಕ ನುಡಿಗಳನ್ನಾಡಿದ ಸಾಂಸ್ಕೃತಿಕ ವೇದಿಕೆ ಸಂಚಾಲಕ ಜಿ.ಆರ್.ಮೋಹನ್ ಕುಮಾರ್ ಅವರು ಮಾತನಾಡಿ, ವಿದ್ಯಾರ್ಥಿಗಳಲ್ಲಿರುವ ಸುಪ್ತ ಪ್ರತಿಭೆಯ ಅನಾವರಣ ಮಾಡಲು ಸಾಂಸ್ಕೃತಿಕ ವೇದಿಕೆ ಸಹಾಯ ಮಾಡುತ್ತದೆ. ಮಾನಸಿಕ ಸಾಮರ್ಥ್ಯ ಹೆಚ್ಚಿಸುವಲ್ಲಿ ವೇದಿಕೆಯ ಪಾತ್ರ ಹಿರಿದಾಗಿದೆ. ಗ್ರಾಮೀಣ ಕ್ರೀಡೆಗಳನ್ನು ಪ್ರೋತ್ಸಾಹಿಸುವ ಕೆಲಸವನ್ನು ಮಾಡಲಾಗುತ್ತಿದೆ. ಎಲ್ಲಾ ಘಟಕಗಳು ತಮ್ಮದೇ ಆದ ವೈಶಿಷ್ಟ್ಯತೆ ಮೂಲಕ ಕೆಲಸ ಮಾಡುತ್ತಿದೆಯೆಂದು ಮಾಹಿತಿ ನೀಡಿದರು.

ಕಾಲೇಜಿನ ವಿವಿಧ ವಿಭಾಗಗಳಲ್ಲಿ ಪಿಹೆಚ್.ಡಿ. ಪದವಿ ಪಡೆದ ಉಪನ್ಯಾಸಕರನ್ನು ಅಭಿನಂದಿಸಲಾಯಿತು. ಸ್ಕೌಟ್ ಅಂಡ್ ಗೈಡ್ ಸಂಚಾಲಕ ಎಂ.ವಿ.ಹೇಮಾವತಿ, ರೆಡ್‌ಕ್ರಾಸ್ ಸಂಚಾಲಕ ಡಾ.ಸಿ.ಎಲ್.ಶಿವಕುಮಾರ್, ಕ್ರೀಡಾ ವಿಭಾಗದ ಸಂಚಾಲಕ ಡಾ.ಕೆ.ಆರ್.ಸುರೇಶ್‌ಕುಮಾರ್, ಎನ್‌ಎಸ್‌ಎಸ್ ಘಟಕದ ಸಂಚಾಲಕ ಹೆಚ್.ಎಂ.ಸುರೇಶ್‌ಕುಮಾರ್, ರೆಡ್ ರಿಬ್ಬನ್ ಕ್ಲಬ್ ಸಂಚಾಲಕ ಪಿ.ನಂದನ್, ವಿವಿಧ ವಿಭಾಗಗಳ ಮುಖ್ಯಸ್ಥರು, ಉಪನ್ಯಾಸಕರು, ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಹಿಂದಿ ವಿಭಾಗದ ಮುಖ್ಯಸ್ಥೆ ಇಂದಿರಾಮಣಿ ಸ್ವಾಗತಿಸಿದರು. ಕನ್ನಡ ವಿಭಾಗದ ಉಪನ್ಯಾಸಕ ಕಾಂತರಾಜು ನಿರೂಪಿಸಿದರು. ರಾಜ್ಯಶಾಸ್ತ್ರ ಉಪನ್ಯಾಸಕ ಲೋಕೇಶ್ ವಂದಿಸಿದರು. ವಿದ್ಯಾರ್ಥಿನಿ ದೀಕ್ಷಿತ ಪ್ರಾರ್ಥನೆ ಮಾಡಿದರು.

# ಧರಣೆ: ಜಿಲ್ಲಾಧಿಕಾರಿ ಕಚೇರಿ ಎದುರೇ ಅಡುಗೆ

• ಪ್ರಜೋದಯ ವರದಿ

**ಹಾಸನ:** ಜಿಲ್ಲಾಧಿಕಾರಿ ಕಚೇರಿ ಎದುರು ರೈತ ಸಂಘದ ವತಿಯಿಂದ ನಡೆಯುತ್ತಿರುವ ಅನಿರ್ದಿಷ್ಟಾವಧಿ ಧರಣಿ 3ನೇ ದಿನವೂ ಮುಂದುವರಿದಿದೆ. ಪ್ರತಿಭಟನಾಕಾರರು ಗ್ಯಾಸ್ ಸಿಲಿಂಡರ್ ಕೊರತೆಯಿಂದ ಅಡುಗೆ ಮಾಡಲು ಸೌದೆ ಒಲೆಯನ್ನೇ ಅವಲಂಬಿಸಬೇಕಾದ ಪರಿಸ್ಥಿತಿ ಎದುರಾಗಿದೆ.



ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲೇ ತಂಗಿರುವ ರೈತರು ತಮ್ಮ ಕುಟುಂಬ ಸಮೇತ ಧರಣಿ ನಡೆಸುತ್ತಿದ್ದಾರೆ. ಅಡುಗೆ ಮಾಡಲು ಅಗತ್ಯ ಸೌಲಭ್ಯಗಳಿಲ್ಲದೆ, ಹೋರಾಟಗಾರರು ಸ್ವತಃ ಸೌದೆ ಸಂಗ್ರಹಿಸಿ ಆವರಣದಲ್ಲೇ ಒಲೆ ಹಾಕಿ ಅಡುಗೆ ತಯಾರಿಸಿಕೊಂಡು ಅಸಮಾಧಾನ ವ್ಯಕ್ತಪಡಿಸಿದರು. ಬೆಳಗಿನ ಉಪಹಾರದಿಂದ ರಾತ್ರಿ ಊಟದವರೆಗೆ ಎಲ್ಲವೂ ಸೌದೆ ಒಲೆಯಲ್ಲಿ ಸಿದ್ಧವಾಗುತ್ತಿದೆ.

ಆಲೂರು ತಾಲ್ಲೂಕಿನ ಶಿರುಬೆಟ್ಟದಲ್ಲಿ ನಡೆಯುತ್ತಿರುವ ಗಣಿಗಾರಿಕೆಯನ್ನು ತಕ್ಷಣ ನಿಲ್ಲಿಸ ಬೇಕು. ಅದರಿಂದ ಪರಿಸರ ಹಾನಿ ಮಾತ್ರವಲ್ಲ ಸುತ್ತಮುತ್ತಲಿನ ಗ್ರಾಮಗಳ ಜನ ಜೀವನಕ್ಕೂ ಸಂಕಷ್ಟ ಉಂಟಾಗಿದೆ. ಜೊತೆಗೆ ಬೀರನಹಳ್ಳಿ ಕೆರೆ ಸುತ್ತ ಮುತ್ತಲಿನ ನಿವೇಶನ ರಹಿತ ಕುಟುಂಬಗಳಿಗೆ ವಾಸಸ್ಥಳ ಕಲ್ಪಿಸಬೇಕೆಂದು ಒತ್ತಾಯಿಸಿದರು.

ಮೂರು ದಿನಗಳಿಂದ ಧರಣಿ ನಡೆಯುತ್ತಿದ್ದರೂ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಸಮಸ್ಯೆ ಆಲಿಸಲು ಮುಂದಾಗಿಲ್ಲ ಎಂಬ ಅಸಮಾಧಾನ ಪ್ರತಿಭಟನಾಕಾರರಲ್ಲಿ ತೀವ್ರವಾಗಿದೆ. ವಿಶೇಷವಾಗಿ ಮಹಿಳೆಯರು ಸಹ ಹಗಲು-ರಾತ್ರಿ ಧರಣಿಯಲ್ಲಿ ಪಾಲ್ಗೊಂಡಿದ್ದರೂ ಆಡಳಿತದ ನಿರ್ಲಕ್ಷ್ಯ ಆಕ್ರೋಶಕ್ಕೆ ಕಾರಣವಾಗಿದೆ. ನ್ಯಾಯಕ್ಕಾಗಿ ಹೋರಾಟ ಮಾಡುತ್ತಿದ್ದೇವೆ. ಕನಿಷ್ಠ ಅಡುಗೆ ಮಾಡಲು ಬೇಕಾದ ಸಿಲಿಂಡರ್ ಕೂಡ ಸಿಗದ ಪರಿಸ್ಥಿತಿ ಎದುರಾಗಿದೆ. ಇದು ನಮ್ಮ ಸ್ಥಿತಿಗತಿಯ ಗಂಭೀರತೆಯನ್ನು ತೋರಿಸುತ್ತದೆಂದು ಪ್ರತಿಭಟನಾಕಾರರು ಅಸಮಾಧಾನ ವ್ಯಕ್ತಪಡಿಸಿದರು.

ಸರ್ಕಾರ ಹಾಗು ಜಿಲ್ಲಾಡಳಿತ ತಕ್ಷಣ ಸ್ಪಂದಿಸಿ ಬೇಡಿಕೆ ಈಡೇರಿಸದಿದ್ದರೆ ಹೋರಾಟವನ್ನು ಇನ್ನಷ್ಟು ತೀವ್ರಗೊಳಿಸುವುದಾಗಿ ರೈತ ಸಂಘ ಎಚ್ಚರಿಕೆ ನೀಡಿದೆ. ಧರಣಿಯಲ್ಲಿ ರೈತ ಸಂಘದ ಅಧ್ಯಕ್ಷ ಬಾಬು, ದಾಸೇಗೌಡ, ವಿಠಲ್, ಪವಿತ್ರ, ಕಾಳಕ್ಕ, ಗಂಗಾಧರ್ ಇದ್ದರು.

# ಮಹಿಳೆಯರಿಗೆ ಹೆಚ್ಚಿನ ರಾಜಕೀಯ ಸ್ಥಾನಮಾನ ಅವಶ್ಯ

» ಮೊದಲನೇ ಪುಟದಿಂದ

ಉನ್ನತ ಮಟ್ಟದಲ್ಲಿ ಮಹಿಳೆ ಯರನ್ನು ನೋಡುತ್ತಿದ್ದೇವೆ. ಇನ್ನೂ ಪೂರ್ಣಮಟ್ಟದಲ್ಲಿ ಮಹಿಳೆಯರ ಮೇಲೆ ನಡೆಯುತ್ತಿರುವ ಶೋಷಣೆ ಹೋಗಲಾಡಿಸಲು ಸಾಧ್ಯವಾಗಿಲ್ಲ. ಅದಕ್ಕಾಗಿ ಹೋರಾಟ ಅಗತ್ಯವೆಂದರು.

ಮಹಿಳಾ ಸರ್ಕಾರಿ ನೌಕರರ ಸಂಘದ ಸದೃಢವಾಗಿರಬೇಕಾದರೆ ಸಂಘಟಿತ ಹೋರಾಟ ಅವಶ್ಯಕವಾಗಿದೆ. ಜಿಲ್ಲಾ ಸರ್ಕಾರಿ ನೌಕರರ ಸಂಘದಲ್ಲಿ ಮಹಿಳೆಯರ ಸಂಖ್ಯೆ ಕಡಿಮೆ ಇರುವು ದರಿಂದ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್.ಷಡಾಕ್ಷರಿ ಅವರ ಅನುಮತಿ ಮೇರೆಗೆ ಮಹಿಳಾ ನೌಕರರ ಸಂಘ ರಚನೆ ಮಾಡಲಾಗಿದೆ. ಜಿಲ್ಲಾ ಸಂಘ ರಾಜ್ಯದಲ್ಲಿ ಮಾದರಿಯಾಗಿ ಬೆಳೆಯಲಿ ಎಂದು ಹಾರೈಸಿದರು.

ಚಿಕ್ಕಮಗಳೂರು ಮಹಿಳಾ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷೆ ನಳಿನಾ ಅವರು ಮಾತನಾಡಿ, ಹಾಸನ ಜಿಲ್ಲೆಯ ಅಧ್ಯಕ್ಷೆ ಸಕ್ರಿಯರಾಗಿದ್ದು, ಅವರ ಮುಂದಾಳತ್ವದಲ್ಲಿ ಸಂಘ ಇನ್ನಷ್ಟು ಬಲಗೊಳ್ಳಲಿ. ಮಹಿಳಾ ಸಂಘಟನೆ ಬಲಗೊಳ್ಳಬೇಕಾದರೆ ಹಲವು ಸವಾಲುಗಳನ್ನು ಎದುರಿಸಬೇಕಾತ್ತದೆ, ಅದನ್ನೆಲ್ಲ ಮೆಟ್ಟಿ ನಿಂತು ಕೆಲಸ ಮಾಡಬೇಕೆಂದು ಹೇಳಿದರು.

ಮಹಿಳಾ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷೆ ಕೆ.ವೀಣಾ, ಪ್ರಧಾನ ಕಾರ್ಯದರ್ಶಿ ಕೆ.ಜೆ. ಸಾವಿತ್ರಮ್ಮ, ಕ್ರೀಡಾ ಕಾರ್ಯದರ್ಶಿ ಕಲಾವತಿ, ಕಸಾಪ ಗೌರವ ಕಾರ್ಯದರ್ಶಿ ಬಿ.ಆರ್. ಬೊಮ್ಮೇಗೌಡ ಮತ್ತಿತರರು ಹಾಜರಿದ್ದರು.

# ರಥೋತ್ಸವ ಸಿದ್ಧತೆ ಪರಿಶೀಲಿಸಿದ ಜಿಲ್ಲಾಧಿಕಾರಿ

» ಮೊದಲನೇ ಪುಟದಿಂದ

ರಥೋತ್ಸವದ ದಿನ ದೇವಾಲಯದ ಎಂಟು ಮೂಲೆಗಳಿಂದ ಹಿಡಿದು ಮುಖ್ಯ ರಸ್ತೆಯ ಕೆಂಪೇಗೌಡ ವೃತ್ತದವರೆಗೆ ವಾಹನ ಸಂಚಾರವನ್ನು ನಿಷೇಧಿಸಲಾಗುವುದು. ದೇವಾಲಯದ ಹಿಂಭಾಗದಲ್ಲಿ ಸಮರ್ಪಕ ವಾಹನ ನಿಲುಗಡೆ ವ್ಯವಸ್ಥೆ ಮಾಡಲಾಗಿದ್ದು, ವಾಹನ ಸವಾರರು ಸಹಕರಿಸುವಂತೆ ಅವರು ಮನವಿ ಮಾಡಿದರು.

ಹನುಮಂತೋತ್ಸವ, ಗರುಡೋತ್ಸವ ಹಾಗು ರಥೋತ್ಸವ ಸೇರಿ ಎಲ್ಲಾ ಕಾರ್ಯಕ್ರಮಗಳ ಸಂದರ್ಭದಲ್ಲೂ ಭಕ್ತರ ಸುರಕ್ಷತೆಗಾಗಿ ಸೂಕ್ತ ಪೊಲೀಸ್ ಭದ್ರತೆ ಒದಗಿಸಲಾಗುವುದೆಂದು ಹೇಳಿದರು. ದೇವಾಲಯದ ಕಾರ್ಯನಿರ್ವಹಣಾಧಿಕಾರಿ ಯೋಗೇಶ್, ತಹಶೀಲ್ದಾರ್ ಶ್ರೀಧರ್ ಕಂಕನಾಡಿ, ಪ್ರಧಾನ ಅರ್ಚಕ ಶ್ರೀನಿವಾಸ್ ಭಟ್ಟರು ಇತರರು ಉಪಸ್ಥಿತರಿದ್ದರು.

## ಕನ್ನಡ ಸಾಹಿತ್ಯ-ಕಾನೂನು ಕುರಿತು ಉಪನ್ಯಾಸದಲ್ಲಿ ನಿವೃತ್ತ ಶಿಕ್ಷಣಾಧಿಕಾರಿ ತಮ್ಮಣ್ಣಗೌಡ ಸಲಹೆ

# ವಿದ್ಯಾವಂತರಾಗುವುದರ ಜೊತೆಗೆ ವಿಶ್ವ ಜ್ಞಾನಿಗಳೂ ಆಗೋಣ

• ಪ್ರಜೋದಯ ವರದಿ

**ಹಾಸನ:** ಜಗತ್ತು ದಿನದಿಂದ ದಿನಕ್ಕೆ ಸಂಘರ್ಷವನ್ನೇ ಅನುಭವಿಸುತ್ತಿದ್ದು ಅದಕ್ಕೆ ವಿಶ್ವ ಪ್ರಜ್ಞೆ ಮತ್ತು ವಿಶ್ವಮಾನವತೆಯನ್ನು ಅಳವಡಿಸಿಕೊಳ್ಳದಿರುವುದೇ ಕಾರಣವೆಂದು ಜಿಲ್ಲಾ ನಿವೃತ್ತ ಶಿಕ್ಷಣಾಧಿಕಾರಿ ಜೆ.ಬಿ.ತಮ್ಮಣ್ಣಗೌಡ ಅವರು ಹೇಳಿದರು.



ಬೆಂಗಳೂರಿನ ಮಾರುತಿ ನಗರದಲ್ಲಿರುವ ವಿವೇಕಾನಂದ ಕಾನೂನು ಕಾಲೇಜಿನಲ್ಲಿ ಇತ್ತೀಚೆಗೆ ಹಮ್ಮಿಕೊಂಡಿದ್ದ ಕೆ.ವಿ.ಶಂಕರೇಗೌಡ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಕನ್ನಡ ಸಾಹಿತ್ಯ ಮತ್ತು ಕಾನೂನು ಕುರಿತು ಮಾತನಾಡಿದ ಅವರು, ಮಾನವೀಯ ಮೌಲ್ಯಗಳೇ ಮೊದಲ ಹಾಗು ಕೊನೆಯ ದೇವರು. ಹಾಗಾಗಿ ಏನಾದರೂ ಆಗು, ಮೊದಲು ಮಾನವನಾಗು ಎಂದು ಮಹಾಪುರುಷರು ಹೇಳಿದ್ದಾರೆಂದರು.

ವಿಶ್ವ ಜ್ಞಾನ ಹಾಗು ವಿಶ್ವ ಮಾನವತ್ವವನ್ನು ಕಲಿಸುವುದು ವಿಶ್ವವಿದ್ಯಾಲಯಗಳು. ಆ ನಿಟ್ಟಿನಲ್ಲಿ ವಿಶ್ವ ವಿದ್ಯಾಲಯಗಳು ಕೆಲಸ ಮಾಡಬೇಕು. ವಿದ್ಯೆ ಸಜೀವ ಸೌಂದರ್ಯ. ಆ ಕಾರಣಕ್ಕಾಗಿಯೇ ತಮ್ಮ ಮಕ್ಕಳು ವಿದ್ಯಾವಂತರಾಗಬೇಕೆಂದು ಪ್ರತಿಯೊಬ್ಬ ಪೋಷಕರೂ ಬಯಸುತ್ತಾರೆ. ವಿದ್ಯಾ ವಂತರಾಗುವುದರ ಜೊತೆಗೆ ವಿಶ್ವಜ್ಞಾನಿಗಳೂ ಆಗಬೇಕು. ಸರ್ವರಿಗೂ ಸಮಪಾಲು-ಸರ್ವರಿಗೂ ಸಮಬಾಳು ಎಂಬುದು ಘೋಷ ವಾಕ್ಯಕ್ಕಷ್ಟೇ ಸೀಮಿತವಾಗಬಾರದು. ಸಂಪತ್ತಿನ ಸಮಾನ ಹಂಚಿಕೆಗೆ ಸಂವಿಧಾನಬದ್ಧ ಕಾನೂನು ಜಾರಿಯಾಗಬೇಕೆಂದು ಅವರು ಅಭಿಪ್ರಾಯಪಟ್ಟರು.

ರಾಷ್ಟ್ರದ ಪ್ರಗತಿಯು ಶಿಕ್ಷಣ ರಂಗದ ಪ್ರಗತಿಯನ್ನು ಅವಲಂಬಿಸಿದೆ. ಇತ್ತೀಚಿನ ದಿನಗಳಲ್ಲಿ ಶಿಕ್ಷಣ ಸಂಸ್ಥೆಗಳ ಕೊರತೆಯಿಲ್ಲ. ಶಾಲಾ-ಕಾಲೇಜುಗಳು ವಿದ್ಯಾರ್ಥಿಗಳನ್ನು ಹುಡುಕಿಕೊಂಡು ಹೋಗುವಷ್ಟು ಶಿಕ್ಷಣ ಸಂಸ್ಥೆಗಳಿವೆ. ಇಂತಹ ವ್ಯವಸ್ಥೆಯ ಸದುಪಯೋಗವನ್ನು ಶಿಕ್ಷಣಾರ್ಥಿಗಳು ಪಡೆದುಕೊಂಡು ಈಗಿನ ಸ್ಪರ್ಧಾತ್ಮಕ ಯುಗಕ್ಕೆ ತಕ್ಕಂತಹ ಜ್ಞಾನವನ್ನು ಪಡೆದುಕೊಂಡು ಗುರಿ ಸಾಧನೆ ಮಾಡಬೇಕು. ಗುರಿ ದೊಡ್ಡದಿದ್ದರೆ ಸಾಧನೆಯೂ ದೊಡ್ಡದಿರುತ್ತದೆ. ಹಾಗಾಗಿ ದೊಡ್ಡ ಗುರಿಯನ್ನಿಟ್ಟುಕೊಳ್ಳಬೇಕೆಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಜನತಾ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಅಪ್ಪಾರೆಡ್ಡಿ ಹರೀಶ್ ಅವರು ಮಾತನಾಡಿ, ಕನ್ನಡ ಸಾಹಿತ್ಯಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ. ಪಂಪ, ರನ್ನ, ಪೊನ್ನ, ಕುವೆಂಪು ಅವರು ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. ಇಂತಹ ಸರ್ವಶ್ರೇಷ್ಟ ಸಾಹಿತ್ಯವು ಕಾನೂನು ರಚನೆಯಲ್ಲೂ ಮಹತ್ವ ಪಡೆದುಕೊಂಡಿದೆ. ನಮ್ಮ ಸಂವಿಧಾನವು ದೇಶದ ಪ್ರತಿ ಪ್ರಜೆಯೂ ಹೇಗೆ ಬದುಕಬೇಕೆಂಬುದನ್ನು ಸ್ಪಷ್ಟವಾಗಿ ಹೇಳಿದೆ. ಕನ್ನಡದ ಖ್ಯಾತ ಸಾಹಿತಿ ಗಳೂ ಮಾನವ ಹೇಗೆ ಬಾಳಬೇಕೆಂದು ಹೇಳಿದ್ದಾರೆ. ನಮ್ಮ ಸಾಹಿತ್ಯ ಪರಂಪರೆ ಹಾಗು ಸಂವಿಧಾನದ ಬಲದಿಂದ ದೇಶ ಸುರಕ್ಷಿತವಾಗಿದೆ. ಎಲ್ಲರಿಗೂ ಅವಕಾಶಗಳು ಲಭ್ಯವಾಗುತ್ತಿವೆ. ಒಬ್ಬ ರೈತನ ಮಗನೂ ಪ್ರಧಾನ ಮಂತ್ರಿ ಆಗುವ ಅವಕಾಶ ವಿದೆ ಎಂದು ಹೆಚ್.ಡಿ.ದೇವೇಗೌಡ ಅವರು ಪ್ರಧಾನಿಯಾಗಿ ದೇಶ ಮುನ್ನೆಡೆಸಿದ್ದನ್ನು ಉಲ್ಲೇಖಿಸಿದರು.

ಪ್ರಾಂಶುಪಾಲ ಕೆ.ಬಿ.ಕೆಂಪೇಗೌಡ ಅವರು ಮಾತನಾಡಿ, ಜನತಾ ಶಿಕ್ಷಣ ಸಂಸ್ಥೆಯಡಿ 14 ಶಿಕ್ಷಣ ಸಂಸ್ಥೆಗಳು ನಡೆಯುತ್ತಿವೆ. ಅದರಲ್ಲಿ ವಿವೇಕಾನಂದ ಕಾನೂನು ಕಾಲೇಜು ಕೂಡ ಒಂದು. ಜನತಾ ಶಿಕ್ಷಣ ಸಂಸ್ಥೆಯ ಗೌರ್ನಿಂಗ್ ಕೌನ್ಸಿಲ್ ಮೆಂಬರ್ ಮಂಡ್ಯ ಜಿಲ್ಲೆ, ನಾಗಮಂಗಲ ತಾಲ್ಲೂಕಿನ ಬಿ.ಎನ್.ಶಿವಕುಮಾರ್ ಅವರು ಮಾಜಿ ಸಚಿವ ಕೆ.ವಿ.ಶಂಕರೇಗೌಡ ಅವರ ಹೆಸರಲ್ಲಿ ವಿವೇಕಾನಂದ ಕಾನೂನು ಕಾಲೇಜಿನಲ್ಲಿ ದತ್ತಿನಿಧಿ ಸ್ಥಾಪಿಸಿದ್ದಾರೆ. ಅದರಡಿ ಕನ್ನಡ ಸಾಹಿತ್ಯ ಮತ್ತು ಕಾನೂನು ಕುರಿತ ಉಪನ್ಯಾಸ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ವಿವರ ನೀಡಿದರು.

1951ರಲ್ಲಿ ಮಂಡ್ಯ ವಿಧಾನಸಭಾ ಕ್ಷೇತ್ರದಿಂದ ವಿಧಾನಸಭೆಗೆ ಆಯ್ಕೆಯಾಗಿದ್ದ ಕೆ.ವಿ. ಶಂಕರೇಗೌಡ ಅವರು, 1967 ರಿಂದ 5 ವರ್ಷ ಸಚಿರಾಗಿಯೂ ಕೆಲಸ ಮಾಡಿದ್ದರು. ಅವರು 1984ರಲ್ಲಿ ಲೋಕಸಭೆಗೂ ಮಂಡ್ಯ ಕ್ಷೇತ್ರದಿಂದ ಆಯ್ಕೆಯಾಗಿದ್ದರು. ರಂಗಕರ್ಮಿ, ಪತ್ರಕರ್ತರಾಗಿಯೂ ಕೆಲಸ ಮಾಡಿದ್ದ ಶಂಕರೇಗೌಡ ಅವರು 1990ರ ಮಾ.3 ರಂದು ಇಹಲೋಕ ತ್ಯಜಿಸಿದರು. ಶಿಕ್ಷಣ ಸಚಿವರಾಗಿ ಅವರು ಮಾಡಿದ ಸಾಧನೆ ಹಾಗು ಮಂಡ್ಯದಲ್ಲಿ ಜನತಾ ಶಿಕ್ಷಣ ಸಂಸ್ಥೆಯನ್ನು ಕಟ್ಟಿ ಬೆಳೆಸಿದ ಅವರನ್ನು ನಿತ್ಯ ಸಚಿವ ಎಂದೂ ಕರೆಯಲಾಗುತ್ತಿತ್ತು ಎಂದು ಹೇಳಿದರು.

ಜನತಾ ಶಿಕ್ಷಣ ಸಂಸ್ಥೆಯ ಕಾರ್ಯನಿರ್ವಾಹಕ ಅಧ್ಯಕ್ಷೆ ಎನ್.ಸ್ವಪ್ನಾ, ಜಂಟಿ ಕಾರ್ಯದರ್ಶಿ ಸತ್ಯಕೀರ್ತಿ ಬಿ.ಎನ್.ಶಿವಕುಮಾರ ಅವರ ಪುತ್ರಿ ವಿಜಯಾ, ಕಾಲೇಜು ಆಡಳಿತ ಮಂಡಳಿಯ ಪಂಕಜಾ, ಇಂದಿರಾ ಮತ್ತಿತರರು ಹಾಜರಿದ್ದರು.

# ಜಾತಿ ಹೆಸರಿನಲ್ಲಿ ಇಬ್ಬರ ಮೇಲೆ ಹಲ್ಲೆ

**ಅರಕಲಗೂಡು:** ವಿನಾಕಾರಣ ಜಾತಿ ಹೆಸರಲ್ಲಿ ಜಗಳ ತೆಗೆದು ವ್ಯಕ್ತಿಯೊಬ್ಬನ ಮೇಲೆ ಮಾರ ಣಾಂತಿಕ ಹಲ್ಲೆ ನಡೆಸಿರುವ ಘಟನೆ ತಾಲ್ಲೂಕಿನ ಜೋಡಿಗುಬ್ಬಿ ಕ್ರಾಸ್ ಬಳಿ ಇತ್ತೀಚೆಗೆ ನಡೆದಿದೆ.

ಕಸಬಾ ಹೋಬಳಿ ಹೆಟ್ಟಗೌಡನಹಳ್ಳಿ ಗ್ರಾಮದ ರವಿಕುಮಾರ್ ಗಾಯಾಳು. ಬೈಚನಹಳ್ಳಿ ದಂಡಿ ನಾಂಬ ಶಾಮಿಯಾನ ಅಂಗಡಿಯಲ್ಲಿ ವಾಹನ ಚಾಲಕನಾಗಿ ಕೆಲಸ ಮಾಡಿಕೊಂಡಿರುವ ರವಿಕುಮಾರ್ ಮಾ.26ರ ರಾತ್ರಿ ಕೆಲಸ ಮುಗಿಸಿ ಸ್ನೇಹಿತ ನವೀನ್ ಜೊತೆಗೆ ಕಳ್ಳಿ ಮುದ್ದನಹಳ್ಳಿ ಗ್ರಾಮದಲ್ಲಿರುವ ಬಾರ್‌ಗೆ ಹೋದಾಗ ಅಲ್ಲಿಯೇ ಕುಳಿತಿದ್ದ ಅಪರಿಚಿತರು ರವಿಕುಮಾರ್ ಹಾಗು ನವೀನ್ ಅವರ ಜಾತಿ ಉಲ್ಲೇಖಿಸಿ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ. ಬಾರ್‌ನಲ್ಲಿ ಪರಿಸ್ಥಿತಿ ಬಿಗಡಾಯಿಸುತ್ತಿದ್ದಂತೆ ಇಬ್ಬರೂ ವಾಪಾಸ್ ಬಂದು ಬೇಕರಿ ಬಳಿ ನಿಂತಿದ್ದಾಗ ಅಲ್ಲಿಗೆ ಬಂದ ಮೂವರು ಏಕಾಏಕಿ ಜಗಳ ತೆಗೆದು ಒಬ್ಬ ವ್ಯಕ್ತಿ ಗಾಜಿನ ಜ್ಯೂಸ್ ಬಾಟಲಿ ಒಡೆದು ರವಿಕುಮಾರ್ ಅವರ ಎಡ ಕೈಗೆ ಹೊಡೆದು ರಕ್ತಗಾಯ ಪಡಿಸಿದ. ನಂತರ ಎಡ ಪಕ್ಕೆ, ಹೊಟ್ಟೆಯ ಭಾಗಕ್ಕೆ ಚುಚ್ಚಿದ್ದಾನೆ. ಜಗಳ ಬಿಡಿಸಲು ಬಂದ ನವೀನ್ ಮೇಲೂ ಹಲ್ಲೆ ನಡೆಸಿದ್ದಾರೆ. ಗಾಯಾಳುಗಳನ್ನು ಚಿಕಿತ್ಸೆಗಾಗಿ ಹಾಸನದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಅರಕಲಗೂಡು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಅಬ್ಬನ ಗ್ರಾಮದಲ್ಲಿ ಸುಗ್ಗಿ ಪೂಜೆ

ಆಲೂರು: ತಾಲ್ಲೂಕಿನ ಕೆ.ಹೊಸಕೋಟೆ ಹೋಬಳಿ ಅಬ್ಬನ ಗ್ರಾಮದಲ್ಲಿ ಮಾ.26 ರಿಂದ 30ರ ವರೆಗೆ ಸುಗ್ಗಿ ಅಮ್ಮನವರ ಪೂಜೆ ಹಮ್ಮಿಕೊಳ್ಳಲಾಗಿದೆ.

ಮಾ.29ರ ಭಾನುವಾರ ಬಿಳಿ ಆನೆ ಉತ್ಸವ, ಸುಗ್ಗಿಕಟ್ಟೆಯಲ್ಲಿ ದೇವರನ್ನು ಅಲಂಕರಿಸುವುದು ಹಾಗು ರಾತ್ರಿ ಪ್ರಸಾದ ವ್ಯವಸ್ಥೆ ಮಾಡಲಾಗಿದೆ. ಮಾ. 30ರ ಸೋಮವಾರ ಹಗಲು ಸುಗ್ಗಿ ನೆರವೇರಲಿದೆ.

# ಬೆಟ್ಟದ ಭೈರವೇಶ್ವರ: ಚಿತ್ರೀಕರಣ ನಿಷೇಧಕ್ಕೆ ಹೆಚ್ಚಿದ ಒತ್ತಡ

» ಮೊದಲನೇ ಪುಟದಿಂದ

ರಸ್ತೆಯೂ ಇರದಿದ್ದ ಈ ದೇವಾಲಯಕ್ಕೆ ಸುಮಾರು 2 ಕಿ.ಮೀ. ದೂರ ನಡೆದೇ ಹೋಗ ಬೇಕಿತ್ತು. ಪುಟ್ಟ ಗುಡಿ, ಅದರ ಕೆಳಭಾಗದಲ್ಲಿ ಮೆಟ್ಟಿಲಿಳಿದು ಹೋದರೆ ಮರಗಳ ನೆರಳಿ ನಿಂದಾವೃತವಾಗಿ ಸದಾ ನೀರಿನಿಂದ ತುಂಬಿ ರುವ ಕೊಳ, ಗುಡಿಯ ಹಿಂದಿನಕಾಲು ದಾರಿ ಹಿಡಿದರೆ ಪಾಂಡವರ ಗುಡ್ಡ ಮತ್ತು ಪಶ್ಚಿಮ ಘಟ್ಟದ ಸಾಲು ಗುಡ್ಡಗಳು. ಶಿವ ನಿಜವಾ ಗಿಯೂ ನೆಲೆಸುವಂತಹ ಪರಿಸರ ಅದು.

ಇಂತಹ ಚಾರಿತ್ರಿಕ, ಪಾವಿತ್ರಿಕ ಗುಡಿಗೆ ಚಿತ್ರೀಕರಣಕ್ಕಾಗಿ ಫೋಟೋಗ್ರಾಫರ್‌ಗಳು ದಾಂಗುಡಿ ಇಡುತ್ತಾರೆ. ಆದರೆ ಅದೇ ಜಾಗವೀಗ ಸ್ಥಳೀಯರು ಮತ್ತು ಹೊರಗಿನವರ ನಡುವೆ ಜಗಳಕ್ಕೆ ಎಡೆಮಾಡಿಕೊಡುತ್ತಿದೆ.

**ಭದ್ರತಾ ಸಿಬ್ಬಂದಿ ನಿಯೋಜನೆಗೆ ಚಿಂತನೆ:** ಬೆಟ್ಟದ ಭೈರವೇಶ್ವರ ದೇಗುಲ ಊರಿನಿಂದ ದೂರ ಇರುವುದರಿಂದ ಜನರ ಓಡಾಟ ಕಡಿಮೆ ಇರುತ್ತದೆ. ಅರ್ಚಕರು ಬೆಳಿಗ್ಗೆ ಪೂಜೆ ಮುಗಿಸಿಕೊಂಡು ವಾಪಾಸ್ ಬಂದರೆ ಯಾರೂ ಇರುವು ದಿಲ್ಲ. ಪ್ರವಾಸಿಗರಷ್ಟೇ ಅಲ್ಲಿರುವುದರಿಂದ ಸೂಕ್ತ ಭದ್ರತೆ ಕಲ್ಪಿಸುವ ಅಗತ್ಯತೆ ಇದೆಯೆಂದು ಶಾಸಕ ಸಿಮೆಂಟ್ ಮಂಜು ಅವರು ಹೇಳಿದ್ದಾರೆ.

ಶುಕ್ರವಾರ ನಡೆದ ಗಲಾಟೆ ವಿಚಾರ ತಿಳಿದು ನೋವಾಯಿತು. ನಾನು ಈ ಸಂಬಂಧ ಅಧಿಕಾರಿ ಗಳೊಂದಿಗೆ ಮಾತನಾಡುತ್ತೇನೆ. ಸಾಲು ಸಾಲು ರಜೆ ಇರುವುದರಿಂದ ಸಭೆ ಮಾಡಲು ಸಾಧ್ಯವಾಗಿಲ್ಲ. ಮಂಗಳವಾರ ಉಪವಿಭಾಗಾಧಿಕಾರಿ, ತಹಶೀಲ್ದಾರ್ ಸಮ್ಮುಖದಲ್ಲಿ ಸಭೆ ನಡೆಸಿ ಸಾರ್ವಜನಿಕರು ಹಾಗು ಸ್ಥಳೀಯರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗುವುದು. ದೇವಾಲಯಕ್ಕೆ ಖಾಯಂ ಭದ್ರತಾ ಸಿಬ್ಬಂದಿ ನಿಯೋಜಿಸಬೇಕೆಂದು ನಿರ್ಧರಿಸಿದ್ದು ಆ ನಿಟ್ಟಿನಲ್ಲಿ ಮುತುವರ್ಜಿ ವಹಿಸಲಾಗುವುದೆಂದರು.

# ಎ.5ಕ್ಕೆ ಯೋಗ ತರಬೇತಿ ಕೇಂದ್ರ ಆರಂಭ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಪಟ್ಟಣದ ಪತ್ರಕರ್ತರ ಭವನದಲ್ಲಿ ಏ.5 ರಂದು ಯೋಗ ತರಬೇತಿ ಕೇಂದ್ರ ಆರಂಭಿಸಲಾಗುವುದೆಂದು ಸ್ನೇಹಮಯಿ ವಿವೇಕಾನಂದ ಯೋಗ ಮಂದಿರದ ಮಂಜುನಾಥ್ ಕೆ.ಅಡಗೂರು ಅವರು ಹೇಳಿದರು.



ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, ನಿತ್ಯ ಜೀವನ ದಲ್ಲಿ ಯೋಗ ಹಾಗು ಧ್ಯಾನ ವನ್ನು ಅಳವಡಿಸಿಕೊಂಡರೆ ದೈಹಿಕ ಹಾಗು ಮಾನಸಿಕ ಸಮತೋಲನ ಸಾಧಿಸುವು ದರ ಜೊತೆಗೆ ಸದೃಢ ಆರೋಗ್ಯ ಹೊಂದಬಹುದು. ಯೋಗ ಮತ್ತು ಧ್ಯಾನಕ್ಕೆ ಭಾರತೀಯ ಸಂಸ್ಕೃತಿಯಲ್ಲಿ ವಿಶೇಷ ಸ್ಥಾನಮಾನವಿದೆ ಎಂದರು.

ಯೋಗ ವಿಶ್ವದೆಲ್ಲೆಡೆ ಮಾನ್ಯತೆ ಪಡೆ ದಿದ್ದು ವಿಶ್ವವೇ ಭಾರತದತ್ತಾ ತಿರುಗಿ ನೋಡುವಂತೆ ಗಮನ ಸೆಳೆದಿದೆ. ಯೋಗ ದಿನವನ್ನು ವಿಶ್ವವೇ ಆಚರಿಸು ವುದು ನಮ್ಮೆಲ್ಲರ ಹೆಮ್ಮೆಯ ಸಂಗತಿಯಾಗಿದೆ. ತಾಲ್ಲೂಕಿನ ಜನರಿಗೆ ಅನು ಕೂಲ ಕಲ್ಪಿಸುವ ನಿಟ್ಟಿನಲ್ಲಿ ಸ್ನೇಹಮಯಿ ವಿವೇಕಾನಂದ ಯೋಗಾಸನ ಚಾರಿ ಟಬಲ್ ಟ್ರಸ್ಟ್ ನಿಂದ ಯೋಗ ತರಬೇತಿ ಕೇಂದ್ರ ಪ್ರಾರಂಭಿಸಲಾಗುತ್ತಿದೆಂದರು.

ಈಗಾಗಲೇ ನೋಂದಣಿ ಕಾರ್ಯ ಪ್ರಾರಂಭಗೊಂಡಿದ್ದು ತಲಾ ಒಬ್ಬರಿಗೆ ತಿಂಗಳಿಗೆ 600 ರೂ. ಸೇವಾ ಶುಲ್ಕ ನಿಗದಿ ಮಾಡಲಾಗಿದೆ. ವಾರದಲ್ಲಿ 5 ದಿನ ಬೆಳಿಗ್ಗೆ ಹಾಗು ಸಂಜೆ 1 ಗಂಟೆ ಯೋಗ ತರಬೇತಿ ನೀಡಲಾಗುವುದು. ಮಕ್ಕಳಿಗಷ್ಟೇ ಅಲ್ಲದೆ ದೊಡ್ಡ ವರಿಗೂ ಅವಕಾಶವಿದೆ ಎಂದು ಮಾಹಿತಿ ನೀಡಿದರು.

ಉದ್ಘಾಟನಾ ಸಮಾರಂಭದಲ್ಲಿ ಪರಿಸರ ಪ್ರೇಮಿ ಸಿ.ಎನ್.ಅಶೋಕ್ ಅಧ್ಯಕ್ಷತೆ ವಹಿಸಲಿದ್ದು, ಶಾಸಕ ಸಿ.ಎನ್.ಬಾಲಕೃಷ್ಣ ಉದ್ಘಾಟಿಸಲಿದ್ದಾರೆ. ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಎ. ಗೋಪಾಲಸ್ವಾಮಿ, ಪುರಸಭಾ ಮಾಜಿ ಅಧ್ಯಕ್ಷ ಕೋಟೆ ಮೋಹನ್, ಸದಸ್ಯರಾದ ಟಿವಿಎಸ್ ಶಶಿಧರ್, ಗಣೇಶ್, ಕನ್ನಡ ಸಾಹಿತ್ಯ ಪರಿಷತ್ ತಾಲ್ಲೂಕು ಅಧ್ಯಕ್ಷ ಹಡೇನಹಳ್ಳಿ ಲೋಕೇಶ್ ಪಾಲ್ಗೊಳ್ಳಲಿದ್ದಾರೆಂದರು.

ಅಂತಾರಾಷ್ಟ್ರೀಯ ಯೋಗ ತರ ಬೇತುದಾರರಾದ ಡಾ||ಕೆ.ಆರ್. ನವೀನ್‌ಕುಮಾರ್, ಕಿಶೋರ್ ಬೆಳ್ಳೂರು, ರಾಜ್ಯ ಮಟ್ಟದ ಯೋಗ ಪಟು ವಿಸ್ಮಿತ ಶೆಟ್ಟಿಹಳ್ಳಿ, ಹಾಸನ ಹಸಿರು ಸೇನೆ ರೈತ ಸಂಘದ ಅಧ್ಯಕ್ಷೆ ಡಾ. ತಾರಾವತಿ ಇದ್ದರು.

# ಛಾಯಾಗ್ರಾಹಕರ ಮೇಲೆ ಹಲ್ಲೆ ಖಂಡಿಸಿ ಮಾ.31ಕ್ಕೆ ಪ್ರತಿಭಟನೆ

• ಪ್ರಜೋದಯ ವರದಿ

**ಹಾಸನ:** ಸಕಲೇಶಪುರ ತಾಲ್ಲೂಕಿನ ಬೆಟ್ಟದ ಭೈರವೇಶ್ವರ ದೇವಾಲಯದ ಬಳಿ ಶುಕ್ರವಾರ ಪ್ರೀ ವೆಡ್ಡಿಂಗ್ ಶೂಟ್ ಮಾಡುತ್ತಿದ್ದ ಛಾಯಾಗ್ರಾಹಕರ ಮೇಲೆ ನಡೆದ ಮಾರಣಾಂತಿಕ ಹಲ್ಲೆ ಖಂಡಿಸಿ ಮಾ.31ರಂದು ರಾಜ್ಯಾದ್ಯಂತ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ರಾಜ್ಯ ಛಾಯಾಗ್ರಾಹಕರ ಸಂಘದ ಅಧ್ಯಕ್ಷ ಹೆಚ್.ಎಸ್.ನಾಗೇಶ್ ಅವರು ತಿಳಿಸಿದರು.




ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, ಮಾ.31ರ ಮಂಗಳವಾರ ಬೆಳಿಗ್ಗೆ 11 ಗಂಟೆಗೆ ಹೇಮಾವತಿ ಪ್ರತಿಮೆಯಿಂದ ಜಿಲ್ಲಾಧಿಕಾರಿ ಕಚೇರಿ ವರೆಗೆ ಮೆರವಣಿಗೆ ನಡೆಸ ಲಾಗುವುದು. ರಾಜ್ಯದ ವಿವಿಧ ತಾಲ್ಲೂಕು ಹಾಗು ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆ ನಡೆಸಿ ಮುಂದಿನ ದಿನ ಗಳಲ್ಲಿ ಈ ರೀತಿಯ ಘಟನೆ ಆಗದಂತೆ ಆಗ್ರಹಿಸಲಾಗುವುದು. ಛಾಯಾ ಗ್ರಾಹಕರಿಗೆ ಸೂಕ್ತ ಭದ್ರತೆ ನೀಡುವಂತೆ ಒತ್ತಾಯಿಸಲಾಗುವುದೆಂದು ಹೇಳಿದರು.

ಪ್ರೀ ವೆಡ್ಡಿಂಗ್ ಶೂಟಿಂಗ್‌ನಲ್ಲಿ ನಿರತರಾಗಿದ್ದ ಹಾಸನ ಮತ್ತು ಬೆಂಗಳೂರಿನ ಒಟ್ಟು 6 ಛಾಯಾಗ್ರಾಹಕರ ಮೇಲೆ ಸ್ಥಳೀಯರು ಗಂಭೀರ ಹಲ್ಲೆ ನಡೆಸಿರುವುದು ದುರದೃಷ್ಟಕರ.ಸ್ಥಳೀಯರ ದೌರ್ಜನ್ಯದಿಂದ ಸುಮಾರು 5 ಲಕ್ಷ ರೂ. ಮೌಲ್ಯದ ಕ್ಯಾಮರಾ ಸಾಮಾಗ್ರಿಗಳು ಹಾನಿಗೀಡಾಗಿವೆ ಎಂದರು.

ನಮ್ಮವರ ಮೇಲೆ ಹಲ್ಲೆ ಮಾಡಿ ಗೂಂಡಾ ವರ್ತನೆ ತೋರಿದ ಎಲ್ಲರನ್ನೂ ಬಂಧಿಸಿ ಕಠಿಣ ಶಿಕ್ಷೆಗೆ ಗುರಿಪಡಿಸಬೇಕು. ಛಾಯಾಗ್ರಾಹಕರಿಗೆ ಆಗಿರುವ ನಷ್ಟವನ್ನು ಭರಿಸಿಕೊಡಬೇಕು. ಸರ್ಕಾರ ವೃತ್ತಿಪರ ಛಾಯಾಗ್ರಾಹಕರಿಗೆ ರಕ್ಷಣೆ ಹಾಗು ನ್ಯಾಯ ಒದಗಿಸಬೇಕು. ಸಂಬಂಧಪಟ್ಟ ಅಧಿಕಾರಿಗಳು ನ್ಯಾಯ ಸಮ್ಮತ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಹಲ್ಲೆಗೊಳಗಾಗಿರುವವರ ಪೈಕಿ ಚೇತನ್ ಎಂಬಾತನ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆ ಯುತ್ತಿದ್ದಾನೆ. ನವೀನ್, ರವಿನಂದನ್, ಯಶ್, ಅಭಿಷೇಕ್, ಯಶವಂತ್, ಸೋಮಶೇಖರ್ ಮೇಲೆ ಹಲ್ಲೆ ಮಾಡಲಾಗಿದೆ. ಹಲ್ಲೆ ಮಾಡಿರುವ ಅಭಿ, ಪ್ರಶಾಂತ್, ರಕ್ಷ, ಅರವಿಂದ್, ಉಚಿತ್, ಪ್ರಜ್ವಲ್, ನಿಶಾಂತ್ ಎಂಬುವವರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕೆಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಸಂಘದ ಅಧ್ಯಕ್ಷ ಎಸ್.ನಿಂಗರಾಜು (ಸ್ವಾಮಿ), ರಾಜ್ಯ ಕಾರ್ಯ ದರ್ಶಿ ಟಿ.ಸಿ. ನಾಗರಾಜ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಕೆ.ಧರ್ಮಶೆಟ್ಟಿ, ತುಮಕೂರು ಜಿಲ್ಲಾ ಸಂಘದ ಅಧ್ಯಕ್ಷ ಅನಿಲ್ ಕುಮಾರ್, ಹಾಸನ ತಾಲ್ಲೂಕು ಅಧ್ಯಕ್ಷ ನಾಗರಾಜ್ ಇದ್ದರು.

# ಚಿನ್ನಾಭರಣ ಕಳವು

• ಪ್ರಜೋದಯ ವರದಿ

**ಬೇಲೂರು:** ಅನಾರೋಗ್ಯ ಹಿನ್ನಲೆಯಲ್ಲಿ ಕುಟುಂಬಸ್ಥರು ಆಸ್ಪತ್ರೆಗೆ ಹೋಗಿದ್ದಾಗ ಬಾಗಿಲ ಬೀಗ ಮುರಿದು ಒಳನುಗ್ಗಿರುವ ಕಳ್ಳರು ನಗದು ಸೇರಿ 1.40 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಳವು ಮಾಡಿರುವ ಘಟನೆ ತಾಲ್ಲೂಕಿನ ಸಂಪಿಗೆ ಮರದ ಕೊಪ್ಪಲು ಗ್ರಾಮದಲ್ಲಿ ನಡೆದಿದೆ.

ಗ್ರಾಮದ ರಾಜೇಗೌಡ ಅವರು ಮಾ.27 ರಂದು ಪತ್ನಿ ರತ್ನಮ್ಮ ಅವರಿಗೆ ಅನಾರೋಗ್ಯ ಕಾಣಿಸಿಕೊಂಡ ಹಿನ್ನಲೆಯಲ್ಲಿ ಹಳೇಬೀಡು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ಮನೆಯಲ್ಲಿ ಯಾರೂ ಇಲ್ಲದಿರುವುದನ್ನು ಖಚಿತ ಪಡಿಸಿಕೊಂಡು ಬಂದಿರುವ ಕಳ್ಳರು ಬಾಗಿಲ ಬೀಗ ಮುರಿದು ಬೀರುವಿನಲ್ಲಿಟ್ಟಿದ್ದ 9 ಗ್ರಾಂ ತೂಕದ ಎರಡು ಚಿನ್ನದ ಉಂಗುರ, 6 ಗ್ರಾಂ ತೂಕದ ಚಿನ್ನದ ಮಾಟಿ ಮತ್ತು 10 ಗ್ರಾಂ ಚಿನ್ನದ ಸರ ಹಾಗು 60 ಸಾವಿರ ರೂ. ನಗದು ಕದ್ದಿದ್ದಾರೆ. ಹಳೇಬೀಡು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# 3.30 ಲಕ ರೂ. ಬೆಲೆಯ ಚಿನ್ನಾಭರಣ ಕಳವು

• ಪ್ರಜೋದಯ ವರದಿ

**ಹಾಸನ:** ಬಾಗಿಲ ಪಕ್ಕದಲ್ಲಿಟ್ಟಿದ್ದ ಕೀ ನೆರವಿನಿಂದ ಒಳಪ್ರವೇಶಿಸಿರುವ ಕಳ್ಳರು 3.30 ಲಕ್ಷ ರೂ. ಬೆಲೆಯ ಚಿನ್ನಾಭರಣ ಕಳವು ಮಾಡಿರುವ ಘಟನೆ ತಾಲ್ಲೂಕಿನ ಆಲದಹಳ್ಳಿ ಗ್ರಾಮದಲ್ಲಿ ನಡೆದಿದೆ.

ಅಶೋಕ ಎಂಬುವವರು ಮಾ.27 ರಂದು ಬೆಳಿಗ್ಗೆ 7 ಗಂಟೆಗೆ ಜಮೀನು ಕೆಲಸಕ್ಕೆ ತೆರಳಿದ್ದರು. ಪತ್ನಿ ಚೈತ್ರಾ ಸಹ ಬೆಳಿಗ್ಗೆ 9 ಗಂಟೆಗೆ ಬೀಗ ಹಾಕಿ ಕೀಯನ್ನು ಎಂದಿನಂತೆ ಮನೆ ಮುಂಭಾಗದ ಕಿಟಕಿಯ ಬಳಿ ಇಟ್ಟು ಕೆಲಸಕ್ಕೆ ಹೋಗಿದ್ದರು. ಬೆಳಿಗ್ಗೆ 11 ಗಂಟೆಗೆ ಅಶೋಕ ಅವರು ಬಂದು ನೋಡಿದಾಗ ಕೀ ಇಲ್ಲದೆ ಇರುವುದು ಗೊತ್ತಾಗಿದೆ.

ಬೀರುವಿನಲ್ಲಿಟ್ಟಿದ್ದ 8 ಗ್ರಾಂ ತೂಕದ ಚಿನ್ನದ ಒಂದು ಉಂಗುರ, 8 ಗ್ರಾಂ ತೂಕದ ಚಿನ್ನದ ಮುತ್ತಿನ ಓಲೆ 1 ಜೊತೆ, 4 ಗ್ರಾಂ ತೂಕದ ಚಿನ್ನದ ಒಂದು ಜೊತೆ ಓಲೆ, 3 ಗ್ರಾಂ ತೂಕದ ಚಿನ್ನದ ಡ್ರಾಪ್ಸ್, 3 ಗ್ರಾಂ ತೂಕದ ಚಿನ್ನದ ಕೆಂಪು ಹರಳಿನ ಓಲೆ ಸೇರಿ ಒಟ್ಟು 26 ಗ್ರಾಂ ತೂಕದ ಚಿನ್ನದ ಒಡವೆ ಕದ್ದಿದ್ದು ಅದರ ಒಟ್ಟು ಬೆಲೆ 3.30 ಲಕ್ಷ ರೂ. ಆಗಿದೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಯುದ್ಧ ನಿಲ್ಲಿಸಿ, ಶಾಂತಿ ನೆಲೆಸಲಿ: ಜೀಪ್ ಜಾಥಾ

• ಪ್ರಜೋದಯ ವರದಿ

**ಹಾಸನ:** ಇರಾನ್, ಇಸ್ರೇಲ್-ಅಮೇರಿಕಾ ನಡುವೆ ನಡೆಯುತ್ತಿರುವ ಯುದ್ಧವನ್ನು ನಿಲ್ಲಿಸಿ, ವಿಶ್ವದಲ್ಲಿ ಶಾಂತಿ ನೆಲೆಸಬೇಕೆಂಬ ಸಂದೇಶದೊಂದಿಗೆ ಹಾಸನ ರೋಟರಿ ರಾಯಲ್ ತಂಡ ವಿಶಿಷ್ಟ ಜೀಪ್ ಜಾಥಾವನ್ನು ಶನಿವಾರ ನಗರದಿಂದ ಆರಂಭಿಸಿತು.



ರೋಟರಿ ಜಿಲ್ಲಾ ಗವರ್ನರ್ ಪಾಲಾಕ್ಷ ಅವರು ಮಾತನಾಡಿ, ಮಧ್ಯ ಪ್ರಾಚ್ಯ ದೇಶಗಳಲ್ಲಿ ನಡೆಯುತ್ತಿರುವ ಯುದ್ಧದ ಪರಿಣಾಮವಾಗಿ ಸಾವಿರಾರು ಅಮಾಯಕರು ಪ್ರಾಣ ಕಳೆದುಕೊಳ್ಳುತ್ತಿರುವ ಹಿನ್ನಲೆ ಯುದ್ಧ ತಕ್ಷಣ ನಿಲ್ಲಬೇಕೆಂದು ಸುಮಾರು 200 ಕಿ.ಮೀ ವ್ಯಾಪ್ತಿಯಲ್ಲಿ ನಡೆಯಲಿರುವ ಈ ಜಾಥಾದಲ್ಲಿ 12 ಜೀಪ್‌ಗಳಲ್ಲಿ 30ಕ್ಕೂ ಹೆಚ್ಚು ಸದಸ್ಯರು ಭಾಗವಹಿಸಿದ್ದಾರೆಂದು ಹೇಳಿದರು.

ಜಾಥಾದ ವೇಳೆ ಯುದ್ಧದ ಭೀಕರ ಪರಿಣಾಮಗಳು, ಮಾನವ ಕುಲಕ್ಕೆ ಉಂಟಾಗುವ ಅಪಾಯಗಳು, ಪರಿಸರದ ಮೇಲೆ ಬೀರುವ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಫಲಕ ಪ್ರದರ್ಶಿಸಿ, ಸಾರ್ವಜನಿಕರಲ್ಲಿ ಅರಿವು ಮೂಡಿಸಲಾಗುತ್ತದೆ. ಯುದ್ಧವು ಕೇವಲ ದೇಶಗಳ ನಡುವೆ ನಡೆ ಯುವ ಸಂಘರ್ಷವಲ್ಲ, ಅದು ಜೀವ ಸಂಕುಲದ ನಾಶಕ್ಕೆ ಕಾರಣವಾಗುವ ದೊಡ್ಡ ದುರಂತವಾಗಿದೆ. ಪ್ರಕೃತಿ ಸಂಪತ್ತು ಹಾನಿಯಾಗುವುದು, ಪರಿಸರ ಸಮತೋಲನ ಹದಗೆಡುವುದು, ಮಾನವ ಜೀವನ ಸಂಕಷ್ಟಕ್ಕೆ ಸಿಲುಕುವುದು ಮುಂತಾದ ಅನಾಹುತಗಳಿಗೆ ಯುದ್ಧ ಕಾರಣ ವಾಗುತ್ತದೆ ಎಂಬುದನ್ನು ಜನರಿಗೆ ಮನವರಿಕೆ ಮಾಡಿಕೊಡುವುದು ಜಾಥಾದ ಪ್ರಮುಖ ಉದ್ದೇಶವಾಗಿದೆ ಎಂದು ಹೇಳಿದರು.

ಸಹಾಯಕ ಗವರ್ನರ್ ಎ.ಜಿ. ಮಂಜುನಾಥ್ ಮಾತನಾಡಿ, ಪ್ರತಿ ವರ್ಷ ವಿಭಿನ್ನ ಸಾಮಾಜಿಕ ವಿಷಯಗಳನ್ನು ಆಧರಿಸಿ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳುವ ರೋಟರಿ ರಾಯಲ್ ತಂಡ ಈ ಬಾರಿ ಯುದ್ಧ ವಿರೋಧಿ ಸಂದೇಶ ಆಯ್ಕೆ ಮಾಡಿಕೊಂಡಿದೆ. ಯುದ್ಧ ಬೇಡ, ಶಾಂತಿ ಬೇಕು ಎಂಬ ಘೋಷಣೆಯೊಂದಿಗೆ ಸದಸ್ಯರು ಈ ಯಾತ್ರೆಯನ್ನು ಕೈಗೊಂಡಿದ್ದು, ವಿಶ್ವ ಶಾಂತಿಯ ಅಗತ್ಯವನ್ನು ಜನರಲ್ಲಿ ಬಿತ್ತರಿಸಲು ಮುಂದಾಗಿದ್ದಾರೆ ಎಂದರು.

ರೋಟರಿ ಹಿರಿಯ ಸದಸ್ಯ ಮೋಹನ್ ಮಾತನಾಡಿ, ಈ ಜೀಪ್ ಜಾಥಾ ಮೂಲಕ ಸಮಾಜ ದಲ್ಲಿ ಶಾಂತಿ, ಸಹಕಾರ ಮತ್ತು ಮಾನವೀಯತೆ ಮೌಲ್ಯಗಳನ್ನು ಬಲಪಡಿಸುವ ಪ್ರಯತ್ನ ನಡೆ ಯುತ್ತಿದ್ದು, ಈ ಯುದ್ಧದಿಂದ ಆಗುವ ಅನಾಹುತಗಳ ಬಗ್ಗೆ ತಿಳಿಸಿ ಎಚ್ಚರಿಸಿದರು.

ಜಾಥಾದಲ್ಲಿ ರೋಟರಿ ವಲಯ ಸೇನಾನಿ ಮಮತ ಪಾಟೀಲ್, ರೋಟರಿ ಕ್ಲಬ್ ಆಫ್ ಹಾಸನ ರಾಯಲ್ ಅಧ್ಯಕ್ಷ ಬಿ.ಕೆ.ಗಂಗಾಧರ್, ರಾಯಲ್ ಆನ್ ವ್ಹೀಲ್ ಅಧ್ಯಕ್ಷ ಹರ್ಷ, ಮಾಜಿ ಅಧ್ಯಕ್ಷ ಯೋಗೇಶ್, ಸಚ್ಚಿನ್, ಖಜಾಂಚಿ ಸಚಿನ್ ಉಪಸ್ಥಿತರಿದ್ದರು.

# ಶ್ರೀ ಹುಲಿಕೆರಮ್ಮ ದೇವಿ ಜಾತ್ರಾ ಮಹೋತ್ಸವ ಆರಂಭ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ತಾಲ್ಲೂಕಿನ ಗೌಡಗೆರೆ ಗ್ರಾಮ ದೇವತೆ ಹುಲಿಕೆರಮ್ಮ ದೇವಿಯ ಜಾತ್ರಾ ಮಹೋತ್ಸವ ಪ್ರಾರಂಭಗೊಂಡಿದ್ದು, ಏ.1ರ ಬುಧವಾರದ ವರೆಗೆ ಜರುಗಲಿದೆ.



ಮಾ.28ರ ಶನಿವಾರ ಬೆಳಿಗ್ಗೆ ದೇಗುಲಕ್ಕೆ ಹಸಿರು ಚಪ್ಪರ ಹಾಕಲಾಗಿದ್ದು ತಳಿರು ತೋರಣಗಳಿಂದ ಸಿಂಗರಿಸಲಾ ಯಿತು. ಶ್ರೀಕ್ಷೇತ್ರದ ಧರ್ಮದರ್ಶಿ ದೊರೆಸ್ವಾಮಿ ಅವರ ಸಾನ್ನಿಧ್ಯದಲ್ಲಿ ವಿಘ್ನೇಶ್ವರ ಹಾಗು ಗಂಗಾ ಪೂಜೆ ಯೊಂದಿಗೆ ಜಾತ್ರಾ ಮಹೋತ್ಸವ ಹಾಗು 18ನೇ ವರ್ಷದ ಕೊಂಡೋತ್ಸವಕ್ಕೆ ಚಾಲನೆ ನೀಡಲಾಯಿತು.

ಶ್ರೀ ಆದಿಶಕ್ತಿ ಹುಲಿಕೆರಮ್ಮ, ಚಂಡಿ ಮಾಯಮ್ಮ, ದುರ್ಗಾ ಮಾಯಮ್ಮ ದೇವಿಗೆ ವಿಶೇಷ ಅಲಂಕಾರ ಹಾಗು ವಿವಿಧ ಪೂಜಾ ವಿಧಿ ವಿಧಾನಗಳು ನೆರವೇರಲಿವೆ. ಮಾ.29ರ ಭಾನುವಾರ ಸಂಜೆ ದೇವಿಯ ಅಡ್ಡಪಲ್ಲಕ್ಕಿ ಉತ್ಸವದೊಂದಿಗೆ ಸೋಮನ ಕುಣಿತ ಜರುಗಲಿದೆ. ಮಾ.30ರ ಸೋಮವಾರ ವಿಶೇಷ ಪೂಜೆಗಳೊಂದಿಗೆ ಸಂಜೆ 7 ಗಂಟೆಗೆ ಶೈಲಜಾ ಕುಮಾರ್ ಅವರ ನೃತ್ಯಾಂಜಲಿ ಕಲಾನಿಕೇತನ ವತಿಯಿಂದ ಭರತನಾಟ್ಯ ಕಾರ್ಯಕ್ರಮ ಆಯೋಜಿಸಲಾಗಿದೆ.

ಮಾ.31ರ ಮಂಗಳವಾರ ಬೆಳಿಗ್ಗೆ 10 ಗಂಟೆಗೆ ವಡ್ಡರಹಳ್ಳಿ ಶ್ರೀ ವೆಂಕಟೇಶ್ವರಸ್ವಾಮಿ, ರಾಗಿ ಬೊಮ್ಮೇನಹಳ್ಳಿ ಶ್ರೀ ಲಕ್ಷ್ಮಿದೇವಿ, ಕೋಡಿಬೆಳಗುಳದ ಶ್ರೀ ಸತ್ಯಮ್ಮ, ಚನ್ನರಾಯಪಟ್ಟಣದ ಶ್ರೀ ಭದ್ರಕಾಳಿ, ಶ್ರೀ ಪಿರಿಯಾಪಟ್ಟಣದಮ್ಮ, ಹಳೆಬೆಳಗುಳದ ಶ್ರೀ ಭೂತಪ್ಪ, ಗೌಡಗೆರೆ ಶ್ರೀ ಶೆಟ್ಟಿಲ್ಲಮ್ಮ, ಶ್ರೀ ಬೀರಲಿಂಗೇಶ್ವರ ಸ್ವಾಮಿ, ಶ್ರೀ ಚಿಕ್ಕಮ್ಮ ಮತ್ತು ಶ್ರೀ ಭೈರವೇಶ್ವರಸ್ವಾಮಿ, ಶ್ರವಣಬೆಳಗೊಳ ಶ್ರೀ ರುದ್ರಪ್ರತಾಪ ಆಂಜನೇಯ ಸ್ವಾಮಿ, ಗೂಳಿಹೊನ್ನೇನಹಳ್ಳಿ ಶ್ರೀ ವೀರಭದ್ರ ಸ್ವಾಮಿ, ಶ್ರೀ ಭದ್ರ ಕಾಳೇಶ್ವರಿ ಹಾಗು ಗವಿರಂಗ ಕೆಂಚರಾಯಸ್ವಾಮಿ ದೇವತೆಗಳು ಆಲಯ ಪ್ರವೇಶ ಮಾಡಲಿವೆ.

ಅಂದು ಮಧ್ಯಾಹ್ನ 12 ಗಂಟೆಗೆ ಎಂ.ಶಿವರ ಗ್ರಾಮದ ಶ್ರೀ ದ್ಯಾವಮ್ಮ ಭಜನಾ ಮಂಡಳಿ ವತಿಯಿಂದ ಭಜನಾ ಕಾರ್ಯಕ್ರಮ, ದಡಿಘಟ್ಟ ಗ್ರಾಮದ ಶ್ರೀ ಲಕ್ಷ್ಮಿ ದೇವಿ ಕೋಲಾಟ ಸಂಘದ ವತಿಯಿಂದ ಕೋಲಾಟ ಕಾರ್ಯಕ್ರಮ, ಮಧ್ಯಾಹ್ನ 3 ಗಂಟೆಗೆ ದೇವಿಯ ಬೆಳ್ಳಿರಥ ಹಾಗು ಮುತ್ತಿನ ಪಲ್ಲಕ್ಕಿ ಉತ್ಸವ, ಮಡೆ ಉತ್ಸವ, ಬಾಯಿ ಬೀಗ, ನವದುರ್ಗಿ ಕುಣಿತ, ವೀರಗಾಸೆ ಹಾಗು ಭದ್ರಕಾಳಿ ಕುಣಿತವು ಉತ್ಸವದಲ್ಲಿ ಮೇಳೈಸಲಿವೆ.

ರಾತ್ರಿ 9 ಗಂಟೆಗೆ ರಾಜಾ ಸತ್ಯವ್ರತ ಅಥವಾ ಶನಿ ಪ್ರಭಾವ ಎಂಬ ಪೌರಾಣಿಕ ನಾಟಕವು ಪ್ರದರ್ಶನಗೊಳ್ಳಲಿದೆ.

ಅದಕ್ಕೂ ಮೊದಲು ವೇದಿಕೆ ಕಾರ್ಯಕ್ರಮ ಜರುಗಲಿದ್ದು ಆದಿಚುಂಚನಗಿರಿ ಹಾಸನ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ, ನುಗ್ಗೇಹಳ್ಳಿ ಪುರವರ್ಗ ಹಿರೇಮಠದ ಶ್ರೀ ಮಹೇಶ್ವರ ಸ್ವಾಮೀಜಿ, ತಂಡೆಕೆರೆ ಶ್ರೀ ಗಂಗಾಧರೇಶ್ವರ ಸ್ವಾಮೀಜಿ, ಕತ್ತರಿಘಟ್ಟದ ಮೆಳಿಯಮ್ಮ ಆಧ್ಯಾತ್ಮಿಕ ಕೇಂದ್ರದ ಶ್ರೀ ಚಂದ್ರಶೇಖರ ಗುರೂಜಿ, ಹಿರೀಸಾವೆ ಸಾಯಿಬಾಬಾ ಮಂದಿರದ ಗುರುಮೂರ್ತಿ ಗುರೂಜಿ, ಮಂಜುನಾಥಪುರ ಪುಣ್ಯಧಾಮದ ಧರ್ಮಾಧಿಕಾರಿ ಶ್ರೀಧರ ಸ್ವಾಮೀಜಿ ಹಾಗು ಶಾಸಕ ಸಿ.ಎನ್.ಬಾಲಕೃಷ್ಣ ಪಾಲ್ಗೊಳ್ಳಲಿದ್ದಾರೆ.

ಏ.1ರ ಬುಧವಾರ ಬೆಳಿಗ್ಗೆ ಕೊಂಡೋತ್ಸವ, ದೇವತೆಗಳ ಮಡಿಲಕ್ಕಿ ಉತ್ಸವ, ದೇವತೆಗಳ ಬೀಳ್ಕೊಡುಗೆ ಕಾರ್ಯಕ್ರಮ, ಅನ್ನ ದಾಸೋಹ ಹಾಗು ಮಹಾ ಮಂಗಳಾರತಿಯೊಂದಿಗೆ ಜಾತ್ರಾ ಮಹೋತ್ಸವಕ್ಕೆ ತೆರೆ ಬೀಳಲಿದೆ ಎಂದು ಕ್ಷೇತ್ರದ ಧರ್ಮದರ್ಶಿ ದೊರೆಸ್ವಾಮಿ ಸ್ವಾಮೀಜಿ ತಿಳಿಸಿದ್ದಾರೆ.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019